DELUXE
REGISTER

N.C. Desai
Balakrishna +
82, Silver Town
Gokul Road HUBLI

ಜೀವನದ ನೆನಪುಗಳು.

ನನ್ನ ಹಾಗು ನಮ್ಮ ಮನೆತನದ ಆದಿಯಿಂದ ಘಟನೆಗಳ ನೆನಪುಗಳನ್ನು ವಂಶವೃಕ್ಷದ ಬಗ್ಗೆ ಮುಂತಾದ ವಿಷಯಗಳನ್ನು ಒಂದೆಡೆ ಬರೆದಿಡಬೇಕೆಂದು ಬಹಳ ದಿನಗಳ ಹಂಬಲವಿತ್ತು, ಆದರೆ ಏನೇನೋ ಕಾರಣಗಳಿಂದ ಅದು ಕೈಗೂಡುತ್ತಿರಲಿಲ್ಲ. ಅದನ್ನು ಬರೆಯಬೇಕೆಂದೇ ಈ ಪುಸ್ತಕವನ್ನು ಖರೀದಿಸಿ ಕೆಲವರ್ಷಗಳೇ ಕಳೆದು ಹೋದರೂ ಕಾರ್ಯಗತವಾಗಿರಲಿಲ್ಲ. ಇವತ್ತು ಅಂದರೆ ದಿನಾಂಕ ೨೮-೧೧-೨೦೦೬ ರ ಷಷ್ಠಿಯಂದು ಇದ್ದಕ್ಕಿದ್ದಂತೆ ಆ ಯೋಜನೆ ನೆನಪಾಯಿತು ಪುಸ್ತಕ ಹೊರತೆಗೆದು ಪ್ರಾರಂಭವನ್ನಂತೂ ಮಾಡಿದ್ದೇನೆ, ಬರವಣಿಗೆ ಯಾವ ರೀತಿಯಲ್ಲಿ ಹೋಗುತ್ತದೆಯೋ ಆ ದಾರಿಯಲ್ಲಿ ನಡೆದರಾಯಿತೆಂದು ಈ ನೆನಪುಗಳನ್ನು- ಎಷ್ಟೂ ಇಲ್ಲದ ನಮ್ಮ ಚರಿತ್ರೆಯನ್ನು ಅಷ್ಟಿ ಬರೆಯುವದಕ್ಕೆ ವಿಶಿಷ್ಟ ಶೈಲಿಯಲ್ಲಿ ಬರೆಯುವದು ಎಂದು ನಿರ್ಧರಿಸಿಲ್ಲ - ಅದು ಹೇಗೇ ಮುಂದುವರಿಯುವದೋ ಹಾಗೆ ಬರೆಯುತ್ತ ಹೋಗುವದು ಎಂಬ ವಿಚಾರದಿಂದ ಬರೆಯಲು ಉದ್ಯುಕ್ತನಾಗಿದ್ದೇನೆ. ಘಟನೆಗಳನ್ನು [illegible] ಆಗಿಯೇ ಬರೆಯುವ ಉದ್ದೇಶ ಇಟ್ಟುಕೊಂಡಿಲ್ಲ ನೆನಪಾದಂತೆ ಬರೆಯುತ್ತ ಹೋಗುವದೆಂದು ವಿಚಾರಿಸಿದ್ದೇನೆ ಅಂದರೆ (Not in Sequens)

ನಮ್ಮದು ಹಾವೇರಿ ತಾಲೂಕು ಅಗಡಿ ಗ್ರಾಮದಲ್ಲಿದ್ದ ಮನೆತನ ನಮ್ಮ ಮನೆಯ ಅಡ್ಡಹೆಸರು "ಬಹದ್ದೂರದೇಸಾಯಿ" ಎಂದು ಈ ಮನೆತನಕ್ಕೆ ಐತಿಹಾಸಿಕ ಹಿನ್ನೆಲೆಯೂ ಇದೆ. ಅಂದರೆ ಈ ದೇಸಾಯರು ಹಾವನೂರಿನ ಸಂಸ್ಥಾನಿಕರಾಗಿದ್ದರು, ಸಾಧಾರಣ ಕ್ರಿ.ಶ. 1790(?) ಮೈಸೂರಿನ ಹುಲಿ ಎಂದು ಪ್ರಸಿದ್ಧನಾಗಿದ್ದ ಟಿಪ್ಪುಸುಲ್ತಾನನು, ದಂಡೆತ್ತಿ ಬಂದು ಒಂದು ತಿಂಗಳ ಯೋಜನೆ ಮಸಲತ್ತು ಮಾಡಿ- ಸಂಸ್ಥಾನಿಕನಾಗಿ 144 ಹಳ್ಳಿಯ ಒಡೆಯನಾಗಿದ್ದ ಹನುಮಂತಗೌಡನೆಂಬುವನನ್ನು ಸೋಲಿಸಿ ಅವನನ್ನು ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಕೊಲ್ಲಿಸಿದನೆಂಬ ಪ್ರತೀತಿ- ಇದಾದಮೇಲೆ ಸಂಸ್ಥಾನ ಹಾಳಾಯಿತು ನಂತರ ಬ್ರಿಟಿಶರು ಟಿಪ್ಪುವಿನ ಮೈಸೂರು ರಾಜ್ಯವನ್ನು ಕೈವಶಮಾಡಿಸಿದರು ಆ ಸಮಯ ಉತ್ತರ ಕರ್ನಾಟಕದ ಪ್ರದೇಶವೆಲ್ಲ ಮರಾಠಾ ಪೇಶ್ವೆಯವರ ಆಡಳಿತದಲ್ಲಿತ್ತು.

ಹಾವನೂರು ಸಂಸ್ಥಾನದ ಕೊನೆಯ ರಾಜ ಹನುಮಂತಗೌಡನನ್ನು ಕೊಲ್ಲಿಸಿದ ನಂತ ಆ ಮನೆತನದ ಮಹಿಳಾ ಸಮೂಹ ತುಂಗಭದ್ರೆಯ ದಂಡೆಯ ಮೇಲೆಯೇ ಇದ್ದ- ಕೋಟೆಯಲ್ಲಿಯ ಅರಮನೆಯಿಂದಲೇ ತುಂಗೆಗೆ ಹಾರಿ ಆತ್ಮಾರ್ಪಣೆ ಮಾಡಿಕೊಂಡರು. ಆದರೆ ಹನುಮಂತಗೌಡನಿಗೆ ಒಬ್ಬ ಮಗನಾಗಿದ್ದ ಲಿಂಗನಗೌಡ ಎಂದು ಅವನ ಹೆಸರು, ಸುದೈವದಿಂದ ಆ ಹುಡುಗನನ್ನು ಅರಮನೆಯ ಅಡಿಗೆಯವನಾಗಿದ್ದ ರಂಗಪ್ಪ ಎಂಬುವನು ಟಿಪ್ಪುವಿನ ಕಣ್ಣಿಗೆ ಬೀಳದಂತೆ ಬಚ್ಚಿಟ್ಟಿದ್ದನು ಯಾವಾಗ ಟಿಪ್ಪುವಿನ ಸದ್ದು ಅಡಗಿತೋ ಆಗ ಅಡಿಗೆಯ ರಂಗಪ್ಪ ಬಾಲಕ ಲಿಂಗನಗೌಡನನ್ನು ಬೈಲಿಗೆ ತಂದನಷ್ಟೇ ಅಲ್ಲ ಸಂಸ್ಥಾನದ ವಿಷಯವಾಗಿ ಅಭಿಮಾನ ತಾಳಿದ್ದವರನ್ನು ಕಲೆಹಾಕಿ ಮುಂದೆ ಏನು ಮಾಡುವದು ಎಂದು ಅವರೊಡನೆ ವಿಚಾರ ವಿನಿಮಯ ಮಾಡಿ ಇಂತ ಸಂಸ್ಥಾನಕ್ಕೆ ಗುರುಸ್ಥಾನದಲ್ಲಿದ್ದ ಹಾಗು ಪೇಶ್ವೆಯವರ ಮೇಲೆ ವರ್ಚಸ್ಸುಳ್ಳ ಅವಧೂತ ಪುರುಷ ಮೊರಗೋಡದ ಶ್ರೀ ಚಿದಂಬರ ಸ್ವಾಮಿಗಳಲ್ಲಿ ಹೋಗಿ ಅವರ ಸಲಹೆಯಂತೆ ನಡೆಯುವದೆಂದು ನಿರ್ಧರಿಸಿದರು, ದಾನು ರಂಗಪ್ಪನೇ ಲಿಂಗನಗೌಡನನ್ನು ಕರೆದುಕೊಂಡು ಮೊರಗೋಡಕ್ಕೆ ಹೋಗುವುದೆಂದೂ ನಿರ್ಣಯಿಸಿ

ದರು,

ರಂಗಪ್ಪ ತಡಮಾಡದೆ ಎರಡು ಕುದುರೆಗಳನ್ನು ಸಜ್ಜುಮಾಡಿಕೊಂಡು ಲಿಂಗನಗೌಡನೊಂದಿಗೆ ಮುರಗೋಡಕ್ಕೆ ತೆರಳಿದನು. ಅದೇ ಬ್ರಿಟಿಶರು ಭಾರತದಲ್ಲಿ ಬಲಾಢ್ಯರಾಗುವ ಕಾಲ ಇದ್ದ ಚಿಕ್ಕ ಸಂಸ್ಥಾನಿಕರನ್ನ ನೆಲೆಬಿಡಿಸುವ ಗತಿಯಿತ್ತು, ಅವರಿಗೆ ಶರಣಾಗದಿದ್ದವರ ಮೇಲೆ ದಂಡೆತ್ತಿ ಹೋಗುವದು ಇಲ್ಲವೇ ಕೋರ್ಟ್ ವ್ಯಾಜ್ಯದಿಂದ ಅವರಿಗೆ ತೊಂದರೆ ಕೊಡುವದು ಮುಂತಾದ ಕಾರ್ಯಗಳನ್ನು ಆಂಗ್ಲರು ಹಮ್ಮಿಕೊಂಡಿದ್ದರು ಹಾವನೂರು ಸಂಸ್ಥಾನದ ಗತಿಯನ್ನೇ ಅನುಭವಿಸಿ ಇನ್ನು ಎಷ್ಟೋ ಸಂಸ್ಥಾನಿಕರು ಕೂಡ ಸ್ವಾಮಿಯ ಮೊರೆ ಹೋಗಿದ್ದರು ಅಂಥ ಪರಿಸ್ಥಿತಿಯಲ್ಲಿ ರಂಗಪ್ಪ ಸ್ವಾಮಿಗಳನ್ನು ಕಂಡನು.

ಮಹಾಸ್ವಾಮಿಗಳಿಗೆ ಹಾವನೂರು ಸಂಸ್ಥಾನ ಅಪರಿಚಿತವಾಗಿರಲಿಲ್ಲ ಅವರು ಪರಮ ಭಕ್ತರಾಗಿದ್ದರಲ್ಲದೆ ಯಜ್ಞಮುಂತಾದ ಕಾರ್ಯಗಳಲ್ಲಿ ಆಗಾಗ ಪತ್ರದಿಂದ ಸೇವೆಸಲ್ಲಿಸಿದ-ವರಾಗಿದ್ದರು ಆಗ ಮಹಾಸ್ವಾಮಿಯು ರಂಗಪ್ಪ ಲಿಂಗನಗೌಡರನ್ನು ಹತ್ತಿರಕ್ಕೆ ಕರೆದು ಪ್ರೀತಿಪೂರ್ವಕವಾದ ಮಾತುಗಳನ್ನಾಡಿ ಮೋಡಿಲಿಪಿಯಲ್ಲಿ ಒಂದು ಚೀಟಿಯನ್ನು ಪೇಶ್ವೆಯವರಿಗೆ ಬರೆದು ಪುಣೆಗೆ ಹೋಗಲು ಹೇಳಿದರು, ಅವರೀರ್ವರೂ ಅವೇ ಕುದುರೆಗಳನ್ನೇರಿ ಪುಣೆಗೆ ಪ್ರಯಾಣ ಬೆಳೆಸಿದರು.

ಆಗ ಶ್ರೀ ಬಾಪು ಗೋಖಲೆಯ ಆಡಳಿತ, ಇವರೀರ್ವರೂ ಚಿದಂಬರ ಸ್ವಾಮಿಯ ಕಡೆಯಿಂದ ಬಂದವರೆಂದು ತಿಳಿದೊಡನೆ ಇವರನ್ನು ಕರೆದರು ಸ್ವಾಮಿಯ ಚೀಟಿಯನ್ನು ಓದುತ್ತಲೆ ನಿಜ ನಿಮ್ಮ ವಿಷಯ ನಮಗೆ ಗೊತ್ತು. ಆದರೂ ನಿಮ್ಮ ಸಂಸ್ಥಾನದ ವಿಷಯ ವಿವರವಾಗಿ ವಿಚಾರಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವದು ಆದ, ಆ ಕೆಲಸಮುಗಿಯುವರೆ ಸದ್ಯದ ಜೀವನಕ್ಕಾಗಿ ಒಂದು ಹಳ್ಳಿಯನ್ನು ನೀಡುತ್ತೇವೆ ಎಂದು ಹೇಳಿ- ಇಂಥದ್ದೇ ಹಳ್ಳಿಯೆಂಬುದನ್ನು ಹೆಸರಿಸಲಿಲ್ಲ, ಐದು ಹಳ್ಳಿಗಳ ಹೆಸರುಗಳನ್ನು ಸೂಚಿಸಿ ಅದರಲ್ಲಿಯ ಒಂದನ್ನು ತೆಗೆದುಕೊಳ್ಳುವಂತೆ ತಿಳಿಸಿದರು ಈ ನಿರ್ಣಯವನ್ನು ಕೇಳುತ್ತಲೇ ರಂಗಪ್ಪನಿಗೆ ದಿಗಿಲಾಯಿತು ಹೆಚ್ಚು ವಿಚಾರಮಾಡಲಿಲ್ಲ ಸ್ವಾಮಿಯನ್ನು ಕೇಳಿಯೇ ಯಾವ ಹಳ್ಳಿಯನ್ನು ತೆಗೆದುಕೊಳ್ಳುವದೆಂಬುವದನ್ನು ನಿರ್ಧರಿಸುವದು ಎಂದು ತೀರ್ಮಾನಿಸಿ ಮತ್ತೆ ಮುರಗೋಡಕ್ಕೆ ಬಂದರು ಆ ಮಹಾಸ್ವಾಮಿಯು ಅಗಡಿಯನ್ನು ತೆಗೆದುಕೊಳ್ಳಲು ಹೇಳಿದರು, ಅದರಂತೆ ಮತ್ತೆ ಪುಣೆಗೆ ಹೋಗಿ ಅಗಡಿಯನ್ನು ಸ್ವೀಕಾರಮಾಡಿ ಮರಳಿದರು.

ಈ ಮೊದಲಿನ ಇತಿಹಾಸ ಅಂದರೆ ಹಾವನೂರು ಸಂಸ್ಥಾನದ ನಿರ್ಮಾಣ ಆಸ್ತಿಕೆ ಸಂಸ್ಥಾನದ ಮೊದಲು ಈ ಮನೆತನದವರು ಎಲ್ಲಿಯವರು ಯಾವ ಕಡೆಗೆ ಹೇಗೆ ಬಂದರು ಹಾವನೂರು ಸಂಸ್ಥಾನದ ನಿರ್ಮಾಣದ ಮೊದಲಿನ ಕತೆ ಮುಂತಾದ ವಿವರ ಹೇಳುವ ಇತಿಹಾಸ ಪುಸ್ತಕರೂಪದಲ್ಲಿ ಬಂದಿದೆ, IBH ನವರು ಅದನ್ನು ಪ್ರಕಟಿಸಿದ್ದಾರೆ ನಾನು ಕೂಡ ಬರೆದಿದ್ದೇನೆ ಆದರೆ ಅಷ್ಟು ಹಾಕಿಲ್ಲ, ರಘುನಾಥ ಮಾಡಿಸಲಾಗಿದೆ ಹಾವನೂರು ಸಂಸ್ಥಾನ ೨ ಶತಮಾನ ಬಾಳಿದೆ ಅದರ ಎಲ್ಲ ವಿವರವೂ ಆ ಚಿಕ್ಕ ಹೊತ್ತಿಗೆಯಲ್ಲಿದೆ.

ಲಿಂಗನಗೌಡನು ಅಗಡಿಗೆ ಬಂದು ವಾಡೆಕಟ್ಟಿಸಿ ನೆಲಸಿದನು

ಅದರ ವಿವರ ಎಲ್ಲಿಯೂ ಸಿಕ್ಕುತ್ತಿಲ್ಲ ದಂತಕಥೆಯಾಗಿಯೂ ಗೊತ್ತಾಗಿಲ್ಲ ಲಿಂಗಣ್ಣನವನು ಅಗಡಿ ತೆಗೆದುಕೊಂಡನಂತರ ನಾನು ಐದನೆ ತಲೆಯವನು.

1) ಲಿಂಗಣ್ಣನವರು (2) ಚಿದಂಬರನವರು, (3) ರಾಮಣ್ಣನವರು. (4) ಚಿದಂಬರನವರ ಊರ್ಫ ಬಾಬಾಸಾಹೇಬರು ನನ್ನ ತಂದೆ. (5) ನಂತರ ನಾನು ನಾನಾಸಾಹೇಬ. ಚಿದಂಬರ ಬಹದ್ದೂರ ದೇಸಾಯಿ ಎಂದು ನನ್ನ ನಾಮಕರಣ ಮಾಡಿದ್ದಾರೆ

ನಾನು ಹುಟ್ಟಿದ್ದು ದಿನಾಂಕ ೪-ಏಪ್ರಿಲ್ ೧೯೨೪ರಂದು ಅಗಡಿಯಲ್ಲಿಯೇ ಜನನ ಪ್ರಮಾಣಪತ್ರವು ಕೂಡ ಲಭ್ಯವಿದೆ. ನನ್ನ ಬಾಲ್ಯವೆಲ್ಲ ಅಗಡಿಯ ವಾಡೆಯಲ್ಲಿಯೇ ಕಳೆದಿದೆ ಕನ್ನಡ ಗಂಡುಮಕ್ಕಳ ಶಾಲೆಯೂ ವಾಡೆಯಲ್ಲಿಯೇ ಇತ್ತು, (ಆ ಕಾಲದಲ್ಲಿ) ನಾನೂ ಆ ಶಾಲೆಯ ವಿದ್ಯಾರ್ಥಿ ಅಲ್ಲಿ ಆಗ ಕಮಡೊಳ್ಳಿ ಅಣ್ಣಪ್ಪನವರು ಶಿಕ್ಷಕರಿದ್ದರು, ಅವರ ಪತ್ನಿಯು ಹೆಣ್ಣುಮಕ್ಕಳ ಶಾಲೆಯಲ್ಲಿ ಅಧ್ಯಾಪಕಿ- ಇಬ್ಬರೂ ಒಂದೇ ಮನೆಯಲ್ಲಿಯೇ ಇರುತ್ತಿದ್ದರು.

ಕಮಡೊಳ್ಳಿಯವರಿಂದ ನನಗೆ ಮನೆಯಲ್ಲಿಯೂ ಪಾಠ ನಡೆಯುತ್ತಿತ್ತು ಆ ಶಿಕ್ಷಕರು ಆಗಾಗ ಅವರ ಪತ್ನಿಯು "ನಾನು ಬಹಳ ಚುರುಕುಬುದ್ಧಿಯ ಹುಡುಗ" ಎಂದು ಹೇಳಿ-ದ್ದನ್ನು ಕೇಳಿಸಿಕೊಂಡಿದ್ದೇನೆ. ಅಭ್ಯಾಸವು ಸುಗಮವಾಗಿಯೇ ಸಾಗಿತ್ತು---

ಕ್ರಿ.ಶ. 1931 ನೇ ಇಸ್ವಿ ಎಂದು ಕಾಣುತ್ತದೆ ಪ್ಲೇಗಿನ ಹಾವಳಿ ಸುತ್ತ ಮುತ್ತ ಪಸರಿತ್ತು, ಆ ಪಿಡುಗು ನಮ್ಮೂರಿಗೂ ಬಂತು, ಆ ರೋಗ ಬಂದರೆ ಊರು ಬಿಟ್ಟು ಹೊರವಲಯದಲ್ಲಿ ಗುಡಿಸಲು ಹಾಕಿಕೊಂಡು ರೋಗ ಹಿಮ್ಮೆಟ್ಟುವವರೆಗೂ ಜನ ಅಲ್ಲಿಯೇ ಇರಬೇಕು ಹಾಗೆ ಜನ ಊರು ಬಿಟ್ಟರು, ಆನಂದವನದ ಪಕ್ಕದಲ್ಲಿಯೇ ನಮ್ಮದು ಒಂದು ಮನೆ ಇತ್ತು, ತಂದೆಯವರೇ ಕಟ್ಟಿಸಿದ್ದು - "ಬಂಗಲೆ" (ಬಂಗ್ಲಾ) ಅದಕ್ಕೆ ಕರೆಯುತ್ತಿದ್ದರು ಅದು ಇದ್ದುದರಿಂದ ನಾವು ಗುಡಿಸಲು ಕಟ್ಟಿಸುವ ಅವಶ್ಯಕತೆ ಬೀಳಲಿಲ್ಲ - ಅಲ್ಲಿಯೇ ಪ್ರಾಣಿವಾಸವಾಗಿದೆವು ಆವಾಗೆಲ್ಲ ನಮ್ಮ ಕುಟುಂಬ Joint Family ಯಾಗಿತ್ತು ಎಲ್ಲರೂ ಅಲ್ಲಿಯೇ ಇದ್ದೆವು. ಎಲ್ಲ ವ್ಯವಸ್ಥೆಯು ಅಲ್ಲಿ ಅಳವಡಿಸಿದ್ದೆವು, ಭಾವಿ, ಶೌಚಾಲಯ, ಕೊಟ್ಟಿಗೆ ಇದ್ದವಲ್ಲದೆ ಸುತ್ತಲು ಬೈಲು ಜಾಗೆಯೂ ಸಾಕಷ್ಟು ಇತ್ತು, ನನ್ನ ತಂದೆಗೆ ಹೂವಿನ ತೋಟದ ಹುಚ್ಚು ಬಹಳ, ಸಾಧ್ಯ ಇದ್ದ ಹೂಗಿಡಗಳನ್ನು ಬೆಳೆಸಿದ್ದರು - ಬಂಗಲೆಯ ಸುತ್ತಲಿನ ಜಮೀನುಗಳು ನಮ್ಮವೇ ಆಗಿದ್ದವು, ಅವುಗಳ ವ್ಯವಸಾಯವನ್ನು ಸ್ವಂತವೆ ಮಾಡಿಸುತ್ತಿದ್ದೆವು. ಜೋಳವೇ ನಮ್ಮ ಮುಖ್ಯ ಬೆಳೆ!

ಅವಿಭಾಜ್ಯ ಕುಟುಂಬದಲ್ಲಿ: ನನ್ನ ತಂದೆ-ತಾಯಿ, ನಾನು ಹಾಗು ನನ್ನ ಇಬ್ಬರು ತಂಗಿಯಂದಿರು ಇಬ್ಬರು ಇದ್ದೆವು, ನನ್ನ ತಂದೆಗೆ ಇಬ್ಬರು ತಮ್ಮಂದಿರು. ಭಯ್ಯಾಸಾಹೇಬ ಊರ್ಫ ಬಸವನಗೌಡ ಎಂಬುವರು ಮೊದಲ ತಮ್ಮ ಇವರೀರ್ವರೂ ನನ್ನ ಅಜ್ಜ ರಾಮಣ್ಣಗೌಡರ ಮೊದಲ ಪತ್ನಿ ಅನ್ನಪೂರ್ಣಮ್ಮನವರ ಮಕ್ಕಳು ಅನ್ನಪೂರ್ಣಮ್ಮ ತೀರಿಕೊಂಡ ಮೇಲೆ ಅವರ ಖಾಸ ತಂಗಿ - ಜಾನಕಿಬಾಯಿಯವರನ್ನೇ ಮದುವೆಯಾಗಿದ್ದು ಅವರಿಬ್ಬರ ತೌರುಮನೆ ಕಮಡೊಳ್ಳಿಯದು, ಗುರುಗಳೂರ ತಂಗೆಂದಿರು - ಅಂದರೆ ಈಗಿರುವ ಶ್ರೀ N. ಆ. Kulkarni ಯವರ ಸೋದರತ್ತೆಯಂದಿರು. ಜಾನಕಿಬಾಯಿಯವರ ಹೊಟ್ಟೆಯಲ್ಲಿ ಲಿಂಗಣ್ಣಗೌಡರು ಒಬ್ಬನೆ ಗಂಡುಮಗ, ಕಮಲಾಬಾಯಿ, ಸುಂದರಾಬಾಯಿ, ಸರಸವ್ವ ಕುಶಲಾಬಾಯಿ ಶಾಂತಾಬಾಯಿ ಎಂಬ ಐದು ಹೆಣ್ಣುಮಕ್ಕಳು ಜನ್ನ

ಆಳಿದ್ದರು ಇವರೆಲ್ಲರ ಮದುವೆಗಳನ್ನು ನನ್ನ ತಂದೆಯವರೇ ನೆರವೇರಿಸಿದ್ದರು ಅವರನ್ನು ಎಲ್ಲೆಲ್ಲಿಗೆ ಕೊಟ್ಟಿತ್ತು ಎಂಬ ವಿವರವನ್ನು ಸಂದರ್ಭೋಚಿತವಾಗಿ ಮುಂದೆ ಬರೆಯುವೆ.

ಮೊದಲನೆಯ ಭೀಮ್ಯಾಸಾಹೇಬರ ಪತ್ನಿ ಗಂಗಾಬಾಯಿಯು ತೀರುವನೆ ಗಜೇಂದ್ರಗಡದ ಮನ್ನಿಯವರ ಮನೆತನ ಬಹಳ ಶ್ರೀಮಂತರು ಈ ಮದುವೆಯ ವಿಷಯವಾಗಿ ನಾಲ್ಕು ಮಾತು ಹೇಳುವದು ಅವಶ್ಯ ಆಗ ನನ್ನ ತಂದೆಯವರೇ ಹಿರಿತನ, ಶ್ರೀಮಂತಿಕೆ ವೈಭವದ ಮದುವೆಯನ್ನು ತಮ್ಮ ಅಂತಸ್ತಿಗೆ ಮಾಡಬೇಕೆಂಬ ಹಂಬಲ, ಆಗ ವಾಹನ ಸೌಕರ್ಯ ಇಂದಿನಷ್ಟು ಅನುಕೂಲವಾಗಿರಲಿಲ್ಲ - ಚಕ್ಕಡಿಗಳೇ ಅನುಕೂಲವಾದ ವಾಹನ ಈ ಮದುವೆಗೆ ಬಂದು ನೂರು ಚಕ್ಕಡಿಗಳು ಹೊರಟಿದ್ದವಂತೆ, ಹಜಾಮರು, ವಾಲಗದವರು, ಬಾರಕೇರರು, ಲಾ- ಅಲಂಕಾರರು ಮೊದಲಾದ ಎಲ್ಲರೂ ಈ ಸಮೂಹದಲ್ಲಿದ್ದರು ಅಂದರೆ ಯಾವುದಕ್ಕೂ ಬೇರೆಯವರನ್ನು ಕೇಳದಂತೆ Self Sufficient ಸಮೂಹ. ಈ ನೂರು ಚಕ್ಕಡಿಗಳು ಊರೊಳಗಿಂದ ಬರ- ಬಿಡುವದು ಸಾಧ್ಯವಿರಲ್ಲ ಎಲ್ಲಿಯಾದರು ಬೈಲುಜಾಗೆ ನೋಡಿ ವಸ್ತಿ ಮಾಡಿದರೆ ಅದೇ ಒಂದು ಊರಾಗಿ ಪರಿಣಮಿಸುತ್ತಿತ್ತಂತೆ. ಈ ರೀತಿಯ ಅಂದಾದುಂದಿ ಖರ್ಚು ಮಾಡುವ ತಾಕತ್ತು ಅವರಿಗಿತ್ತು!

ಅವರಿಗೆ ಬಾಪುಸಾಹೇಬ, ಮುರಲೀಧರ, ಕೃಷ್ಣಪ್ಪ, ನಾರಾಯಣ, ರಾಮಚಂದ್ರ ಎಂದು ೫ ಗಂಡುಮಕ್ಕಳು. ಅವರಲ್ಲಿ ನಾರಾಯಣ ಎಂಬುವನು ಧಾರವಾಡದಲ್ಲಿ ಸೈಕಲ್ ಅಪಘಾತದಲ್ಲಿ ಮೃತನಾದನು ಹೆಣ್ಣುಮಕ್ಕಳು, ಸೀತಾಬಾಯಿ, ಇಂದುಮತಿ, ಮುಕ್ತಾ ಎಂದು ಮೂವರು ಹೆಣ್ಣುಮಕ್ಕಳು

ಇನ್ನೊಬ್ಬ ತಮ್ಮ ಲಿಂಗನಗೌಡರ ಮದುವೆಯಾದದ್ದು ನನಗೆ ನೆನಪಿದೆ ಬಂಗಲೆಯಲ್ಲೇ ಆಯಿತು. ಅವರ ಪತ್ನಿ ಇಲಕಲ್ಲ ತೀರುವನೆಯವರು ಗೊಂಬಿ ಎಂಬುವವರ ಮನೆತನಕ್ಕೆ ಸೇರಿದವರು ಅವರಿಗೆ ಶಂಕರಗೌಡ, ಅಶೋಕ ಪ್ರಕಾಶ ಸುರೇಶ ಎಂಬ ನಾಲ್ಕು ಜನ ಗಂಡುಮಕ್ಕಳು ಪ್ರಭಾ ಮತ್ತು ಸುಧಾ ಎಂಬಿಬ್ಬರು ಹೆಣ್ಣುಮಕ್ಕಳು. ಇದಿಷ್ಟು ರಾಮನಗೌಡರ ತಳಿ (ನನ್ನ ಅಜ್ಜ)

ಇವರಲ್ಲಿ ಯಾರೂ ಹೆಚ್ಚು ವಿದ್ಯಾವಂತರಲ್ಲ ಆಸ್ತಿ ಇದೆ ನಮಗೇನು ಕಲಿಯುವ ಅವಶ್ಯಕತೆ ಇದೆ, ಕಲೆತು ನಾವೇನು ನವಕರಿ ಮಾಡಲಿಕ್ಕಿದೆಯ್ಯ ಎಂಬ ಸೊಕ್ಕು ಇವರನ್ನು ಅಶಿಕ್ಷಿತರನ್ನು ಮಾಡಿದ್ದು ಎಂಬುದು ನನ್ನ ಊಹೆ!

ಆದಿನ ಕಾಲದಲ್ಲಿ ಜಮೀನುಗಳಿಗಾ ಬಹಳ ಅದರ ಉತ್ಪನ್ನವೂ ಚೆನ್ನಾಗಿತ್ತು, ಆದರೆ ಕೂತುಉಂಡರೆ ಕುಡಿಕೆ ಹೊನ್ನು ಸಾಲದು ಎಂಬ ತತ್ವವನ್ನು ಈ ಜನ ಲಕ್ಷ್ಯಕ್ಕೆ ತಂದು ಕೊಂಡಿರಲ್ಲ ಎಂದು ತೋರುತ್ತದೆ. ಕೂಡು ಅನ್ನುವದು ಹಾಗು. ಮುಂಜಿ ಮದುವೆ ಹಬ್ಬ ಹುಣ್ಣಿಮೆಗಳಂಥ ಪ್ರಸಂಗದಲ್ಲಿ ದುಂದುವೆಚ್ಚ - ಈ ರೀತಿಯಲ್ಲಿ ನನ್ನವರೆಗೂ ಹೀಗೆ ನಡೆಯಿತು. ನನ್ನ ಕಕ್ಕಂದಿರ ಮಕ್ಕಳ ಪಾಡು ಅದೇಯೇ ಆಯಿತು ಈ ತಳಿಯ ಬಿ.ಎ.ದವರೆಗೆ ಓದಿದವನೆಂದರೆ ಒಬ್ಬನೇ ಒಬ್ಬ ನನ್ನ ಕಕ್ಕ ಲಿಂಗನಗೌಡರ ಮಗ ಅಶೋಕ ಒಬ್ಬನೇ ಮಾತ್ರ, ಅವನು ಕೂಡ ಕಮ-ಡೊಳ್ಳಿಯ N.G.Kulkarniಯವರ ಮನೆಯಲ್ಲಿದ್ದು ಹೆಬ್ಬಳ್ಳಿ ವಾಸ್ತವ್ಯ

ದಲ್ಲಿದ್ದು ಶಿಕ್ಷಣ ಮುಗಿಸಿದನು. ಮುಂದೆ ಉತ್ತಮ ನೌಕರಿ ಮಾಡಿದ್ದೂ ಅವನೇ ಮಾತ್ರ.

ಕೆಲ ಜಮೀನುಗಳು ಕೋರ್ಟಿನ ವ್ಯಾಜ್ಯದಲ್ಲಿಯೂ ಇನ್ನುಳಿದವುಗಳು ಭಾರತ ಸ್ವಾತಂತ್ರ್ಯವಾದಮೇಲೆ ಉಳುವವನೇ ಒಡೆಯ ಕಾಯದೆ ಬಂದಮೇಲೆ ಲಾವಣಿ ಮಾಡುತ್ತಿದ್ದ ರೈತರ ಪಾಲಾಗಿ - ಜಮೀನುಗಳು ಕರಗಿ ಹೋದವು. ಸಹಜವಾಗಿಯೇ ಬಡತನ ಮನೆಯನ್ನು ಆವರಿಸಿತು, ಒಂದು ರೀತಿಯ ನಿರ್ಗತಿಕತೆ ಕಾಲಿಟ್ಟಿತು. ಏನಾದರೂ ಉತ್ತಮ ನೌಕರಿ ಮಾಡಬೇಕೆಂದರೆ ಶಿಕ್ಷಣ ಇಲ್ಲ. ಇಂಥ ಪ್ರಸಂಗದಲ್ಲಿ [illegible] ನೌಕರಿ ಮಾಡಿ ಬದುಕಬೇಕಾಯಿತು. ಒಂದು ವೈಭವಪೂರ್ಣ ಮನೆತನ ಈ ರೀತಿಯಾಗಿ ಹೀನಾವಸ್ಥೆಗೆ ಬಂತು.! - ದಾರಿದ್ರ್ಯ ಪ್ರಾರಂಭವಾಯಿತು ಮನೆತನ ಮರ್ಯಾದೆಗೂ ಧಕ್ಕೆ ಬಂತು.

ನನ್ನ ಶಿಕ್ಷಣ ~~[illegible]~~ ಹೀಗಿನಿಂದಾಗಿ ಊರು ಬಿಟ್ಟು ಆನಂದವನದ ಮಧ್ಯದಲ್ಲಿ ಇದ್ದ ಬಂಗಲೆಯಲ್ಲಿಯೇ ಬಂದವರು ಉಳಿದ ಊರಜನ ತಮ್ಮ ತಮ್ಮ ಮನೆಗೆ ಮರಳಿದರೂ ನಮ್ಮ ತಂದೆ ಇಲ್ಲಿಯೇ ತಮ್ಮ ವಾಸ್ತವ್ಯವನ್ನು ಮುಂದುವರಿಸಿದರು. ಇಬ್ಬರು ಮಕ್ಕಳು ಆಗಿ ಉಳಿದವ ನಾನೊಬ್ಬನೇ ಅಷ್ಟು ದೂರ ಊರಲ್ಲಿ ಇದ್ದ ಶಾಲೆಗೆ ನನ್ನನ್ನು ಕಳಿಸಲು ನನ್ನ ತಾಯಿ ಒಪ್ಪಲಿಲ್ಲ, ದಡ್ಡನಾಗಲೀ ಹುಚ್ಚನಾಗಲೀ ನನ್ನ ಮಗ ಬದುಕಿ ಉಳಿದರೆ ಸಾಕು ಎಂಬುದೇ ನಮ್ಮ ತಾಯಿಯ ಅಪೇಕ್ಷೆ. ತಂದೆಯವರೂ ಮಗ ಕಲಿಯಲಿ ಎಂದು ಒತ್ತಾಯಿಸಲಿಲ್ಲ, ಜಮೀನುದಾರಿಕೆಯ ಪ್ರೌಢಿಮೆ ಅವರದಾಗಿರಬಹುದು! ಅಂತೂ ಪ್ರಾಥಮಿಕ ಶಿಕ್ಷಣದ ಇತಿಶ್ರೀ ಹೀಗಾಯಿತು. ಆನಂದವನ ಪರಿಸರದಲ್ಲಿ ಅಲ್ಲಿದ್ದ ಹುಡುಗರ ಜೊತೆ "ಗಿಡ-ಮಂಗನ ಆಟ" ಆಡುವುದಾಯಿತು. - ಆದರೂ - ಸ್ವಾಮಿಯ ಸೇವೆಯ ಸಂದರ್ಭ ತಕ್ಕಮಟ್ಟಿಗೆ ಒದಗಿಬಂತು. ಹಾಡು ಸೋಮಣ್ಣನ (S.H. Kulkarni) ಗಾಢ ಸ್ನೇಹ ಇಲ್ಲಿಯೇ ಒದಗಿಬಂತು ತಾಯಿ ಸತ್ತ ಮಗ ಎಂದು ಅವನ ಚಿಕ್ಕಮ್ಮ ಹಾಗು ಶೇಷಾಚಲ ಸಾಧುಗಳ ಸೇವಕಿಯರಾಗಿದ್ದ ವೆಂಕೂಬಾಯಿಯವರು ಅವನನ್ನು ತಮ್ಮ ಬಳಿಯಲ್ಲಿಟ್ಟುಕೊಂಡಿದ್ದರು. ಮೂಲತಃ ಸೋಮಣ್ಣ ತ್ಯಾಲಕೊಂಡದವನು. ಅವನ ತಂದೆ ಬೇರೆ ಮದುವೆಯಾಗಿದ್ದರು.

ಈ ಸಮಯದಲ್ಲಿ ಮನೆಯಲ್ಲಿದ್ದ ಬೇಸಾಯ (ಒಕ್ಕಲುತನ)ದ ಕಾರ್ಯವನ್ನು ನಾವು ನೋಡಿಕೊಳ್ಳುತ್ತಿದ್ದೆ. ಬಂಗಲೆಯ ಸುತ್ತಮುತ್ತಲಿನ ಕೆಲ ಜಮೀನುಗಳನ್ನು ನಾವೇ ಸ್ವಂತ ಸಾಗು ಮಾಡುತ್ತಿದ್ದೆವು

ಶಾಲಾ ಶಿಕ್ಷಣ ಮುಗಿದರೂ ಆನಂದವನದ ಹತ್ತಿರದ ವಾಸ್ತವ್ಯ ನನಗೆ ಇನ್ನೊಂದು ರೀತಿಯಲ್ಲಿ ಲಾಭದಾಯಕವಾಯಿತು! ಅಲ್ಲಿದ್ದ ಸದ್ಬೋಧ ಚಂದ್ರಿಕೆ ಕಾರ್ಯಾಲಯ ಹಾಗು ಅಲ್ಲಿಗೆ ಚಂದ್ರಿಕೆಗೆ ವಿನಿಮಯವಾಗಿ ಬರುತ್ತಿದ್ದ ಇತರೆ ಪತ್ರಿಕೆಗಳು ನನಗೆ ಓದಲು ಲಭ್ಯವಾಗುತ್ತಿದುದೊಂದು ವಿಶಿಷ್ಟ ಸೌಕರ್ಯವಾಗಿ ಪರಿಣಮಿಸಿದ್ದು ಈ ಸಂದರ್ಭ ಪರೋಕ್ಷವಾಗಿ ನನ್ನಲ್ಲಿ ಸಾಹಿತ್ಯದ ಅಭಿರುಚಿಯನ್ನು ಉಂಟುಮಾಡಿರಬೇಕೆಂದು ಅನಿಸುತ್ತದೆ!

ಪತ್ರಿಕೆಗಳಲ್ಲದೇ ಅಲ್ಲಿದ್ದ ಗಳಗನಾಥರ, ಮತ್ತಿತರರ ಕಾದಂಬರಿಗಳನ್ನು ಓದುವ ಭಾಗ್ಯ ನನ್ನದಾಗಿತ್ತು. ಈಗ ನನ್ನಲ್ಲಿ ಆಗಿರುವ ಸಾಹಿತ್ಯಕ ಪ್ರವೃತ್ತಿಗೆ ಆ ಸಂದರ್ಭ ಮೂಲವಾಯಿತೇನೋ? ಎಂದೆನಿಸುತ್ತದೆ.

ಈ ರೀತಿಯಾಗಿ ನಾನು ಶಾಲೆಗೆ ಹೋಗದಿದ್ದರೂ ಶಾಲಾ ಶಿಕ್ಷಣದ ಹೊರತಾಗಿ ಭಾಷಾ-ಶಿಕ್ಷಣ, ಸಾಹಿತ್ಯಿಕ ಪರಿಚಯ ನನ್ನಲ್ಲಿ ನನಗರಿವಿಲ್ಲದೆ ಬೆಳೆದುಕೊಂಡು ಬರುತ್ತಿತ್ತು, ಆದರೂ ಈ ಸಂದರ್ಭದಲ್ಲಿ ಯಾವ ವರ್ಷವೆಂಬುದು ಖಚಿತವಾಗಿ ನೆನಪಿಲ್ಲ ~~ಆದರೆ~~ ಮತ್ತೆ ಶಾಲೆಯ ಶಿಕ್ಷಣ ಮುಂದುವರಿಸುವ ಸುಯೋಗ ಒಂದು ಬಂದೂ ಮಾಯವಾಯಿತು, ನನ್ನ ತಂದೆಯವರು ಪ್ರಸಿದ್ಧ ಶಿಕ್ಷಣ ತಜ್ಞರೂ ಸಾಹಿತಿಗಳೂ, ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಬೆಂಗಳೂರಿನಲ್ಲಿದ್ದರು ಎಂದು ಕಾಣುತ್ತದೆ T.S. ವೆಂಕಣ್ಣಯ್ಯನ ಅವರ ಮನೆಯಲ್ಲಿದ್ದು ಕಲಿಯುತ್ತಿದ್ದರೆಂದು ಕಾಣುತ್ತದೆ. 1918ರಲ್ಲಿ ನನ್ನ ಅಪ್ಪ ಹಾಗು ~~ಅವ~~ ಅಮ್ಮ ಅಲ್ಪಕಾಲಾವಧಿಯಲ್ಲಿ ತೀರಿಕೊಂಡಿದ್ದರಿಂದ - ತಂದೆಯವರು ಶಿಕ್ಷಣ ಅಲ್ಲಿಗೇ ಮುಗಿಸಿ ಊರಿಗೆ ಮರಳಿರಬಹುದೆಂದು ನನ್ನ ಊಹೆ. ಈ ವಿಷಯ ಖಚಿತವಾಗಿ ತಿಳಿದಿಲ್ಲವಾದ್ದರಿಂದ ಅದನ್ನು ವಿವರವಾಗಿ ಬರೆಯುತ್ತಿಲ್ಲ.

ಪ್ರೊ. ವೆಂಕಣ್ಣಯ್ಯನವರ ಮನೆತನಕ್ಕೂ ನಮ್ಮ ಮನೆತನಕ್ಕೂ ಏನು ಸಂಬಂಧ, ಯಾವ ಸಂಬಂಧ ಎಂಬುದನ್ನು ತಿಳಿಸಲೇಬೇಕು. ವೆಂಕಣ್ಣಯ್ಯನವರ ತಂದೆಯವರು ಶೇಷಾಚಲ ಸಾಧುಗಳ ಪರಮಭಕ್ತರು. ಅವರ ಮನೆತನ ಉದ್ಧಾರವಾದದ್ದು ಸಾಧುಗಳ ಕೃಪಾಶೀರ್ವಾದದಿಂದ ಎಂದು ಹಿರಿಯರಿಂದ ಕೇಳಿ ತಿಳಿದ ನೆನಪು. ವೆಂಕಣ್ಣಯ್ಯನವರ ಪೂರ್ಣ ಹೆಸರು ಇಂತಿದೆ, ತಳುಕಿನ - ಸುಬ್ಬರಾಯರ ಮಗ ವೆಂಕಣ್ಣಯ್ಯ ಎಂದು. ಕನ್ನಡ ಸಾಹಿತ್ಯ ಲೋಕದಲ್ಲಿ ಅವರ ಹೆಸರು ಅಜರಾಮರ.

ಅವರ ತಮ್ಮಂದಿರೇ ತ.ಸು. ಶಾಮರಾಯರು - ಅವರು ಕನ್ನಡ ಸಾಹಿತಿಗಳು ಅವರು ಶಿಕ್ಷಣ ತಜ್ಞರು ಅವರು ಬೆಂಗಳೂರಲ್ಲೋ ಮೈಸೂರಲ್ಲೋ, ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು, ದಾವಣಗೆರೆಯ ಹೊಸದಾಗಿ ಸರಕಾರಿ ಕಾಲೇಜು ಪ್ರಾರಂಭವಾದಾಗ ಶಾಮರಾಯರು ಒಬ್ಬ ಪ್ರಾಧ್ಯಾಪಕರಾಗಿ ಅಲ್ಲಿಗೆ ಬಂದರು ಈ ಸುಸಂಧಿಯನ್ನು ಉಪಯೋಗಿಸಿಕೊಳ್ಳಬೇಕೆಂದು ನಮ್ಮ ತಂದೆಯವರು ಅವರಲ್ಲಿ ಹೋಗಿ ನನ್ನನ್ನು ಅವರ ಮನೆಯಲ್ಲಿಟ್ಟು ವಿದ್ಯಾಭ್ಯಾಸದ ಅನುಕೂಲ ಮಾಡಿಕೊಡಲು ಕೇಳಿಕೊಂಡಿದ್ದರು ಅದಕ್ಕೆ ಶಾಮರಾಯರು ಮತ್ತು ಅವರ ಪತ್ನಿ ಬಹು ಸಂತೋಷದಿಂದ ಒಪ್ಪಿದ್ದರು, ನನ್ನನ್ನು ದಾವಣಗೆರೆಗೆ ಕಳಿಸುವ ಎಲ್ಲ ಸಿದ್ಧತೆಗಳೂ ಮುಗಿದಿದ್ದವು ಇನ್ನೇನು ಎರಡು ಮೂರು ದಿನಗಳಲ್ಲಿಯೇ ನಾನು ಹೊರಡಬೇಕು. ಆದರೂ ವಿಧಿ, ನನ್ನ ಬೆನ್ನು ಬಿಟ್ಟಿರಲಿಲ್ಲ!

ನನ್ನ ಬಲಗಣ್ಣು ಊದಿತು, ಹಾಗು ಕೆಳಗಡೆ ರೆಪ್ಪೆಯಿಂದ ಕೆಟ್ಟ ರಕ್ತ - ಕೀವು ಬರಲು ಪ್ರಾರಂಭವಾಯಿತು. ಆವಾಗ ಹಾವೇರಿಯಲ್ಲು ಕನ್ನಡ ಅಲೋಪತಿ ಡಾಕ್ಟರುಗಳು ಅಷ್ಟು ಹೆಚ್ಚು ಸಂಖ್ಯೆಯಲ್ಲಿರಲಿಲ್ಲ, ಯಾವುದೋ ಕಾಲೇಜಿನಿಂದ ಒಬ್ಬ ಆಯುರ್ವೇದ ವೈದ್ಯರು ಬರುತ್ತಿದ್ದರು ಅವರಿಗೆ ಬುಲಾವಣೆ ಹೋಯಿತು ಅವರು ಕುದುರೆ ಟಾಂಗಾದಲ್ಲಿ ಬಂದರು ಅದೇ ಅವರ ವಾಹನವಾಗಿತ್ತು, ಸುತ್ತಮುತ್ತಲ ಹಳ್ಳಿಗಳಿಂದ ಅವರಿಗೆ ಬೇಡಿಕೆ ಬರುತ್ತಿತ್ತು, ವೈದ್ಯರು ಹೇಳಿದರು ಇದೇನೂ ಅಂಥ ದೊಡ್ಡ ರೋಗವಲ್ಲ - ದುರ್ಮಾಂಸ ಬೆಳೆದಿದೆ 3-4 ದಿನಗಳಲ್ಲಿ ಕಡಿಮೆಯಾಗುತ್ತದೆ ಎಂದು ಹೇಳಿದರೂ ಕೂಡ, ನನ್ನ ತಾಯಿ ನನ್ನನ್ನು ಕಳಿಸಲು ಒಪ್ಪಲಿಲ್ಲ ಇದ್ದ ಒಬ್ಬ ಕಣ್ಮಣಿಗೆ ಇರಲಿ ದೂರದ ಊರಲ್ಲಿ ಏನಾದರೂ ತೊಂದರೆಯಾದರೆ ಹೇಗೆ? ಎಂಬ ಚಿಂತೆ ಅದೇ ತಳಹದಿಮೇಲೆಯೇ ದಾವಣಗೆರೆಗೆ ಕಳಿಸುವುದನ್ನು ರದ್ದು ಪಡಿಸಿದರು ಶಿಕ್ಷಣಕ್ಕಾಗಿ ಒದಗಿಬಂದ ಮತ್ತೊಂದು ಯೋಗವು ಕೈಬಿಟ್ಟು ಹೋಯಿತು.

ಒಂದು ವೇಳೆ ನಾನು ದಾವಣಗೆರೆಗೆ ಹೋಗಿ ಟಿ.ಸು. ಶಾಮರಾಯರಂಥವರ ಕೈಯಲ್ಲಿ ಕಲಿತು, ಅಂಥವರ ದೇಖರೇಖಿಯಲ್ಲಿ ಬೆಳೆದಿದ್ದರೆ ನನ್ನ ಜೀವನದ ದಿಕ್ಕೇ ಬದಲಾಗುತ್ತಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಆದರೆ ನಸೀಬ ಖೊಟ್ಟಿ! -ಯೋಗವಿತ್ತು!

ಆಗಿನ ಕಾಲದಲ್ಲಿ ನಮ್ಮೂರ ಪ್ರಾಥಮಿಕ ಶಾಲೆ, ಉತ್ತಮ ಶಿಕ್ಷಣಕ್ಕೆ ಪ್ರಸಿದ್ಧಿಯಾಗಿತ್ತು, ಉತ್ತಮ ಶಿಕ್ಷಕರೂ ಸುದೈವದಿಂದ ಈ ಶಾಲೆಗೆ ವರ್ಗವಾಗಿ ಬರುತ್ತಿದ್ದರು. ಅಲ್ಲದೇ ಆ ಶಿಕ್ಷಕರು ಆಸ್ಥೆಯಿಂದ ಪಾಠ ಹೇಳುತ್ತಿದ್ದರು - ಮುಲ್ಕೀ ಪರೀಕ್ಷೆಗಂತೂ ಪರಊರ ವಿದ್ಯಾರ್ಥಿಗಳೂ ಬರುತ್ತಿದ್ದರು! ಆ ಕಾಲದಲ್ಲಿ ರಾ. ದೆ. ಕುಲಕರ್ಣಿಯೆಂಬುವರು ಮುಖ್ಯಾಧ್ಯಾಪಕರಾಗಿದ್ದರು (ಬ್ರಾಹ್ಮಣರೆ ಆಗಿದ್ದು ವೈಷ್ಣವರಾಗಿದ್ದರು ಸಹಜವಾಗಿಯೇ ಕಟ್ಟಾ ಮಡಿವಂತರಾಗಿದ್ದರು) ಶಾಲೆಗೆ ಬರುವಾಗ ಹಾಕುವ ಪೋಷಾಕೇ ಬೇರೆ ಮನೆಗೆ ಹೋಗಿ ಅವನ್ನು ಬದಲಾಯಿಸಿ ಸ್ನಾನವಾದ ಮೇಲೆಯೇ ಮುಂದಿನ ಮನೆಗೆಲಸ- ಶಾಲೆಯಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳೂ ಇರುತ್ತಿದ್ದರೆಂಬುದೇ ಇದರ ಹಿನ್ನೆಲೆ! ಅದೇ ಸಮಯದಲ್ಲಿ ಪುರಾಣಿಕ, ರಾ.ನ. ಗುಡಿ, ವರಹಮ್ಮ, ಆರ್ ಎಂಬ ಮುಂತಾದ ಕೆಲ ಶಿಕ್ಷಕರೂ ಇದ್ದರು ಎಲ್ಲರದೂ ಅಷ್ಟೇ ಆಸ್ಥೆ. ರಾ.ನ. ಗುಡಿಯವರಿಗೆ ಚಿತ್ರಕಲೆಯಲ್ಲಿ ಒಂದಿಷ್ಟು ಆಸ್ಥೆ ಇತ್ತು ಹೀಗಾಗಿ ಹಿಂದುಗಡೆಯಿಂದ ಅಂದರೆ ನನ್ನ ಚಿತ್ರಕಲೆಯಲ್ಲಿಯ (ಪ್ರತಿಭೆಯನ್ನು) ಗುರುತಿಸಿದ ನಂತರ ನನಗಿಷ್ಟು ಆ ವಿಷಯದಲ್ಲಿ ದಾರಿ ತೋರಿಸಿದ್ದು ಉಂಟು!

ನನಗೆ ನೆನಪಿದ್ದ ಮಟ್ಟಿಗೆ ಪರಊರಿಂದ ಬಂದ ವಿದ್ಯಾರ್ಥಿಗಳಲ್ಲಿ ಯಲಗಚ್ಚಿನ ಮಧ್ವಾಚಾರಿಯೆಂಬುವನೂ ಒಬ್ಬ ನಮ್ಮಿಬ್ಬರ ಸ್ನೇಹ ಬೆಳೆಯಿತು ಅದು ಹುಬ್ಬಳ್ಳಿಯ ವಾಸದಲ್ಲಿ ಗಾಢವಾಯಿತು ಹುಬ್ಬಳ್ಳಿಗೆ ಹೋದದ್ದಾಗ ಅಲ್ಲಿ ಮನೆ ಮಾಡಿದ್ದು ಒಂದು ವಿಚಿತ್ರ ಪರಿಸ್ಥಿತಿಯಲ್ಲಿ!

1939ನೇ ಇಸ್ವಿ ಯಾವ ತಿಂಗಳೆಂಬುದು ನೆನಪಿಲ್ಲ - ತಂದೆಯವರ ಮೂಲವ್ಯಾಧಿ ಬಹಳವಾಯಿತು ಅದಕ್ಕೆ ಶಸ್ತ್ರಕ್ರಿಯೆಯೇ ಆಗಬೇಕೆಂದು ಡಾ|| ರುಗ್ವೆ ಸಲಹೆ ನೀಡಿದರು ಅಂಥ ಕ್ರಿಯೆಯ ಚಿಕಿತ್ಸೆಗೆ ಹುಬ್ಬಳ್ಳಿಗೆ ಬರಬೇಕು ಅಲ್ಲದೆ ನಮ್ಮ family Dr. ಕೂಡ Dr. Sontake ಎಂಬುವರು ಹುಬ್ಬಳ್ಳಿಯಲ್ಲಿಯೇ ಇದ್ದರು ತಂದೆಯವರ ಶಸ್ತ್ರಕ್ರಿಯೆಗಾಗಿ ನಾವೆಲ್ಲ ಹುಬ್ಬಳ್ಳಿಗೆ ಬಂದೆವು,

ಆಗ ಹೆಬಸೂರ ಭೀಮರಾಯರು PWD ಯಲ್ಲಿ Superwiser ಎಂದು ನೌಕರಿ ಮಾಡುತ್ತಿದ್ದರು, ಅವರಿಗೆ ಈದಗಾ ಮೈದಾನದ ಹತ್ತಿರ Quartersನ್ನು ಕೊಟ್ಟಿದ್ದರು treatmentಗೆಂದು ಹೋದಾಗ ಹೋದ ನಾವೆಲ್ಲ ಅವರಲ್ಲಿಯೇ ವಸ್ತಿ ಮಾಡಿದ್ದೆವು, ಆದರೆ ನಾವೆಲ್ಲ ಎಷ್ಟು ಜನ ಹೋಗಿದ್ದೆವು ಎಂಬುದು ನೆನಪಿಲ್ಲ. ಆಪ್ರೇಶನ್ನಾಯಿತು ವ್ಯಾಧಿ ಕಡಿಮೆಯಾದ ನೆನಪು, ಆದರೆ ಪ್ಲೇಗ ಬಂದಾಗ ಊರು ಬಿಟ್ಟು ಆನಂದವನ ಪಕ್ಕದ ಬಂಗಲೆಯಲ್ಲಿ ಉಳಿದಂತೆ, ತಂದೆಯವರು ಹುಬ್ಬಳ್ಳಿಯಿಂದ ಊರಿಗೆ ಮರಳಲು ಮನಸ್ಸು ಮಾಡಲಿಲ್ಲ, ಬಹಳ ದಿನ ಬೇರೆಯವರ ಮನೆಯಲ್ಲಿ ಇರುವಂತೆಯೂ ಇಲ್ಲ

ಆ ಸಂದರ್ಭ ನನ್ನ ತಂದೆಯವರ ಎರಡನೇ ಮಿಸ್ಸೆಸ್ ಬನಾಬಾಯಿಯೆಂಬವಳ ತಾಯಿ ಮನೆಯಲ್ಲಿದ್ದೆವು, ಅವಳು ಮುಸ್ಲಿಮ ಮಹಿಳೆ ಅವಳು ನಮ್ಮ ತಂದೆಗೆ ಮಿಸ್ಸೆಸ್!

ಹೇಗೆ ನಮ್ಮಲ್ಲಿ ಬಂದಿದ್ದಳು ಎಂಬುದನ್ನು ಪ್ರತ್ಯೇಕ ಒಂದು ಅಧ್ಯಾಯದಲ್ಲಿಯೇ ಬರೆಯುತ್ತೇನೆ ಅಂತು ಆಗ ಅವರ ಮನೆಯಲ್ಲಿದ್ದೆವು - ಅವರ ಮನೆ ಕಿಲವಂತೆಗಲ್ಲಿಯಲ್ಲಿದೆ

ಕೆಲಕಾಲ ~~ಕು~~ಕುಟುಂಬದವರೆಲ್ಲ ಅಲ್ಲಿಯೇ ಇದ್ದೆವು ಆಗ ನಮ್ಮ ಬಹಳ ಕಷ್ಟದ ಕಾಲ ದೊಡ್ಡ ಜಮೀನುದಾರರಾಗಿದ್ದರೂ ಒಂದು ಹಳೆಯ ವ್ಯಾಜ್ಯದಿಂದಾಗಿ 1936ನೇ ಇಸವಿಯಲ್ಲಿ ಕೋರ್ಟ ಡಿಕ್ರಿ ಪ್ರಕಾರ ವಿರೋಧಪಕ್ಷದವರಾದ ಕಾವೇಲವಳ್ಳಿ ನೆಲವಿಗಿ ಎಂಬುವರು ನಮ್ಮ ಆಗ ಹಿರಿಯರಾದ 3 ಜನರ (ತಂದೆ ಇಬ್ಬರು ಚಿಕ್ಕಪ್ಪಂದಿರು) ಆಸ್ತಿಯಲ್ಲಿ 900 ಎಕರೆ ಜಮೀನುಗಳನ್ನು ಪೀಕಿನ ಸಹಿತ ಕಬ್ಜಾ ತೆಗೆದುಕೊಂಡರು. ಇದೇ ನಮ್ಮ ಮನೆತನದ ಅವನತಿಗೆ ಕಾರಣವಾಯಿತು - ನಂತರ ಕೋರ್ಟಿನಲ್ಲಿ ಈ ವ್ಯಾಜ್ಯ ಸೋಲಾದಮೇಲೆ ಆ ಡಿಕ್ರಿ ವಿರುದ್ಧ ಮೇಲಿನ ಕೋರ್ಟಿಗೆ ಅಪೀಲ ಹೋಗಲು ಉಳಿದ ಜಮೀನುಗಳನ್ನು ಸಿಕ್ಕಾಪಟ್ಟೆ ಕೈಗೆ ಬಂದಂತೆ ಅಗ್ಗದ ಬೆಲೆಗೆ ಮಾರಿದ್ದರಿಂದ, ಉಳಿದಿದ್ದ ಜಮೀನುಗಳಿಂದಲೂ ಬರುವ ಆದಾಯ ಇಲ್ಲದಂತಾಯಿತು. ಹೀಗಾಗಿ ಮನೆಯಲ್ಲಿ ಬಡತನ ನೃತ್ಯವಾಡತೊಡಗಿತು.

ಈ ಸಂದರ್ಭದಲ್ಲಿ ಮನೆಯಲ್ಲಿ ಇದ್ದಬಿದ್ದ ಬೆಳ್ಳಿ ಬಂಗಾರ ಮಾರಿ (ಹುಬ್ಬಳ್ಳಿಯ) ಸಂಸಾರ ನಡೆಸಿದರು ಎಂದು ಕಾಣುತ್ತದೆ, ಆಗ ಸರಾಫಗಟ್ಟಿಯಲ್ಲಿ (ಹುಬ್ಬಳ್ಳಿ) ಬೆಳಮಕರ್ ಎಂಬುವರ ಒಂದು ಸರಾಫಿ ಅಂಗಡಿಯಿತ್ತು ಅವರಲ್ಲಿಗೆ ತಂದೆಯವರು ಮಾರುವ ಸಾಮಾನುಗಳೊಂದಿಗೆ ನನ್ನನ್ನೇ ಕಳಿಸುತ್ತಿದ್ದರು. ಹಿಂದೆ ಅಷ್ಟು ವೈಭವದಿಂದ ಮೆರೆದ ಈ ಮನೆತನ ಈ ರೀತಿಯ ಅವನತಿಹೊಂದುತ್ತ ನಡೆಯಿತು

ವೈಭವದಿಂದ ನಡೆದ ಮನೆತನ ಎಂಬುವ ಸಂದರ್ಭ ಇಲ್ಲಿಯವರೆಗೆ ಬರೆದ ಪ್ರಕರಣಗಳಲ್ಲಿ ನಮೂದ ಆಗಿಲ್ಲ ಸಂದರ್ಭೋಚಿತವಾಗಿ ಬರೆಯುತ್ತೇನೆ ಬರೆಯುವುದು ಅವ್ಯ

ಬನುಬಾಯಿಯು ತಾಯಿಮನೆಯ ಅಡ್ಡಹೆಸರು "ಮಿರ್ಜೀಕರ" ಎಂದು ಮನಿ ಹಿರಿಯ ಆರತಿಹೊಣಿದ್ದ ಅವಳಿಗೆ ತಂಗೆಂದಿರಿದ್ದರು - ಒಬ್ಬ ತಮ್ಮನೂ ಇದ್ದ ರಾಜಾಸಾಬ ಎಂದು ಅವನ ಹೆಸರು ಈಗಿನ ಗಾಂಧಿ ಬಜಾರಲ್ಲಿ ಒಂದು ಉಣ್ಣಿಗಡ್ಡಿ ಹೋಲಸೇಲ ವ್ಯಾಪಾರಸ್ಥರಲ್ಲಿ ನೌಕರಿ ಮಾಡುತ್ತಿದ್ದ, ನನ್ನೊಂದಿಗೆ ಸ್ನೇಹಪೂರ್ವಕವಾಗಿಯೇ ಇದ್ದ

ಹುಬ್ಬಳ್ಳಿಯ ಮನೆಯನ್ನು ಯಾವಾಗ ಬಂದು ಮಾಡಿದರು ಎಂಬುದು ನೆನಪಿಲ್ಲ ಆದರೆ ನಾನು ಹಟಹಿಡಿದು ಕಲಿಯುವುದನ್ನು ಮುಂದರಿಸುವೆನೆಂದು ಹಟ ಹಿಡಿದಿದ್ದ ಆಗ ನನಗೆ ವ್ಹರ್ನ್ಯಾಕ್ಯುಲರ್ ಮಿಡಲ್ ಶಾಲೆಯಲ್ಲಿ ನನ್ನನ್ನು ಸೇರಿಸಿಕೊಳ್ಳಲು ಒಪ್ಪುತ್ತಿರಲಿಲ್ಲ

ಕೃಷ್ಣ ಮಧ್ವಮನ್ನಾರಿ ಎಂಬುವನು ನಮ್ಮೂರಲ್ಲಿ ಕಲಿಯುತ್ತಿದ್ದವನು ಮುಲ್ಕಿ ಪರೀಕ್ಷೆ ಮುಗಿಸಿ ಹೈಸ್ಕೂಲ ಅಭ್ಯಾಸಕ್ಕೆ ಹುಬ್ಬಳ್ಳಿಗೆ ಬಂದಿದ್ದನು ಹೊಸ ಹುಬ್ಬಳ್ಳಿಯ ಓಣಿಯಲ್ಲಿ ಕಟಕೋಳ ಎಂಬುವವರ ಮನೆಯಲ್ಲಿರುತ್ತಿದ್ದನೆಂಬ ನೆನಪು. ಇನ್ನೊಬ್ಬ ಇಂಗ್ಲೀಷ ಹೈಸ್ಕೂಲಿನ ವಿದ್ಯಾರ್ಥಿಯಾಗಿ ಅಗಡಿಯ ಹಳೆ ಸ್ನೇಹ ಇಲ್ಲಿಯೂ ಮುಂದುವರೆಯಿತು, ಮನ್ನಾಕಿ ಪಿ.ಕೆ. ಬೆಂಗೇರಿ ಎಂಬುವನ ಹೊಸ ಸ್ನೇಹವಾಯಿತು. ಆ ಬೆಂಗೇರಿಯ ತಂದೆ K.P ಬೆಂಗೇರಿ ಎಂಬುವರು ಶಿವ ಹೈಸ್ಕೂಲ ಎಂಬ ಶಾಲೆಯನ್ನು ಕೆಲ ಸ್ನೇಹಿತರೊಂದಿಗೆ ತೆರೆದಿದ್ದು ಸಹಜವಾಗಿಯೇ ಆ ಹೊಸ ಶಾಲೆಗೆ ವಿದ್ಯಾರ್ಥಿಗಳ ಅವಶ್ಯಕತೆ ಇತ್ತು ಈ ಸಂದರ್ಭ ಪರಿಸ್ಥಿತಿ ನನಗೆ ಅನುಕೂಲವಾಯಿತೆಂದು ಹೇಳಬೇಕು. ಅಲ್ಲಿ

ಮನ್ನಾರಿಯು ಗೆಳೆಯ ಬಂಗೇರಿ ಮುಖಾಂತರ ಅವರ ತಂದೆಯವರನ್ನು ಕಂಡೆ ಅವರೇ ಸಿಟಿ ಹೈಸ್ಕೂಲಿನ ಪ್ರಿನ್ಸಿಪಾಲರಾಗಿದ್ದರು ಪ್ರವೇಶದೊರೆಯುವ ಭರವಸೆ ದೊರೆತ ಮೇಲೆಯೇ ತಂದೆಯವರಿಗೆ ವಿಷಯ ತಿಳಿಸಿ ಪುಸ್ತಕ ಫೀ ಮುಂತಾದವುಗಳಿಗೆ ಬೇಕಾದ ಆರ್ಥಿಕ ವ್ಯವಸ್ಥೆ ಮಾಡಿಕೊಂಡು ಹೈಸ್ಕೂಲ ಪ್ರವೇಶಿಸಿದೆ.

ನಿಜವಾಗಿ ಹೈಸ್ಕೂಲಿನಲ್ಲಿ ಪ್ರವೇಶ ಸಿಕ್ಕದೇ ಮರಾಠಿ ಶಿಕ್ಷಣದ(?) ಕಾರಣ ಮುಲ್ಕಿ ಪರೀಕ್ಷೆ ಪಾಸಾಗಿದ್ದರೆ ಮಾತ್ರ ನೇರ ೪ನೇಯತ್ತೆಗೆ ಪ್ರವೇಶ ಸಿಗುತ್ತಿತ್ತು ಇಲ್ಲವಾದರೆ ಇಂಗ್ಲೀಷ ಒಂದನೆ ಕ್ಲಾಸಿನಿಂದಲೇ ಮೆಟ್ಟಲು ಹತ್ತಬೇಕಿತ್ತು. ಅಂತೂ ನನಗೆ ಪ್ರವೇಶದೊರಕಿತು ಬಹುಶಃ ೬ನೇ ಕ್ಲಾಸಿಗೆ ಪ್ರವೇಶಕೊಟ್ಟಿದ್ದರೆಂದು ಕಾಣುತ್ತದೆ. ಆ ವಿಷಯ ವಿಶೇಷವಾಗಿ ನೆನಪಿಲ್ಲ! ಆದರೆ ನಾನು ಹೊರಗಡೆ ಖಾಸಗಿ ಪಾಠ ತೆಗೆದುಕೊಂಡು ನನಗೆ ಪ್ರವೇಶ ಸಿಕ್ಕ ಕ್ಲಾಸಿಗೆ ಸರಿಹೊಂದುವಂತೆ ಅಭ್ಯಾಸ ಮುಗಿಸಿಕೊಳ್ಳಬೇಕೆಂಬ ಕಟ್ಟಳೆ ಹಾಕಿದ್ದರೆಂದು ತೋರುತ್ತದೆ, ಹಾಗೆ ನೆನಪು. ಅದೇ ಹೈಸ್ಕೂಲಿನಲ್ಲಿ ಬ್ಯಾಹಟ್ಟಿ(?) ಬಾಬು ಎವರಲ್ಲ(?), ಜಕಾತಿ ಎಂಬುವವರೂ ಅಧ್ಯಾಪಕರಿದ್ದರು. ಅವರ ಮನೆಗಳಿಗೆ ಪ್ರೈವೇಟ Tuition ಆಗೆದು(?) ಕೊಳ್ಳುತಿದ್ದೆ- ಅವರಿಂದ "ಹುಡುಗ ಹುಷಾರಿದ್ದಾನೆ" ಎಂಬ ಶಹಬಾಸಗಿರಿಯನ್ನೂ ಪಡೆದೆ! ಅಂದರೆ ನಾನು ಧಡ್ಡನಾಗಿರಲಿಲ್ಲ, ಅಧ್ಯಾಪಕರು ಹೇಳಿದನ್ನು ತಿಳಿಕೊಳ್ಳುವ ಬುದ್ಧಿಯು ತಾ ನಿಶ್ಚಯವಾಗಿಯೂ ಇತ್ತು!

ಆ ಸಿಟಿಹೈಸ್ಕೂಲು- ನ್ಯೂ ಇಂಗ್ಲೀಷ ಹೈಸ್ಕೂಲ ಹತ್ತಿರ P.B Road ನಲ್ಲಿತ್ತು ಅದರ ಸರಿಯಾದ ಅಂಚೆವಿಳಾಸ ನೆನಪಿಲ್ಲ ಶೋಧಿಸಿ ಬರೆಯುತ್ತೇನೆ. ಅದು ಹಳೇ ಕಟ್ಟಡ ಎರಡಂತಸ್ತಿನ ಇಮಾರತು ಈ ಕಟ್ಟಡದ ಅಲ್ಲದೇ ಹತ್ತಿರದಲ್ಲಿ ಇನ್ನೊಂದು ಕಟ್ಟಡವನ್ನು ಬಾಡಿಗೆ ಹಿಡಿದಿದ್ದ ಅಲ್ಲಿ ಚಿಕ್ಕ ಆಟದಮೈದಾನವಿತ್ತು ನಾನು ಅಲ್ಲಿ Badminton ಆಡಲು ಹೋಗುತ್ತಿದ್ದೆ

ಹುಬ್ಬಳ್ಳಿ ಮನೆಯನ್ನು ಯಾವಾಗ ಬಂದು ಮಾಡಿದರು ನೆನಪಿಲ್ಲ ಎಂದು ಹಿಂದೆ ಬರೆದಿದ್ದೇನೆ ಅಂತೂ ಮನೆಬಂದಾದಮೇಲೆ ನಾನು ಇರಲು "ಮಿತ್ರಸಮಾಜ" ಹೋಟೆಲಿನಲ್ಲಿ ತಂದೆಯವರು ವ್ಯವಸ್ಥೆ ಮಾಡಿದರು ಮಿತ್ರ ಗಾಂಧಿಮಾರ್ಕೆಟ್ಟಿನ ಹಿಂಬದಿಯಲ್ಲಿದ್ದ ಆಗ ಹುಬ್ಬಳ್ಳಿಗೇ ದೊಡ್ಡ ಹೋಟೇಲು- ಅದನಾನು ರೂಮಿನಬಾಡಿಗೆ ಎಡುಹೋತ್ತು ಚಹ, ಎರಡು ಊಟ ಇಷ್ಟಾದರೆ(?) ತಿಂಗಳಿಗೆ ರೂ.18/- (ಹದಿನೆಂಟು ಕೊಡುತಿದ್ದೆ) ಸಿಟಿಹೈಸ್ಕೂಲಿನಲ್ಲಿಯೇ ತಿಳವಳ್ಳಿಯ, ನಾಡಿಗೇರ ಬಂಧುಗಳು ಸುಬ್ಬಣ್ಣ, ಬಾಬಣ್ಣ ಎಂದು ಹೆಸರು ಇದ್ದರು. ಅವರು ಊಟಕ್ಕೆ ಮಿತ್ರಸಮಾಜಕ್ಕೆ ಬರುತ್ತಿದ್ದರು ಒಂದು ಕೆಲವು ನಾಲ್ಕಾರೆ(?) ಫುಲ್‌ಮೀಲ ದಿನವು ಭಕ್ಕರಿ ಮಾಡುತಿದ್ದರು- ಉತ್ತಮ ಅಕ್ಕಿಯ ಅನ್ನ, ಉತ್ತಮ ತುಪ್ಪ ಎಲ್ಲ ಕೊಡುತ್ತಿದ್ದರು ನಾಡಗೇರ ಬಂಧುಗಳಲ್ಲದೆ ದಿನ ನಿತ್ಯ ಊಟಕೆ ಬರುವ ಕೆಲ ಜನರ ಸ್ನೇಹವೂ ಆಗಿತ್ತು ಹೀಗಾಗಿ ಅವರಲ್ಲಿ ಸೇರಿದರೆ ಮೋಜಿನಿಂದ- ಹೈಸೂಟೆಯಿಂದ(?) ಊಟಮಾಡುತಿದ್ದೆವು.

ಭಕ್ಕರಿಯನ್ನು ಶಿರಹಟ್ಟಿಕಡೆಯವ ಇಬ್ಬರು ಅಣ್ಣತಮ್ಮಂದಿರಿದ್ದರು ಬಿತ್ತಮ(?) ಭಕ್ಕರಿಮಾಡುತ್ತಿದ್ದರು ಕಡಕಭಕ್ಕರಿಯನ್ನಂತೂ ಬಹು ಶ್ರೇಷ್ಠವಾಗಿ ಮಾಡುತಿದ್ದರು ಬಿಸಿಭಕ್ಕರಿ ಕೂಡ ಅಷ್ಟೇ ಉತ್ಕೃಷ್ಟ ಬಿಸಿಭಕ್ಕರಿಮೇಲೆ ಹೆಚ್ಚ ತುಪ್ಪ ಹುಗ್ಗಿ(?) ...

ಹಾಗೆ ನೋಡಿದರೆ ಸ್ವಾತಂತ್ರ್ಯ ಬಂದು ಸಾಗಿ ಇದನ್ನು ಬರೆಯುವ ಸಮಯದಲ್ಲಿ ನನಗೆ ೮೦ ವರ್ಷ ವಯಸ್ಸು ತುಂಬಿದೆ (2-1-2003) ಆ ಹಿಂದಿನ ಸಂಭ್ರಮವನ್ನು ನೆನೆದಿಕೊಳ್ಳುವುದೇ ಒಂದು ಹಬ್ಬ.

ಈ ರೀತಿಯಾಗಿ ಹೈಸ್ಕೂಲಿನ ದಿನಗಳು ಕಳೆಯುತ್ತಿದ್ದವು. ಅಭ್ಯಾಸವು ಭರದಿಂದ ಸಾಗುತ್ತಿದ್ದ ನಾವೆಲ್ಲ ಸ್ನೇಹಿತರು ಬೇರೆ ಬೇರೆ ಶಾಲೆಗಳಲ್ಲಿದ್ದರೂ ಸಾಯಂಕಾಲ ಒಂದೆಡೆ ಕಲೆಯುತ್ತಿದ್ದೆವು

ನನ್ನ ಕ್ಲಾಸಿನಲ್ಲಿ R.H. ಕುಬ್ಬಣ್ಣವರ್ ಹಾಗೂ M. Kulkarni ದೇಶಪಾಂಡೆಯವರು ವಾಲಟ ಮಾಸ್ತರರ ಮಗ. ವಾಲಟ ಮಾಸ್ತರರ ತಮ್ಮ ನೀಲಕಂಠರವರು ಒಬ್ಬ ಅಧ್ಯಾಪಕರಾಗಿದ್ದರು ಆ ಶಾಲೆಯಲ್ಲಿ. ನನ್ನ ಕ್ಲಾಸಿನ ಇನ್ನೊಬ್ಬ ಗೆಳೆಯರೆಂದರೆ - ಅವರ ರಾ. ವಾ. ಶಿರೂರ ಪಾಟೀಲ ಎಂಬುವವರು ಇದ್ದರು ಆ ಕಾಲದಲ್ಲಿಯೇ ಸಾಹಿತ್ಯದ ಅಭಿರುಚಿ, ಕಾವ್ಯ ರಚನೆಯ ಹುಚ್ಚು ಅದರ ಪರಿಣಾಮವಾಗಿ "ಹನಿಗಳು" ಎಂಬ ಒಂದು ಅತಿ ಚಿಕ್ಕ ಕಾವ್ಯಸಂಗ್ರಹ ಬರೆದಿದ್ದರು ಅದನ್ನು ಆನಂದವನದಲ್ಲಿ ಛಾಪಿಸಿಕೊಳ್ಳುವವರ ಧಾರವಾಡದ ಬಿ ಮು ಪ್ರತಿ ಕಾಪಿಗೆ ಹತ್ತು ರೂಪಾಯಿಗಳಿಗೆ 100 - ಒಂದು ಸಾವಿರ ಪ್ರತಿಗಳನ್ನು ಪ್ರಿಂಟು ಹಾಕಿಕೊಟ್ಟಿದ್ದರು ಹುಡುಗರು ಏನೋ ಉತ್ಸಾಹದಿಂದ ಮಾಡಿದ್ದಾರೆ ಪ್ರೋತ್ಸಾಹಿಸಬೇಕು ಬುದ್ಧಿಯಿಂದ ಅಚ್ಚುಹಾಕಿಕೊಟ್ಟರೆಂದೆನಿಸುತ್ತದೆ.

ಇದೇ ಸಮಯದಲ್ಲಿ ಈ ಶಾಲೆಯಲ್ಲಿ "ಪಮ್ಮಾರ್" ಎಂಬ ಡ್ರಾಯಿಂಗ ಮಾಸ್ತರ ಇದ್ದರು ನಾನು ಗ್ರೇಡ ಡ್ರಾಯಿಂಗ ಪರೀಕ್ಷೆಗೆ ಕಟ್ಟಿದ್ದೆ. ಅದು ಉತ್ತೀರ್ಣವಾದರೂ Intermediate ಪರೀಕ್ಷೆಯಲ್ಲಿ ನಾನು ಮುಂಬಯಿ ಪ್ರಾಂತದಲ್ಲಿಯೇ ಮೊದಲ ಡ್ರಾಯಿಂಗನಲ್ಲಿ ಪಾರಿತೋಷಕ ಪಡೆದೆ ಆ ಸಂದರ್ಭದಲ್ಲಿ ಶಾಲೆಯವರು (ಹೆಡ್ಡ ಪ್ರಿನ್ಸಿಪಾಲರಾಗಿದ್ದ ಶ್ರೀ ಬೆಂಗೇರಿಯವರು) ಒಂದು ಸಭೆಯನ್ನು ಏರ್ಪಡಿಸಿ ಶಿಕ್ಷಣ ಖಾತೆಯಲ್ಲಿ ದೊಡ್ಡ ಅಧಿಕಾರಿಯಾಗಿದ್ದ ಶ್ರೀ - ಬೆಟಗೇರಿಯವರನ್ನು ಮುಖ್ಯ ಅತಿಥಿಗಳೆಂದು ಕರೆದಿದ್ದರು ಇದು ನನಗೆ ಮೊದಲ ಸತ್ಕಾರ

ಈ ರೀತಿಯಾಗಿ ದಿನಗಳು ಉರುಳುತ್ತಿದ್ದಂತೆ ಕ್ರಿ. ಶ. 1942ನೇ ವರ್ಷ ಕಾಲಿರಿಸಿತು ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ 1942 ಬಹು ಮಹತ್ವದ ವರ್ಷ. ಆ ವರ್ಷ ರಾಷ್ಟ್ರೀಯ ಕಾಂಗ್ರೆಸ್ ಮುಖಂಡರು ಬ್ರಿಟಿಶರಿಗೆ "ಭಾರತ ಬಿಟ್ಟು ತೊಲಗಿರಿ" ಎಂದು ಅವರಿಗೆ, ಹೇಳಿ ಭಾರತೀಯರಿಗೆ "ಮಾಡು ಇಲ್ಲವೇ ಮಡಿ" ಎಂದು ಇದು ನಮ್ಮ ಆಂದೋಲನವೆಂಬ ರೀತಿಯಲ್ಲಿ ಕಟ್ಟುನಿಟ್ಟಾಗಿ ಸಾರಿತು ಈ ನಿರ್ಣಯವನ್ನು ಮುಂಬಯಿ ಗೋವಾಲಿಯಾ ಟ್ಯಾಂಕದಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡಿತು. ಈ ನಿರ್ಣಯದಿಂದ ಎಲ್ಲಾ ಭಾರತೀಯ ಜನತೆಯಲ್ಲಿ ಇದ್ದ ಜಾಗೃತಿಯು ಹೆಚ್ಚಾಗಿ ಬ್ರಿಟಿಶರನ್ನು ಗಟ್ಟಿ ತೊಲಗಿಸುವತನಕ ಹೋರಾಟ ನಿಲ್ಲಿಸುವದಿಲ್ಲ ಎಂದು ಜನತೆ ಸಿದ್ಧರಾಗಿದ್ದಲ್ಲದೇ ಕಂಕಣ ಬದ್ಧರಾಗಿದ್ದರು

ಜನತೆಯು ಈ ಚಳುವಳಿ-ನಿರ್ಣಯಗಳನ್ನು ಅವಲೋಕಿಸಿದ ಬ್ರಿಟಿಶ ಸರಕಾರ ಕೂಡ ಅಷ್ಟೇ ಎಚ್ಚರಿಕೆ ತೆಗೆದುಕೊಂಡಿತ್ತು, ಸ್ವಾತಂತ್ರ್ಯ ಕುರಿತ ಸಭೆ ಸೇರಿಸಿತ್ತು, ಸಂಶಯ ಬಂದವರನ್ನು ಅಂದರೆ ಚಳುವಳಿಯಲ್ಲಿ ಭಾಗವಹಿಸುವವರು ಎಂಬ ಸಂಶಯ ಬಂದರೆ ಸಾಕು ಅಂಥವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಇಲ್ಲವೆ ಬಂಧಿಸಿ ಸೆರೆಮನೆಗೆ ತಳ್ಳುವ ಮತ್ತು ಅಧಿಕಾರವನ್ನು ಪೊಲೀಸರಿಗೆ ಕೊಡಲಾಗಿತ್ತು, ಅಂದರೆ ಅವರು ಯಾರು ಬ

ಕೈ ಅವರನ್ನು ಬಂಧಿಸಿದಾಗ ಕಳಿಸಿಬಿಟ್ಟರು ಕೈ ಆಯುಧಗಳ ಮುಷ್ಟಿಮಾರಾಟ ನಡೆಯಿತು

ರಾಷ್ಟ್ರೀಯ ಮುಖಂಡರನ್ನು ಗೋವಾಲಿಯಾ ಟ್ಯಾಂಕಿನಲ್ಲಿ ಬಂಧಿಸಿದ್ದು 1942ರ ಅಗಸ್ಟ 9ರಂದು ಬೆಳಗಿನ ಜಾವದಲ್ಲೇ ಬಂಧಿಸಿದ್ದರು, ಬಂಧನದ ಸುದ್ದಿ ಶೀಘ್ರದಲ್ಲಿ ದೇಶದ ಮೂಲೆ ಮೂಲೆಗೂ ಹರಡಿತು, ಸುದ್ದಿ ತಿಳಿಯುತ್ತಲೇ ಅಲ್ಲಿ ಎಲ್ಲೆಲ್ಲೂ ಗಲಭೆ ಸರಕಾರದ ಕಾರ್ಯಗಳಿಗೆ ತೊಂದರೆ ಉಂಟುಮಾಡುವುದು ನಾಡ ಮುಖಂಡರ ಉದ್ದೇಶವಾಗಿತ್ತು

ವಿದ್ಯಾರ್ಥಿಗಳಿಗೆ ತಮ್ಮ ತಿಳುವಳಿಕೆಯಲ್ಲಿ ತಮ್ಮ ಜವಾಬ್ದಾರಿ ಗೊತ್ತಿತ್ತು. ಈ ಅಸಹಕಾರ ಚಳುವಳಿಯಲ್ಲಿ ಧುಮುಕಲು ರಾಷ್ಟ್ರೀಯ ಮುಂದಾಳುಗಳ ಕರೆಯು ಹಾಗೇ ಇತ್ತು ಮಹಿಳೆಯರು ಮುದುಕರು ಮಕ್ಕಳು ಎಲ್ಲರೂ ಭಾಗವಹಿಸಬೇಕಿತ್ತು, ಏನೇ ಆದರೂ ಈ ಸಲದ ಚಳುವಳಿಯು ಸ್ವಾತಂತ್ರ್ಯಗಳಿಸುವವರೆಗೂ. ಫಲ ಆ ಉದ್ದೇಶ ದೇಶದ ಎಲ್ಲರನ್ನೂ ಜಾಗೃತಗೊಳಿಸಿತ್ತು ಗಾಂಧೀಜಿಯವರ ಅಹಿಂಸಾ ತತ್ವವೇನೋ ಇತ್ತು, ಅದನ್ನು ಮೀರಿಯೂ ಆಗ ಹೋಗಲಿಲ್ಲ. ಸರಕಾರದೊಂದಿಗೆ ಅಸಹಕಾರವನ್ನು ಮುಂದಿಟ್ಟು ಸರಕಾರದ ಆಡಳಿತಕ್ಕೆ ತೊಂದರೆ ಕೊಡುವುದು ಮುಖ್ಯ ಉದ್ದೇಶವಾಗಿತ್ತು ರಾಜಮಾರ್ಗದಲ್ಲಿಯ ಸೇತುವೆ ಧ್ವಂಸ ಮಾಡಿದರೆ ಸೈನ್ಯಕ್ಕಾಗಲೀ ಪೋಲೀಸರಿಗಾಗಲೀ ಚಲನೆಗೆ ತೊಂದರೆ, ಟೆಲಿಫೋನ ತಂತಿ ಕಡಿದು ಹಾಕಿದರೆ ಸಂಪರ್ಕ ತೊಂದರೆ, ವಸಾಹತುಶಾಹಿಯ ಧ್ವಜ ಇಳಿಸಿ, ಅಂಚೆ ಕಚೇರಿಗಳಿಗೆ ಬೆಂಕಿ ಹಚ್ಚುವುದು, ಶಾಲಾ ಕಟ್ಟಡಗಳು ಸರಕಾರಿ ಕಚೇರಿಗಳ ಧ್ವಂಸ ವಾಹನಗಳ ನಾಶ, ಇಂಥ ಅನೇಕ ಕಾರ್ಯಗಳನ್ನು ಮುಖಂಡರು ಸಾರಿದ್ದರು. ಆ ಕಾರ್ಯಗಳಲ್ಲಿ ವಯಸ್ಸಿನ ನಿರ್ಬಂಧವಿಲ್ಲದೇ ಹೆಣ್ಣು ಗಂಡು ಭಾಗವಹಿಸುವ ಅನುಕೂಲತೆ ಇತ್ತು ಆದರೆ ಇಂಥ ಘಟನೆಗಳನ್ನು ವರ್ತಮಾನ ಪತ್ರಗಳು ಪ್ರಕಟಿಸಿ ಸಾರುವಂತಿರಲಿಲ್ಲ ಆದರೆ ಚಳುವಳಿಗಾರರಿಗೆ ಈ ಸುದ್ದಿ ಮುಟ್ಟುವುದು ಅವಶ್ಯವಾಗಿತ್ತು ಅಂಥ ಪ್ರಸಂಗಗಳ ಗುಪ್ತ ಸ್ಥಳಗಳಲ್ಲಿ ಅನುಕೂಲವಿದ್ದ ಮಾಧ್ಯಮದಿಂದ ಪತ್ರಿಕೆಗಳನ್ನು ಅಚ್ಚುಹಾಕಿ ಗುಪ್ತರೀತಿಯಲ್ಲೇ ಸಾರ್ವಜನಿಕರಿಗೆ ತಲುಪಿಸುತ್ತಿದ್ದರು, ಇಂಥ ಕಾರ್ಯಗಳಲ್ಲಿ ವಿದ್ಯಾರ್ಥಿಗಳ ಕಾರ್ಯ ಹಿರಿದಾಗಿತ್ತು.

ಅಲ್ಲದೆ ಕೆಲ ಹಿರಿಯ ಮುಖಂಡರು ವೇಷ ಬದಲಾಯಿಸಿ - ಊರೂರು ಅಲೆದು ಜನ ಜಾಗೃತಿಯನ್ನು ಮಾಡುತ್ತಿದ್ದರು, ಅಂಥವರಿಗೆ ಆಶ್ರಯ ನೀಡಲು, ಅವರ ಊಟ ಉಡುಗೆ ನೋಡಲು ಬೇರೊಂದು ಪಡೆಯೇ ನಿರ್ಮಾಣವಾಗಿತ್ತು, ಅಂತೂ ಆತ್ಮಾಹುತಿಯ ಜೀವನ ಪ್ರಾರಂಭವಾಗಿ ಸಾಮಾನ್ಯ ಮನುಷ್ಯನ ಜೀವನದಲ್ಲಿ ವ್ಯತ್ಯಾಸ ತಲೆದೋರಿತ್ತು!

ಮತ್ತೊಮ್ಮೆ ನನ್ನ ಶಿಕ್ಷಣಕ್ಕೆ ತೊಡಕು

ಹೇಗೋ ತಂದೆಯವರ ಮನ ಒಲಿಸಿ ನಾನೂ ಒಬ್ಬ ಹೈಸ್ಕೂಲ ವಿದ್ಯಾರ್ಥಿಯಾಗಿದ್ದೆ ಸಿಟಿ ಹೈಸ್ಕೂಲನಲ್ಲಿ ಶಿಕ್ಷಣ ಮುಂದುವರಿದಿತ್ತು, ನನ್ನ ಓದಿನ ತಟ್ಟೆಯಲ್ಲಿ ಮತ್ತೊಂದು ಕಲ್ಲು ಸತ್ತು ಬಿದ್ದಿತು!

ಅಗಸ್ಟ 9ರಂದು ಎಂದಿನಂತೆ ಶಾಲೆಗೆ ಹೋದರೆ ಹೆಚ್ಚಾದ ಹುಡುಗರು ಖಿನ್ನಮುಖರಾಗಿ ಹೊರಹೋಗುತ್ತಿದ್ದರು ಅಧ್ಯಾಪಕರು ಕೂಡ ನಿರ್ಜೀವ ಕಳೆಯಿಂದ ಕೈಕಟ್ಟಿಕೊಂಡು ಮೌನಧರಿಸಿ ನಿಂತಿದ್ದರು ಯಾರಾರೂ ಮಾತಿಲ್ಲ ಕತೆಯಿಲ್ಲ ಏನು ಮಾಡಬೇಕೆಂದು ತಿಳಿಯದೇ ದಿಗ್ಭ್ರಾಂತರಂತೆ ನಿಂತಿದ್ದರು ಒಬ್ಬರ ಮುಖದ ಮೇಲೂ ಚೈತನ್ಯವೇ ಇರಲಿಲ್ಲ!

ಈ ವಾತಾವರಣ ನನ್ನನ್ನು ಉದ್ರಿಕ್ತನನ್ನಾಗಿಯೇ ಮಾರ್ಪಡಿಸಿತು, ಆಗ ನನ್ನ ಜೊತೆ ಕೆಲ ಸಹಪಾಠಿಗಳೂ ಇದ್ದರು, ಅವರು ಕೂಡ ಸ್ತಬ್ಧ, ನನ್ನ ಆವರಣ ಹತ್ತಿರದಲ್ಲಿದ್ದವರೆಂದರೆ. ಶ್ರೀರಾಮಚಂದ್ರ ಜಂತಲಿ" ನಾವಿಬ್ಬರು ಒಬ್ಬರನ್ನೊಬ್ಬರ ಮುಖ ನೋಡಿದೆವು, ಜಂತಲಿಯವ ನೋಡಲು ಬಾಂಬಿನಂತೆ: ನಡಿ ಏನಾಯಿತೆಂದು ನೋಡಿಕೊಂಡು ಹೋಗೋಣಾ ಎಂದ. ನಮ್ಮ ಕ್ಲಾಸು ಇದ್ದುದು ಕೊನೆಯ ಅಂತಸ್ತಿನ ಮೇಲೆ ಕ್ಲಾಸು ಪ್ರವೇಶಿಸಿದೆವು - ಕೆಲ ವಿದ್ಯಾರ್ಥಿಗಳು ನಾಗ ಇದ್ದರು, ಯಾರೂ ಮಾತಾಡುತ್ತಿಲ್ಲ ಡೆಸ್ಕ ಮೇಲೆ ಕೈಯೂರಿ ಗಲ್ಲಕ್ಕೆ ಕೈ ಹಚ್ಚಿ ಕುಳಿತಿದ್ದರು ಅಧ್ಯಾಪಕರೂ ಅಷ್ಟೇ, ಅಲ್ಲಿದ್ದ----

ಆ ಕಪ್ಪು ಹಲಗೆ ಮಾತ್ರ ಬಹು ಜೋರಿನಿಂದ ಮಾತಾಡುತ್ತಿತ್ತು"!---

--- ನಿಮ್ಮ ರಾಷ್ಟ್ರ ನಾಯಕರನ್ನೆಲ್ಲ "ದೇಶಬಿಟ್ಟು ತೊಲಗಿರಿ" ಎಂಬ ಘೋಷಣೆ ಮಾಡುವದಕ್ಕೆ, ಕೆಲವೇ ನಿಮಿಷ ಮುಂಚಿತವಾಗಿ ಅವರನೆಲ್ಲ ಬಂದಿಖಾನೆಗೆ ಹಾಕಿದ್ದಾರೆ" ಎಂದು ಬರೆದು --->

ಗಾಂಧಿ ನೆಹರು ಪಟೇಲ್ ಅಬ್ದುಲ್ ಕಲಾಂ ಆಜಾದ ಮೊದಲಾದವರ ಜಿಂದಾಬಾದ್ ಘೋಷಣೆ ಸಾರುತ್ತ ಆ ಕಪ್ಪು ಹಲಗೆ ---

ಅದೇ ಕಣ್ಣಿಗೆ ಕಾಣುತ್ತಿತ್ತಲ್ಲ ಅದನ್ನು ಯಾರು ಬರೆದಿದ್ದರೆಂದು!

ಆವರೆಗೆ ಅದನ್ನು ಯಾರೂ ಅಳಿಸಲು ಹೋಗಿರಲಿಲ್ಲ!

ಆದರೆ ಆ ಬರಹ ಸಾವಿರಾರು ಜನ ಕೂಡಿ ಒಟ್ಟಿಗೆ ಕೂಗಿದಷ್ಟು ಮಾರ್ದನಿಯ ಧ್ವನಿ ಘೋಷ ಗರ್ಜನೆಯನ್ನು ಹೊರಡಿಸಿತು ಆ ಹಲಗೆ—

ಹಾಗೆ ನಾನು ಮತ್ತೊಮ್ಮೆ ಜಂತಲಿ ಕಡೆ ನೋಡಿದೆ. ಅವನು ಮಾತನಾಡಲಿಲ್ಲ ಆದರೆ ಕೆಳಗಿಳಿಯುವ ಸಂಜ್ಞೆ ಮಾಡಿದನು ನಾನು ಉಳಿದ ಹುಡುಗರಿಗೆ ನಡೆಯಿರಿ ಹೋಗೋಣ ಎಂಬಂತೆ ಕೈಮಾಡಿದೆ---

ಇದುವರೆಗೆ ಸ್ತಬ್ಧವಾಗಿದ್ದ ಆ ವಿದ್ಯಾರ್ಥಿಗಳಿಗೆ ಆ ಕರೆಯುವ ಧ್ವನಿ ಎಚ್ಚರ ಬಂತೋ ಮುಖಂಡರ ಜಿಂದಾಬಾದ್ ಘೋಷಣೆ 'ಭಾರತ ಮಾತಾಕಿ' ಜೈ ಎಂಬುದರೊಂದಿಗೆ ಇಂಗ್ಲೀಶರಾ ನಮ್ಮ ದೇಶವನ್ನು ಬಿಟ್ಟು ತೊಲಗಲಿ ಇದು ನಮ್ಮ ನೆಲ ನಮ್ಮ ಜನ ಪರಕೀಯ ಆಡಳಿತವನ್ನು ನಾವು ಸಹಿಸಲಾರೆವು, ತೊಲಗಲಿ 'Quit India' ಎಂದು ಮುಂತಾ ಜೋರಿನಿಂದ ಕೂಗುತ್ತ ಕೆಳಗಿಳಿದರು ಇಳಿಯುವಾ ದಾರಿಯಲ್ಲಿ ಸಿಕ್ಕ ಕ್ಲಾಸಿನವರನ್ನೆಲ್ಲರನ್ನೂ ತಮ್ಮ ಗುಂಪಿಗೆ ಸೇರಿಸಿಕೊಂಡೇ ಇಳಿಯುತ್ತ ಹೋದರು, ಎದುರಿಗೆ ಹಾಯುತ್ತಿದ್ದ ~~ಇ~~ ಅಧ್ಯಾಪಕರಾಗಲಿ ಸಿಬ್ಬಂದಿಯವರಾಗಲೀ ಹೀಗೆ ಹೋಗುವ ವಿದ್ಯಾರ್ಥಿಗಳನ್ನು! "ನೀವ್ಯಾಕೆ ಹೋಗುತ್ತಿದ್ದೀರಿ ಏನು ಸಮಾಚಾರ" ಎಂದು ಯಾರೂ ಕೇಳಲಿಲ್ಲ ನೆಲಮಾಳಿಗೆಗೆ ಬರುವ ಹೊತ್ತಿಗೆ ವಿದ್ಯಾರ್ಥಿಗಳ ದೊಡ್ಡ ಸಮೂಹವೇ ಆಗಿತ್ತು, ಅಂದು ಶಾಲೆಯಲ್ಲಿ ಹಾಜರಿದ್ದ ಯಾವ ವಿದ್ಯಾರ್ಥಿಯೂ ಈ ಪ್ರಸಂಗದ ನಂತರ ಮನೆಗೆ ತೆರಳಲಿಲ್ಲ

ಈ ವಿದ್ಯಾರ್ಥಿಗಳು ರಸ್ತೆಗೆ ಬರುವ ಹೊತ್ತಿಗೆ ಅವರಲ್ಲಿ ಬಂದು ಮಾನಸಿಕ ಬದಲಾವಣೆ ಬೇರೆ, ರಾಷ್ಟ್ರೀಯ ಘೋಷಣೆಯ ಧ್ವನಿ ಆಕಾಶಕ್ಕೇ ತಲುಪಿತೋ ಏನೋ ಎಂಬಷ್ಟು ಜೋರಾಗಿತ್ತು, ಎಷ್ಟೋ ವಿದ್ಯಾರ್ಥಿಗಳ ಕೈನಲ್ಲಿ ರಾಷ್ಟ್ರಧ್ವಜ ಅಲಂಕರಿಸಿತು ಈ ಸಮಯದಲ್ಲಿ - ನನ್ನ ಮತ್ತು ಜಂತಲಿಯ ದೃಷ್ಟಿ ಒಂದಾದವು "ನಡಿ ಹೋಗೋಣಾ" ಎನ್ನು

ಕಡೆಗೆ
ನ್ಯೂ ಇಂಗ್ಲಿಷ್ ಸ್ಕೂಲ್ ಕಡೆಗೆ ಹೋದವರು - ಜೊತೆಗೆ, ಆಗ ಈ ವಿದ್ಯಾರ್ಥಿಗಳ ಸಮೂಹ ಮೆರ-
ವಣಿಗೆಯ ರೂಪ ತಾಳಿತು ಈ ಸಮಯದಲ್ಲಾಗಲೂ ಮೆರವಣಿಗೆಯ ಮುಂದುಗಡೆ ನಾನು
ಮತ್ತು ಜೊತೆಯಲ್ಲಿಯೇ ಇದ್ದೆವೆಂಬ ನೆನಪು

ನ್ಯೂ ಇಂಗ್ಲಿಷ್ ಸ್ಕೂಲ ಕಡೆ ಮೆರವಣಿಗೆ ಮುಖಮಾಡಿ ಹೊರಟ ಕೆಲವೇ ಅಂತರದ-
ಲ್ಲಿ ಸಾರ್ವಜನಿಕರೂ ಮೆರವಣಿಗೆಯಲ್ಲಿ ಸೇರತೊಡಗಿದರು. ಈ ಹೊತ್ತಿಗೆ ಮೆರವಣಿಗೆ
ಬೃಹದಾಕಾರವಾಗಿತ್ತು. ಘೋಷಣೆಗೆ ಇನ್ನೂ ಜೋರಾಗಿತ್ತು. ರಾಷ್ಟ್ರಧ್ವಜಗಳು ಮೆರವಣಿಗೆ-
ಯಲ್ಲಿದ್ದ ಪ್ರತಿಯೊಬ್ಬನ ಕೈಗೂ ಬಂದಿತ್ತು - ಆಗ ಹುಬ್ಬಳ್ಳಿಯ ಕನ್ನಡ ೨ನೇ ನಂಬರ ಶಾಲೆ
ಬಿಟ್ಟ ಹೊತ್ತಾಗಲೆ ವಿದ್ಯಾರ್ಥಿಗಳ ಸಂಖ್ಯೆಯೂ ಜಾಸ್ತಿ. ಈ ಮೆರವಣಿಗೆ ಅಲ್ಲಿ ಹೊರಟಿತು
ದಾರಿಯಲ್ಲಿ ಶಹಾಪುಪೇಟೆ ಶಾಲೆಯ ವಿದ್ಯಾರ್ಥಿಗಳೂ ಇದರಲ್ಲಿ ಸೇರಿಕೊಂಡರು. ೨ನೇ ನಂಬರ
ಶಾಲೆ ಸೇರುವ ಹೊತ್ತಿಗೆ ಮಧ್ಯಾಹ್ನವಾಗಿತೆಂದು ಕಾಣುತ್ತದೆ - ಹೀಗೆ ಈ ಮೆರವಣಿಗೆ ಹೋಗು-
ತ್ತಲೇ ವಿದ್ಯಾರ್ಥಿಗಳು ಬಂದು ಇದರಲ್ಲಿ ಸೇರುತ್ತಿದ್ದರು. ಅವರಿಗೆ ಯಾರ ಆಮಂತ್ರಣವೂ
ಬೇಕಾಗಿಲ್ಲ - ಅಲ್ಲ ಅವರಿಗೆ ಯಾರಿಂದಲೂ ಆತಂಕವಾಗುತ್ತಿರಲಿಲ್ಲ! ೨ನೇ ನಂಬರ ಶಾಲೆ-
ಯ ನಂತರ ಜನಸಮೂಹ ತೀರ ದ್ವಿಗುಣವಾಯಿತು ನಾಗರಿಕರ ಸಂಖ್ಯೆಯೂ ಸಾಕಷ್ಟು
ಬೆಳೆದಿತ್ತು, ಘೋಷಣೆಯು ಆ ಸಾಗರದ ಇಂಗ್ಲಂಡನ್ನೇ ಮುಟ್ಟುತ್ತಿತ್ತೋ ಏನೋ
ಮೆರವಣಿಗೆ ಎಷ್ಟು ದೊಡ್ಡದಾಗಿತ್ತೆಂದರೆ ಪ್ರಾರಂಭದವರು ಕನ್ನಡ ಎರಡನೆ ನಂಬರ ಶಾಲೆಯ ಹತ್ತಿರ
ಇದ್ದಾಗ ಇನ್ನೊಂದು ಕೊನೆ ಕೊಪ್ಪೀಕರ ರೋಡಿನ ಕೊನೆಯಲ್ಲಿತ್ತು ಅಥವಾ ಲ್ಯಾಮಿಂಗ್ಟನ್ ಹೈಸ್ಕೂಲ ಬಳಿ
ಇತ್ತೆಂದರೂ ಅಡ್ಡಿಯಿಲ್ಲ

ಈ ಮೆರವಣಿಗೆಯ ಮುಂದಿನ ಉದ್ದೇಶ ಲ್ಯಾಮಿಂಗ್ಟನ್ ಹೈಸ್ಕೂಲಿನ ವಿದ್ಯಾರ್ಥಿಗಳ-
ನ್ನು ತಮ್ಮಲ್ಲಿ ಸೇರಿಸಿಕೊಳ್ಳುವದೇ ಇತ್ತು. ಆದರೆ:

ಹಿಂದಿನ ಶಾಲೆಗಳಲ್ಲಿ ಸಿಕ್ಕ ಸಹಕಾರ ಇಲ್ಲಿ ಮಾಯವಾಗಿತ್ತು, ಅಲ್ಲದೆ ಮೆರವಣಿಗೆಯನ್ನು
ಗೇಟಿನ ಒಳಗಡೆ ಬಿಡಕೂಡದೆಂಬ ಪ್ರತಿಭಟನೆಯೂ ಭದ್ರವಾಗಿತ್ತು. ಗೇಟು ಬಾಗಿಲ ಬಂದು
ಮಾಡಿ ಉದ್ದಕ್ಕೂ ಪೋಲೀಸರ ಕಾವಲು!

ಈ ಶಾಲೆ ಸರಕಾರಿ ಶಾಲೆ ಅರ್ಥಾತ್ ಮುನಿಸಿಪಲ್ ಕಾರ್ಪೋರೇಶನದಿಂದ ನಡೆಯುತ್ತಿ-
ದ್ದ ಶಾಲೆ. ಈ ಶಾಲೆಯ ವಿದ್ಯಾರ್ಥಿಗಳು ಚಳುವಳಿಯಲ್ಲಿ ಭಾಗವಹಿಸಿದರು ಎಂಬುದು ಸರ-
ಕಾರಿ ಶಾಲಾ ಆಡಳಿತಕ್ಕೆ ಅಪಮಾನಕರ ಎಂಬುದು ಅವರ ಭಾವನೆಯಾಗಿತ್ತು.

ಮೇಲಾಗಿ ಬ್ರಿಟಿಶರ ಆಡಳಿತದ ಸಮಯದಲ್ಲಿ ದೊಡ್ಡ ದೊಡ್ಡ ಶಹರಗಳಲ್ಲಿ "ಸಿವಿಕ್ ಗಾರ್ಡ"
ಎಂಬುದೊಂದು ಸರಕಾರದ ಬೆಂಬಲದಿಂದ ನಡೆಯುತ್ತಿದ್ದ ಖಾಸಗಿ 'ಪಡೆ' ಅದೊಂದು ಸ್ವ-
ಯಂ ಸೇವಕರ ದಳವೆಂದರೂ ಆದೀತು ಆ ದಳದ ಕಮಾಂಡಂಟ್ ಈ ಶಾಲೆಯ ಡ್ರಿಲ್
ಮಾಸ್ತರ ಆಗಿದ್ದು ಅವರ ಹೆಸರು "ದೀ.ಗ.ಮಾವ" ಎಂದಿತ್ತೆಂದು ಕಾಣಿಸುತ್ತದೆ. ಶಾಲೆ ಬಂದಾದರೆ
ಅವರಿಗೂ ಅಪಮಾನ ಎಂದು ಅವರು ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಹೀಗಾಗಿ ಪೂರಾ
ಪೋಲೀಸರ ಬೆಂಬಲ ಪಡೆದು ಎಲ್ಲ ಕ್ಲಾಸುಗಳಲ್ಲೂ ಮಕ್ಕಳನ್ನು ಒಳಗೇ ಕೂಡಿಸಿ ಬಾಗಿಲುಗಳನ್ನು
ಭದ್ರಪಡಿಸಿ ಸುತ್ತಲೂ ಪೋಲೀಸರ ಕಾವಲು!

ನಮ್ಮಲ್ಲಿಯ ಕೆಲವರು ಶಾಂತರೀತಿಯಿಂದಲೇ ಮಕ್ಕಳನ್ನು ಹೊರಗೆ ಕಳಿಸಿ.
ಇದು ರಾಷ್ಟ್ರೀಯ ಆಂದೋಲನ ನೀವು ಹೀಗೆಯೇ ಹಟ ಹಿಡಿದು ಪ್ರತಿಭಟಿಸಿದರೆ, ನಿಮ್ಮದು

ಸ್ವಾತಂತ್ರ್ಯದ ನಿಷ್ಠಾವಂತ ದೇಶಪ್ರೇಮಿಗಳ ಪಟ್ಟಿಯಲ್ಲಿ ಸೇರುತ್ತೇವೆ ಎಂದು ಹಾಡಿದ ಜನ
ಸಂಪಾದಿಸಿದೆ ಹೇಳದಿರಿ ಬೈದುಕೊಂಡಂತಾದ ಅಧ್ಯಾಪಕರ ಮನೆಯಲ್ಲಿ ಅವರ
ಅಪ್ಪನೆಂದರೆ ಪ್ರಿನ್ಸಿಪಾಲರ ಶಿಶುವನ್ನ(ವಿವೇಕಾರ್ಥ- ಕುವರಾಂಡಂತೆ) ನಿಮ್ಮ ಹಿಡಿದು ಬೈದು ಬರ
ಮೆರವಣಿಗೆ ಹಿಂದೆ ಕಳಿಸುವ ಜವಾಬ್ದಾರಿ ನಮ್ಮದು ಎಂಬ ಭಾರವನ್ನೆ ಹೊತ್ತಿದ್ದಂತೆ ಎಂದು
ನಮಗೆ ಹಿಂದುಗಡೆಯಿಂದ ತಿಳಿಯಿತು!

ಪೋಲೀಸರ ಪ್ರತಿಭಟನೆ ಅದಕ್ಕೆ ಅಷ್ಟು ಪಟ್ಟ(ನಮ್ಮಿಂದ?) ಆದರೆ ಒಂದು ಮಾಡಿದ ನಿರ್ಣಯ ಶಾಲೆಯಿಂದ ಹೊರಗಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರ ನಮ್ಮನ್ನು ಹೊರಗೆ ಬಿಡುವ ಎಂಬ ಆರ್ಡರ್ ನೀಡಿತು.

ಈ ದೃಶ್ಯದಿಂದ ಮೆರವಣಿಗೆಯು ಬಂದಿದ್ದ ಜನರ ಎಲ್ಲ ಮುಖ ತಿರುಗಿತು; ಸ್ಥಾನಾಂತರ ನಡೆದ. ಇತ್ತ ಆ ಸಂದರ್ಭದಲ್ಲಿ ಹಿಂದಿನಿಂದ ಒಂದು ಕಲ್ಲು ತೂರಿಬಂದು ಬಾಗಿಲ ದದ್ದ ಒಂದು ಕಿಟಕಿಯ ಗಾಜು ಝಲ್ಲ್ ಎಂಬ ಶಬ್ದದೊಂದಿಗೆ ಪುಡಿಯಾಯಿತು. ಹೀಗೆ ಬಂದ ಕಲ್ಲು ಹಿಂದಿನಿಂದ ಸಾವಿರಾರು ಕಲ್ಲುಗಳನ್ನು ತರುವಂತಾಯಿತು, ಇನ್ನೇನು ಪೋಲೀಸರು ಗೋಳಿಬಾರ್ ಮಾಡಿ ಈ ಕ್ಷೇತ್ರವನ್ನು ನಿಲ್ಲಿಸಬಹುದಿತ್ತು. ಬಹುಶಃ ಇದು ಮಕ್ಕಳು ಶಾಲೆ ಅಂಗಳದಲ್ಲಿದ್ದುದರಿಂದ ಕಾನೂನಿನ ದೃಷ್ಟಿಯಿಂದ ಹಾಗೆ ಮಾಡಲು ಸಾಧ್ಯವಿರಲಿಲ್ಲವೆಂದು ಕಾಣುತ್ತ

ಪೋಲೀಸರು, ಆಡಳಿತ ವರ್ಗದವರು ಗುಟ್ಟಾಗಿ ಬಾಗಿಲುಗಳ ಕೀಲಿಗಳನ್ನು ತೆರೆದರು, ಹಾಗೆ ಮಾಡದಿದ್ದರೆ ಪ್ರಸಂಗ ಇನ್ನೂ ವಿಕೋಪಕ್ಕೆ ಹೋಗಿ ಅನಾಹುತ ಆಗುವ ಸಂಭವದ ಚಿಹ್ನೆಗಳೂ ತಲೆದೋರಿದ್ದವು!

ಸರಿ, ಬಾಗಿಲುಗಳನ್ನು ತೆರೆಯುವುದೇ ತಡ ಆ ಸಾನು ತಾಸುಗಳು ಕ್ಲಾಸ್‌ಗಳಲ್ಲಿ ಜೈಲಿನಲ್ಲಿದ್ದಂತಿದ್ದ ಮಕ್ಕಳು ಕೇಕೇ ಹಾಕುತ್ತ ಚೀರಾಡುತ್ತ ಹೊರನುಗ್ಗಿದ ಇನ್ನೊಂದು ಆಶ್ಚರ್ಯದಾಯಕವಾದ ವಿಷಯವೆಂದರೆ- ಹೊರಬರುತ್ತಿದ್ದ ವಿದ್ಯಾರ್ಥಿಗಳ ಚೀರಾಟ ಮತ್ತು ಕೇಕೆಗಳೊಂದಿಗೆ ಜೈ ಜೈಕಾರ, ಭಾರತದ ಸ್ವಾತಂತ್ರ್ಯದ ಹೋರಾಟಕ್ಕೆ ಜಯವಾಗಲೀ ಎಂಬ ಘೋಷಣೆ ರಾಷ್ಟ್ರನಾಯಕರ ಹೆಸರೆತ್ತಿ ಜಯಘೋಷಣೆ ಈ ರೀತಿಯಾಗಿ ಮಕ್ಕಳ ಮನಸ್ಸಿನಲ್ಲಿ ಹುದುಗಿದ್ದ ದೇಶಪ್ರೇಮ, ರಾಷ್ಟ್ರಭಕ್ತಿ, ರಾಷ್ಟ್ರಹಿತರುಗಳ ಬಗ್ಗೆ ಇದ್ದ ಭಕ್ತಿ ಮುಂತಾದ ಉತ್ತಮಗಳು ನೈಸರ್ಗಿಕವಾಗಿಯೇ ಹೊರಹೊಮ್ಮಿದವು. ರಕ್ತಗತವಾಗಿ ಬೆಳೆದು ಬಂದ ದೇಶಪ್ರೇಮ ರಾಷ್ಟ್ರಭಕ್ತಿಗಳನ್ನು ಶಾಲೆಯಲ್ಲಿ ಬಾಗಿಲಕ್ಕೆ ಬೀಗ ಜಡಿದರೆ ಅದು ಹೋಗಲು ಸಾಧ್ಯವೆ?

ಈ ಪ್ರಸಂಗ ನಡೆಯುವ ಸಮಯಕ್ಕೆ, ಬಹುಶಃ ಸಾಯಂಕಾಲದ 3 ಘಂಟೆಯಾಗಿರಬೇಕು; ನಾವು ಮೆರವಣಿಗೆಯಲ್ಲಿ ಪಾಲ್ಗೊಂಡು ಬಂದ ವಿದ್ಯಾರ್ಥಿಗಳು, ಹಾಗು ನಮಗೆ ಸಹಕಾರ ನೀಡಿ ನಮ್ಮೊಡನೆ ಮೆರವಣಿಗೆಯಲ್ಲಿ ಭಾಗವಹಿಸಿದ ಸಾವಿರಾರು ನಾಗರಿಕರು ಮಕ್ಕಳು ಸಂತಸದಿಂದ ಹಾಗು ಘೋಷಣೆಗಳೊಂದಿಗೆ ಹೊರಬರುತ್ತಿರುವುದನ್ನು ಕಂಡು ಸಮಾಧಾನದ ಉಸಿರನ್ನು ಹೊರಹೊಮ್ಮಿದರು. ಕೊನೆಗೂ ಲ್ಯಾಮಿಂಗ್ಟನ್ ಹೈಸ್ಕೂಲನ್ನು ಬಂದುಗೊಳಿಸುವಲ್ಲಿ ಯಶಸ್ವಿಯಾದೆವಲ್ಲ! ಎಂಬ ಸಮಾಧಾನ ಉಸಿರೇ ಅದಾಗಿತ್ತು, - - -

ಭಾರತಬಿಟ್ಟು ತೊಲಗಿರಿ ಎಂಬ ಆಂದೋಲನದ ಪ್ರಾರಂಭವಾದದ್ದು, ಹುಬ್ಬಳ್ಳಿಯ
ಲ್ಲಿ ಈ ರೀತಿಯಾಗಿ. ಈ ಕಿಡಿ ಜ್ವಾಲೆಯಾಗಿ ಪರಿಣಮಿಸಿ ದಿಕ್ಕು ದಿಕ್ಕಿಗೆ ಪಸರಿಸಿ
ತು. ಹುಬ್ಬಳ್ಳಿ ಈ ಆಂದೋಲನದ ವಿಸ್ತರಣವನ್ನು ಇಲ್ಲಿಗೇ ಮೊಟಕುಗೊಳಿಸು
ತ್ತೇ. ಆದಿನ ಪ್ರಾರಂಭವಾದ ಆಂದೋಲನ ದೇಶದಾದ್ಯಂತ ಪ್ರಜ್ವಲ ಅಗ್ನಿಯಾಗಿ ನಿಯಂತ್ರಣವಿಲ್ಲ
ದೆ ಪಸರಿಸಿತು. ಅದರ ವಿವರ ತಿಳಿಯಬೇಕಾದರೆ ಆ ಸಂದರ್ಭದ ಇತಿಹಾಸವ
ನ್ನೇ ಓದಬೇಕು. ಈ ಬರವಣಿಗೆಯು ನನ್ನ ವಯಕ್ತಿಕ ಸಂದರ್ಭಕ್ಕೆ ಸಂಬಂಧಿಸಿದ
ಷ್ಟನ್ನು ಮಾತ್ರ ಬರೆಯುತ್ತೇನೆ.

ಇದು ನನ್ನ ಶಿಕ್ಷಣದ ಕೊನೆಯ ದಿನವಾಗಿ ಆಯ್ತು!

ಮೆರವಣಿಗೆ ಮುಗಿಯಿತು, ಜನ ತಮ್ಮ ತಮ್ಮ ಮನೆಗೆ ತೆರಳಿದರು
ನಾನೂ ಮಿತ್ರಸಮಾಜ ತಲುಪಿದೆ --- ???

ಮೊದಲ ಮಾಳಿಗೆಯ ಮೇಲಿದ್ದ ನನ್ನ ರೂಮಿಗೆ ಹೋದರೆ ಕೀಲಿ ತೆಗೆದು
ಬಾಗಿಲುಗಳು ತೆರೆದಿದ್ದವು. ಹೋಗುವಾಗ ಹಾಕಿದ್ದ ಕೀಲಿ ಹೇಗೆ ತೆರೆಯಿತು ಎಂದು
ಅನುಮಾನವಾಯಿತು. ಖೋಲಿಯಲ್ಲಿ ಇಣುಕಿದೆ. ಪಲ್ಲಂಗದ ಮೇಲೆ ತಂದೆಯವರು
ಮಲಗಿದ್ದರು. ಖೋಲಿಯಲ್ಲಿದ್ದ ನನ್ನ ಸಾಮಾನುಗಳು - ಬಟ್ಟೆಬರೆ ಪುಸ್ತಕಗಳು ಎಲ್ಲ
ವನ್ನೂ ಗಂಟಾಗಿ ಕಟ್ಟಿಡಲಾಗಿತ್ತು. ಖೋಲಿಯ ಸುತ್ತೆಲ್ಲ ಮತ್ತೊಮ್ಮೆ ಕಣ್ಣಾಡಿಸಿ
ದೆ. ಖೋಲಿಯನ್ನು ಖಾಲಿಮಾಡುವ ಉದ್ದೇಶದಿಂದಲೇ - ಸಾಮಾನುಗಳನ್ನು ಕಟ್ಟಿ
ಟ್ಟಿತು! ಕಾಲುಸಪ್ಪಳ ಕೇಳದಿರಬೇಕು ತಂದೆಯವರಿಗೆ ಎಚ್ಚರವಾಯಿ
ತು ಸಾವರಿಸಿಕೊಂಡು ಎದ್ದು ಕುಳಿತರು -----

ಸ್ವಲ್ಪಹೊತ್ತಾದ ಮೇಲೆ -- ತಂದೆಯವರಿಗೆ ಎಚ್ಚರವಾಯಿತು. ಅವರ
ಮುಖ ನೋಡುತ್ತಲಿಯೇ ಕೋಪದಿಂದಲೇ ಮಲಗಿದರು ಎಂಬುದು ಎದ್ದು ಕಾಣು
ತ್ತಿತು- ಮಾತಿಗೆ ಪ್ರಾರಂಭಿಸಲು ಇನ್ನೂ ಕ್ಷಣಕಾಲ ತಗಲಿತು ---

---ಸಾಲೇನೂ ಬೇಡ ಮೂಲೇನೂ ಬೇಡ ಊರಿಗೆ ಹೋಗೋಣ ನಡಿ,
ಈ ರೀತಿ ಚಳುವಳಿಯಲ್ಲಿ ಭಾಗವಹಿಸುವದಾದರೆ ನಮ್ಮ ಆಸ್ತಿ ಪಾಸ್ತಿ ಕುಲಕಸಬು
ಎಲ್ಲವನ್ನೂ ಸರಕಾರ "ಖಾಲಸಾ" ಮಾಡುತಾರ--- ಕಣ್ಣಾಪೂರ ದೇಸಾಯರದು ಏನಾಗಿ
ದ ಗೊತ್ತದನ ಇಲ್ಲ ನಿನಗ" ಎಂದು ಗದರಿಸಿದಂತಾ ಆಯಿತು --

ದೇಶದ ಸ್ವಾತಂತ್ರ್ಯದ ಕಾಲ ಸಮೀಪಿಸಿದ ಹಳೆತಲೆಮಾರಿನ ಜನಕ್ಕೆ ಭಾರತ ಸ್ವತಂ
ತ್ರ್ಯವಾಗುವದೆಂಬ ಭರವಸೆ ಎಳ್ಳಷ್ಟೂ ಇರಲಿಲ್ಲ! ಅದಕ್ಕೆ ಕಾರಣವಿಲ್ಲದೇ ಇರಲಿಲ್ಲ. ಹಿಂದಿನ
ರು ಇತಿಹಾಸದಲ್ಲಿ ನರಗುಂದ ಬಾಬಾಸಾಹೇಬ [illegible] ಇಂಥ ಅನೇಕರು ಬ್ರಿಟಿಷರ ಮೇಲೆ ದ್ವೇಷ, ಕ್ಷೇ
ಷ ಇಟ್ಟುಕೊಂಡಿದ್ದರು. ನರಗುಂದ ಬಾಬಾಸಾಹೇಬರು ಬ್ರಿಟಿಷರ ವಿರುದ್ಧ ಬಂಡೆದ್ದಾಗ ನಮ್ಮ
ದೇಸಾಯಿ ಮನೆತನದ ಹಿರಿಯರು [illegible] ಬಾಬಾಸಾಹೇಬನಿಗೆ ಸಹಾಯ
ಮಾಡಿದ್ದರಂತೆ ಆ ಸಂಶಯದ ಮೇಲೆ ಬ್ರಿಟಿಷರು ನಮ್ಮೂರ ವಾಡೆ ಧ್ವಂಸ ಮಾಡಿದ್ದ
ರಂತೆ! ಆ ಸಂದರ್ಭದಲ್ಲಿ ಇದ್ದುಬಿದ್ದ ಬಂಗಾರ ಬೆಳ್ಳಿ ಬೆಲೆಬಾಳುವ ವಸ್ತುಗಳನ್ನು
ಬಾವಿಗೆ ಎಸೆದಿದ್ದರಂತೆ? ಎಂದು ನಮ್ಮ ಹಿರಿಯರು ಮಾತಾಡಿದ್ದನ್ನು ಕೇಳಿದ್ದೆನು

ಇಂಥ ಪ್ರಸಂಗದಲ್ಲಿ ಜೀವಂತ ಉದಾಹರಣೆಯೊಂದು ನಮ್ಮ ಕಣ್ಣೆದುರಿಗೆಯೇ ಇದ್ದುದು
ಒಂದು - ಹಾನಗಲ್ಲ ತಾಲೂಕಿನಲ್ಲಿ ಕಲ್ಲಾಪುರ ಎಂಬುದೊಂದು ದೇಸಗತಿ ಹಳ್ಳಿ
ಆ ದೇಸಾಯಿಯವರು ಗಾಂಧೀಜಿಯವರ ಚಳುವಳಿಗೆ - ಅಂದರೆ ಕಾಂಗ್ರೆಸ ಪಾರ್ಟಿಯ ಹೋರಾ-
ಟ - ಕಾರ್ಯಗಳಿಗೆ ಸಹಾಯಕರಾಗಿದ್ದರು ಎಂದು ಅವರ ಆಸ್ತಿ ಅಷ್ಟೇ ಅಲ್ಲ
ದೇಸಗತಿಗೆ ಇರಬೇಕಾದ ಹಕ್ಕು-ಬಾಧ್ಯತೆಗಳನ್ನು ಕೂಡ ರದ್ದು ಪಡಿಸಿದ್ದರು - ಈ ಹೊಡ-
ತೆ ಬಹು ಜನರ ಹೆದ್ದೇ ಇತ್ತು, ಹಾಗೆ ಹೆದರಿ ಹಿಂದೆ ಉಳಿದ ಜನಕ್ಕೆ ಪ್ರೋತ್ಸಾಹ
ಭಾರತ ಸ್ವಾತಂತ್ರ್ಯ ತರಲಿಕ್ಕೂ, ಸಾಧ್ಯವಿಲ್ಲವೆಂಬ ನಂಬಿಕೆ ಕೂಡ ಅವರಲ್ಲಿ ಬೇರೂ-
ರಿತ್ತು. ಸಹಜವಾಗಿಯೇ ಈ ಭಾವನೆ ನಮ್ಮ ಮನಕಲಕದಲ್ಲಿತ್ತು!

ಸ್ವಲ್ಪ ಹೊತ್ತಾದಮೇಲೆ ಹೊರಡು ನಾವೂ ಹೋಗೋಣ ಎಂದು ಅಂದೆ-
ವರು ಆಗಿರುವದೇ ತಡ ನಾನು ಹೊರಟೆ ಮಿತ್ರ ಸಮಗಾರದಿಂದ ಕಳಿಸಿದ
ಬಂದು ಅಲ್ಲಿಂದ ಒಂದು ಟಾಂಗಾದಲ್ಲಿ ~~...~~ ಕಲ್ಲಾಪುರಕ್ಕೆ ಬಂದೆವು, ಸಾಯಂಕಾಲ ಅರಬಿ
ಕೆರೆಕಡೆಗೆ ಒಂದು ನಾಟಕವಿತ್ತು ಅದರಲ್ಲಿ ಪ್ರವಾಸ ಮಾಡಿ - ಹಾವೇರಿಗೆ ಬಂದು ಅಲ್ಲಿಂ-
ದ ಅಗಡಿ ತಲುಪಿದೆವು, ಆದಿನ್ನು ಆನಂದವನದ ಪಕ್ಕ ಬಂಗ್ಲೆಯಲ್ಲಿಯೇ ಇದ್ದೆ-
ನ್ನರ ಅಲ್ಲಿನ. ಕಲಿಯಬೇಕೆಂಬ ನನ್ನ ಇಚ್ಛೆಗೆ ಮತ್ತೊಮ್ಮೆ ದಟ್ಟವಾದ ದೃಷ್ಟ
ಅಂಕುರಿಸದೆ ಬಿದ್ದಿತು!

ಆಗ ಮನೆಯಲ್ಲಿ ಬ್ರಾಹ್ಮಣರು ಇತ್ತು ಬಂಗಲೆಯ ಸುತ್ತ ಮುತ್ತ ಇದ್ದ
ಜಮೀನುಗಳನ್ನು ನಾವೇ ಸ್ವಂತ ಸಾಗು ಮಾಡುತ್ತಿದ್ದೆವು, ಆಳಿನ ಜೊತೆ ನಾನೂ ಹೊಲಕ್ಕೆ
ಹೋಗುವದನ್ನು ರೂಢಿಮಾಡಿಕೊಂಡೆ - ಚಿಕ್ಕಂದಿನಿಂದಲೂ ಬೆಳಿಗ್ಗೆ ಬೇಗ ಏಳುವ ಹವ್ಯಾಸ
ಇದ್ದಮೇಲೆ ಸುಮ್ಮನೆ ಕಾಲಕಳೆಯುತ್ತಿರಲಿಲ್ಲ ಏನಾದರು ಕೆಲಸದಲ್ಲಿ ತೊಡಗಿದ್ದರನೇ ತೃಪ್ತಿ
ನಾನು ಎದ್ದ ಸಮಯದಲ್ಲಿ ಆಳು ಬಂದಿರದಿದ್ದರೆ ಯಾವ ಸಂಕೋಚವಿಲ್ಲದೆ ~~ಹ~~ ಹೇನಿಕೆ,
ಲ್ಲದೇ ನೇರ ದನದ ಕೊಟ್ಟಿಗೆಗೆ ಹೋಗಿ ಸಗಣಿಕಸ ಮಾಡಿ ಕೊಟ್ಟಿಗೆಯನ್ನು ಸ್ವಚ್ಛ ಮಾಡುವಲ್ಲಿ
ಸಮಾಧಾನ ಬಹುಶಃ ಗಾಂಧಿತತ್ವಗಳಲ್ಲಿ ಸೇರಿದ್ದರ ಪರಿಣಾಮ ಇದಾಗಿರಬಹುದು ನನ್ನ ಬಟ್ಟೆ-
ಗಳನ್ನು ನಾನು ಒಗೆಯಲು ಆಳಿಗಾಗಲಿ ಅಗಸರಿಗಾಗಲೀ ಕೊಡುತ್ತಿರಲಿಲ್ಲ ಸ್ವಂತ ಒಗೆಯು-
ವದು ಇದಂತೂ ನಿಶ್ಚಯವಾಗಿಯೂ ಗಾಂಧೀಜಿ ಜೀವನದ ಪ್ರತ್ಯಕ್ಷ ಪರಿಣಾಮ!

ಆಳಿನ ಜೊತೆಗೆ ಹೊಲಕ್ಕೆ ಹೋದಾಗ ನಾನು ಆಳಿನಮೇಲೆ ದೇಖರೇಖಿ ಮಾಡುತ್ತ
ಕಾಲ ಕಳೆಯುತ್ತಿರಲಿಲ್ಲ. ರಂಟೆ, ಕುಂಟಿ ಹೊಡೆಯುವದು, ಈ ಉಪಕರಣಗಳನ್ನು ಎತ್ತಿ-
ಗೆ ನೊಗಕಟ್ಟಿ ಹೇಗೆ ಹೊಡೆಯುವದು ಎಂಬೆಲ್ಲ ಕಾರ್ಯಗಳಲ್ಲಿ ಆಸ್ತೆಯಿಂದ ಭಾಗವಹಿಸಿ ಅವ-
ರ ತಂತ್ರವನ್ನು ಕಲಿತುಕೊಂಡೆ ಹಾಗು ಹಳೆಕಾಲದಿಂದಲೇ ನಡೆದುಕೊಂಡು ಬಂದ ಹಳೆಯ
ತಂತ್ರಗಳನ್ನು ಸುಧಾರಿಸಲು ಸಾಧ್ಯವೇ? ಎಂದು ಆಲೋಚಿಸತೊಡಗಿದ್ದೂ ಉಂಟು.

ಬಿತ್ತುವದು, ಎಡೆ ಹೊಡೆಯುವದು ಮುಂತಾದ ಕಾರ್ಯಗಳನ್ನು ಆಳುಗಳ-
ಜೊತೆಗೇ ಕೂಡಿಕೊಂಡು ಮಾಡುತ್ತಿದ್ದ. ಇನ್ನು ವೇಳೆಯ ಅನುಕೂಲವಿದ್ದ ಸಲ
ಹೊತ್ತು ನಾನು ಹೊರಗೆ ಹೋಗಬೇಕಾದುದು ಎನಿಸಿದಾಗ ಸದ್ಗ್ರಂಥ ಪತ್ರಿಕೆಗಳು (ಆನಂದವನ)
ಕಾರ್ಯಾಲಯದಲ್ಲಿ ಸಿಕ್ಕುವ ಪತ್ರಿಕೆಗಳನ್ನು ಓದುವ ಹವ್ಯಾಸವಿದು
ಮನಕ್ಕೆ ಆನಂದ ನೀಡಿದ ಗ್ರಂಥಗಳನ್ನು ಓದುವದು

ಅಲ್ಲಿ ದೊರೆಯುತ್ತಿದ್ದ ನಾಥರ ವೈಜ್ಞಾನಿಕ ಕಾದಂಬರಿಗಳನ್ನು ಓದುತ್ತ ಶಾಸ್ತ್ರೀ-
ಮೆ ನನ್ನಲ್ಲಿ ಬೆಳೆಯತೊಡಗಿತು. ಮುನ್ಷಿಯವರು ಮರಾಠಿಗರುಗಳ ಬಗ್ಗೆಯೂ ಹುಟ್ಟಿಸಿ
ನಾಥರ ಕಾದಂಬರಿಗಳಲ್ಲಿ ಅವು ನೇರವಾಗಿ ದೈವಭಕ್ತಿಯ ಕುರಿತು ಹೇಳದಿದ್ದರು
ತರುಣರಲ್ಲಿ ಆ ಭಾವನೆಯನ್ನು ಪರೋಕ್ಷವಾಗಿ ಬಿತ್ತುತ್ತಿದ್ದುವು! ಹೀಗೆ ಕಾದಂಬರಿಗಳೇ ಹೇಳಿದ್ದೇನೆ
ಪ್ರಬುದ್ಧ ಕರ್ನಾಟಕದಂತಹ ಸಾಹಿತ್ಯಕ ಪತ್ರಿಕೆ ಸಾಹಿತ್ಯಾಭಿರುಚಿಯನ್ನು ನನ್ನಲ್ಲಿ ಬೆಳೆ-
ಸಿದುವು. ಕೃಷ್ಣಮೂರ್ತಿ ಪುರಾಣಿಕ "ಸೈರಂಧ್ರಿ"ಯನ್ನು ನಾನು ಓದಿದ್ದು ಆನಂದವನ-
ದಲ್ಲಿ. ಇಂಥ ಎಷ್ಟೋ ಸಾಹಿತ್ಯಕ ಕೃತಿಗಳು ನನ್ನ ಕಣ್ಣಿಗೆ ಬಿದ್ದುವು

ಇನ್ನೊಂದು ಮಹತ್ವದ ಕೃತಿ ವೀರ ಸಾವರಕರ ಅವರ ಅಮೂಲ್ಯ ಕೃತಿ
"ಕರಿನೀರು" ಪುಸ್ತಕವನ್ನು ಓದಿದ್ದು ಅಲ್ಲಿಯೇ - ಮರಾಠಿ "ಕಾಳಾಪಾಣಿ" ಎಂಬುದರ
ಕನ್ನಡ ಅನುವಾದವು ಆ ಗ್ರಂಥ. ಶ್ರೀ ಲೋಕಶಿಕ್ಷಣ ಮುದ್ರಣಾಲಯದ ಮಾಲೀಕರಾದ ಬೇ.
ಹ. ಶಾಳಿ ಅವರು ಅದನ್ನು ಅನುವಾದಿಸಿ ತಮ್ಮಲ್ಲಿಯೇ ಅಚ್ಚುಹಾಕಿದ್ದರು.
ನಾನು ಅಷ್ಟಿಷ್ಟು ಚಿತ್ರ ಬರೆಯುತ್ತೇನೆಂದು ತಿಳಿದ ಶಾಳಿಯವರು "ಕರಿನೀರು"
ಪುಸ್ತಕಕ್ಕೆ ಬೇಕಿದ್ದ ಚಿತ್ರಗಳನ್ನು ನನ್ನಿಂದ ಬರೆಸಿದರು. ನೆನಪು, ಚಿತ್ರಗಳು ಎಲ್ಲವೂ
ಬಹು ವಿಚಿತ್ರವಾಗಿದ್ದುವು. ಅಂದಮಾನದ ಜೇಲಿನಲ್ಲಿ ಬ್ರಿಟಿಶರು ರಾಜಕೀಯ ಕೈದಿ-
ಗಳಿಗಾಗಿ ಸೈತಾನ ಹಿಂಸಾತ್ಮಕ ಶಿಕ್ಷೆಯನ್ನು ಎಷ್ಟು ಕ್ರೂರ ರೂಪದಲ್ಲಿ ಕೊಡುತ್ತಿದ್ದರೆಂಬುದ-
ನ್ನು ವರ್ಣನೆಮಾಡಿಯೂ ಕೈದಿಗಳನ್ನು ಆ ಶಿಕ್ಷೆಗೆ [illegible] ನಿಲ್ಲಿಸುತ್ತಿದ್ದರು
ಎಂಬುದನ್ನು ಸ್ವತಃ ತಾವು, ಆ ಬಂದಿಯೊಳು ಸಾಕಷ್ಟು ಕೇಳಿಸುತ್ತಿದ್ದರು ಶಿಕ್ಷೆಗೆ ಒಳಪಡಿಸು-
ತ್ತಿದ್ದ ಆಯುಧಗಳ sketch ಮಾಡಿ ತೋರಿಸುತ್ತಿದ್ದರು. ಈ ಪ್ರಸಂಗಗಳು ಅಚ್ಚ-
ಳಿಯದೆ ನೆನಪಿದೆ, ಆದರೆ ಆ ಚಿತ್ರಗಳನ್ನು ಆ ಪುಸ್ತಕದಲ್ಲಿ [illegible]
[illegible] ನಾನು ಚಿತ್ರಗಳನ್ನು ಎಷ್ಟು ಯಶಸ್ವಿಯಾಗಿ ಚಿತ್ರಿಸಿದ್ದೆ ಹಾಗೂ ಆ ಚಿತ್ರಗಳು ಚಿತ್ರ-
ಕಥನದಲ್ಲಿ [illegible] ಎಂಬುದು ಮಾತ್ರ ಸರಿಯಾಗಿ ನೆನಪಿಲ್ಲ - ಅಲ್ಲದೇ ನಂತರದಿನ-
ಗಳಲ್ಲಿ ಅದನ್ನು ನೋಡಬೇಕೆಂಬುದಾಗಿ ಲಕ್ಷ್ಯದಲ್ಲಿ ಉಳಿಯಲಿಲ್ಲ. ಪುಸ್ತಕಮಾತ್ರ ಮುದ್ರಣವಾಗಿ-
ದೆ

ಹುಬ್ಬಳ್ಳಿಗೆ ಬಿಟ್ಟು ಬಂದಮೇಲೆ ಆನಂದವನದ ಬಂಗಾರದೂಲಿಯೇ ಇದ್ದುವು. ಒಂದು
ವರ್ಷಕ್ಕೊಂದಲ್ಲ, ಹೆಚ್ಚುಕಾಲ ಕಳೆಯಿತು. ೧೯೩೩ನೇ ಇಸ್ವಿ ಡಿಸೆಂಬರ ತಿಂಗಳಲ್ಲಿ, ದ.ರಾ.
ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. [illegible]
ಲನಕ್ಕೆ ಹೋಗಬೇಕೆಂದು ಮನಸ್ಸು ತುಡಿಯತೊಡಗಿತು. ಹೊಲದೊಳಗಿನ ಮುಖ್ಯ ಬೆಳೆ-
ಗಳನ್ನು ಬಿಕ್ಕು (Harvest) ಆಗಿತ್ತು. ಕಣದಲ್ಲಿ ಹಗಲಿರುಳೂ ಆಳಿನ ಜೊತೆಗೆ ಕೆಲಸಮಾಡಿ-
ದ್ದೆ ಮನೆಗೆ ಕಳಿಸಿಬಂದ ಸಮಾಧಾನ. ಬಂಗ್ಲೆಯ ಆಜೂಬಾಜಿನ ಹಂಗ ಇರಲಿಲ್ಲ
ಜೋಳವನ್ನು ಜೋಪಾನವಾಗಿ ದಾಸ್ತಾನು ಮಾಡಬೇಕಿದ್ದರೆ ಹಾಡೇವಲ್ಲದ ಹಗೆಯಲ್ಲಿ-
ಯೇ ಶೇಖರಿಸಬೇಕು. ಕಳೆ ಸರಿಯಾಗಿ ಒಣಗಿದಮೇಲೆ ಹಾಕಿದರಾಯಿತೆಂದು
ಸದ್ಯ ಜೋಳವನ್ನು ಚೀಲಗಳಲ್ಲಿಯೇ ತುಂಬಿಡಲಾಯಿತು. ಆಗಿನ ಒಕ್ಕಣ-
ವನ್ನು ಬಿಟ್ಟರೆ ಸಾಧಾರಣ ಕೂಡ ಕೆಲಸ ಮುಗಿದಂತಾಗಿತ್ತು!

ಸುಗ್ಗಿ ಮುಗಿಯುತ್ತಿದ್ದಂತೆ ಡಿಸೆಂಬರ ತಿಂಗಳು ಹತ್ತಿರ ಹತ್ತಿರಕ್ಕೆ ಬರ-

ತಿರುಗಿತು ಶಿವಮೊಗ್ಗೆಯ ಸಮ್ಮೇಳನದ ಅಧ್ಯಕ್ಷತೆ ವಹಿಸುವ ದರಾ ಬೇಂದ್ರೆಯವರ ಚಿತ್ರ ಕಣ್ಣೆದುರು ಸುಳಿಯುತ್ತಾ ಇತ್ತು. ಸಮ್ಮೇಳನಕ್ಕೆ ಹೋಗಬೇಕೆಂಬ ಉತ್ಕಟ ಇಚ್ಛೆ ಬಲವಾಗ ತೊಡಗಿತು. ತಂದೆಯವರನ್ನು ಕೇಳಲು ಒಂದು ಅಳುಕು-ಸಂಕೋಚವೇನೂ ಕೇಳಿದೆ, ಖರ್ಚು ಎಷ್ಟಾಗುತ್ತದೆಂದು ಅವರ ಪ್ರಶ್ನೆ. ನಾನು ಅಂದಾಜು ಲೆಕ್ಕ ಮಾಡಿಯೇ ಇಟ್ಟಿದ್ದೆ. ತೀರ್ಥಹಳ್ಳಿಯಿಂದ ರೈಲು ಖರ್ಚು ಮೂರು ದಿನಗಳ ಊಟ - ವಸತಿ ಪ್ರತಿನಿಧಿ ಶುಲ್ಕ ಎಲ್ಲ ಸೇರಿ ಹತ್ತು ರೂಪಾಯಿ (ರೂ 10/-) ಆಗುತ್ತದೆ ಎಂದು ಹೇಳಿದೆ. ಆಗಲಿ ಎಂದು ಒಪ್ಪಿದರು. ಮರುದಿನ ನಾನು ಶಿವಮೊಗ್ಗಕ್ಕೆ ಹೊರಟೆ!

ಅದೇ ನಾನು ಸಂದರ್ಶಿಸಿದ ಪ್ರಥಮ ಸಮ್ಮೇಳನ. ಬೇಂದ್ರೆಯವರ ಭಾಷಣ, ಅವರೇ ನುಡಿದ ಗಂಗಾವತರಣ ಪದ್ಯ. ಉಳಿದ ಗೋಷ್ಠಿಗಳು ನಡೆದ ಅವುಗಳ ನೆನಪು ಉಳಿದಿಲ್ಲ! ಬೇಂದ್ರೆಯವರ ಮಾತು ಪದ್ಯ ಮಾತ್ರ ಮನದಲ್ಲಿ.

ಈ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಎಸ್.V. ಕೃಷ್ಣಮೂರ್ತಿ ಎಂಬುವವರಾಗಿದ್ದರು. ಅವರ ರಾಜಕೀಯ ಧುರೀಣರು ಆಗಿದ್ದು ಕೇಂದ್ರ ಸರಕಾರದ ಯಾವುದೋ ಹುದ್ದೆಯಲ್ಲಿದ್ದರೆಂಬ ನೆನಪು!

ಶಿವಮೊಗ್ಗೆಗೆ ಹೋಗಿ ಎರಡು ದಿನಗಳ ಸಮ್ಮೇಳನದ ಕಲಾಪಗಳನ್ನು ನೋಡಿದನಂತರ ನನಗೆ ಅಳುಕಾಯಿತು ಹಾಗು ಹೊಳೆಯಿತು, ಜೊತೆಗೆ ಜಲಪಾತ ಇಲ್ಲಿಂದ ಸಮೀಪವಿದೆ ಎಂದು, ಇನ್ನೊಂದು ಹತ್ತು ರೂಪಾಯಿಗಳನ್ನು ತಂದೆಯವರಿಂದ ಪಡೆದಿದ್ದರೆ ಅದನ್ನು ನೋಡಲಿಕ್ಕಾಗುತ್ತಿತ್ತಲ್ಲ" ಎಂದು. ಆದರೂ ಪ್ರಯತ್ನಿಸಿ ನೋಡೋಣ ಎಂದು ತಂದೆಯವರಿಗೆ ಒಂದು ಕಾರ್ಡು ಬರೆದು ಇನ್ನೊಂದು 15/- ರೂ ಕಳಿಸಿ ಎಂದು ಕೇಳಿಕೊಂಡಿದ್ದೆ. ನಾನು ಹೊರಡುವ (ಮರಳುವ) ಸಮಯದವರೆಗೂ ಹಣ ತಲುಪಲಿಲ್ಲ - ಹೊರಟು ಬಂದೆ. ಊರಿಗೆ ಬಂದ ಮೇಲೆ ತಿಳಿಯಿತು ತಂದೆಯವರು ಹಣ ಕಳಿಸಿದ್ದರೆಂದು. ನಂತರ M.O. ಮರಳಿ ಊರಿಗೆ ಬಂತು. ಜೋಗಜಲಪಾತ ನೋಡುವದು ಮಾತ್ರ ಆಗ ಕೈತಪ್ಪಿತು!

ಮ್ಯಾಟ್ರಿಕ್ ಆಗಲು ಮತ್ತೊಮ್ಮೆ ಪ್ರಯತ್ನ

ನಮ್ಮೂರಿನಿಂದ 3 ಮೈಲಿ ದೂರದಲ್ಲಿ ಕರಜಗಿ ಎಂಬುದೊಂದು ಊರು ಇದೆ. ಅದೇ ನಮ್ಮ ತಾಲೂಕಾ ಸ್ಥಳವಾಗಿತ್ತು. ಅಲ್ಲಿ ಒಬ್ಬ ಶಿಕ್ಷಕರಿದ್ದರು "ರಾಟೆ" ಎಂದು ಅವರ ಹೆಸರು. ಅವರು ಆಚಾರ್ಯರು (ಭಾಗವತ ಎಂದು) ಅವರು ಖಾಸಗಿಯಾಗಿ ಮನೆಯಲ್ಲೇ ಕಲಿಸಿ (ಶಿಕ್ಷಣ ನೀಡಿ) ಪರೀಕ್ಷೆಗೆ ಕೂಡಿಸುವ ವ್ಯವಸ್ಥೆ ಇಟ್ಟಿದ್ದರು. ಅವರನ್ನು ಕಂಡು ವಿವರಗಳನ್ನು ತಿಳಿದುಕೊಂಡು ಬಂದೆ. ನಮ್ಮೂರಿಂದ ಕೆಲ ವಿದ್ಯಾರ್ಥಿಗಳು ಅಲ್ಲಿ ಅಭ್ಯಾಸಕ್ಕೆ ಹೋಗುತ್ತಿದ್ದರು. ಅವರು ನಡೆದೇ ಹೋಗುವದು ನಡೆದೇ ಮರಳುವದು. ನನಗೆ ಹಾಗೆ ಅವರೊಟ್ಟಿಗೆ ನಡೆದು ಹೋಗುವದು ಬೇಡವಾಗಿತ್ತು. "ದೇಸಾಯರ ಮಗನು ನಡೆದು ಹೋಗುತ್ತಾನೆ" ಎಂದು ಟೀಕಿಸುವರು ಟೀಕಿಸಿಯಾರು ಎಂಬ ಅಳುಕು. ಒಂದು ಸೈಕಲ್ಲು ಹಳೆಯದು ದೊರಕಿಸಿಕೊಳ್ಳಲು ಪ್ರಯತ್ನಿಸಿ ಒಂದು ಸೈಕಲ್ಲನ್ನು 3/- ರೂ (ಮೂರು ರೂಪಾಯಿಗೆ) ಖರೀದಿಸಿಕೊಂಡೂ ಆಗಿತ್ತು. ತಂದೆಯವರು ನಿರಾಕರಿಸಲಿಕ್ಕಿಲ್ಲ ಎಂದು ನಂಬಿ,

ಅವರನ್ನು ಕೇಳಿದೆ. ಅವರು 'ಇಲ್ಲ' ಎನಲಿಲ್ಲ ನಿಮ್ಮ ಕಾಕಾನ (ಅಂಗನ್ಯಾತಕು) ಕೇಳಿ ಎಂದು ಹೇಳಿದರು, ಆಗ ನ್ಯಾಯ ಮಾಡಲು ಅವರನ್ನು ನೇಮಿಸಿದ್ದರು ನ್ಯಾಯಕತ್ತು ನಮ್ಮದು. ಯಾರನ್ನು ನೇಮಿಸಿದರು ಖಾತೆದಾರರೇ ನೇಮಿಸಿದ್ದರು. ಆಗ ಅವರನ್ನು ನೇಮಿಸಿದ್ದರು ಗೊತ್ತುಮಾಡುವುದರಿಂದ ಅಷ್ಟಿಷ್ಟು, ಎಲ್ಲಾ, ಎಲ್ಲಾ ಆತ್ತು ಆ ನಿಷ್ಠೆಯಿಂದ ನನ್ನನ್ನು ಚಿಕ್ಕಪ್ಪನ ಹತ್ತಿರ ಕಳಿಸುವರೆಂದು ತಿಳಿಯುತ್ತಿದೆ! ಚಿಕ್ಕ ಸಧ್ಯ ನನ್ನ ಹತ್ತಿರ ಏನೂ ಇಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಸರಿ. ಮತ್ತೊಂದು ಆಶೆಯೂ ನಿರಾಶೆಯಲ್ಲಿ ಕೊನೆಗೊಂಡಿತು! ಈ ರೀತಿಯಾಗಿ ಕಾಲ ಉರುಳುತಿತ್ತು.

ತಂಗಿಯ ಮದುವೆ.

ನನ್ನ ಪ್ರಥಮ ತಂಗಿ ಮೋಹನಾಬಾಯಿಯ ಮದುವೆಯು ಆಜುಬಾಜು ನಡೆದಿತ್ತು. ಹಾನಗಲ್ಲಿನ ಕುಲಕರ್ಣಿ ಬೋಧರಾಯರ ಮನೆತನದ ಹನುಮಂತರಾಯರ ಮಗ, ಅವನು ನನಗೆ ಬಾಲ್ಯಬಂಧು ಸಂಬಂಧದ ನಾತೆಯಿಂದ ಸೋದರತ್ತೆಯ ಮಗನಾಗಬೇಕು. S.S.L.C ಅಭ್ಯಾಸ ಮಾಡುತ್ತಿದ್ದರು. ಆತ್ರಿ ವಂಟಾಕ ರೂಪವಂತನೂ ಅಹುದು. ಇರಿಂಯರ ಸಮ್ಮುಖದಲ್ಲಿ ಅವರಿಗೆ ಕೊಡುವದೆಂದು ನಿಶ್ಚಿತವಾಯಿತು. ಮದುವೆಯನ್ನು ಬೆಳಗಾವಿಯಲ್ಲಿಯೇ ಮಾಡುವದಾಗಿ ಗೊತ್ತು ಮಾಡಿದ್ದರು. ಮದುವೆಯ ನಿಶ್ಚಿತ ದಿನಾಂಕ ನೆನಪಿಲ್ಲದಿದ್ದರು ಬಹುಶಃ 1945-46ನೇ ಇಸ್ವಿ ಇರಬೇಕು. ಆಗಿನ ಕಾಲದ ಮದುವೆಗಳೆಂದರೆ ಜನಗಳಿದ್ದರೆ ಜರುಗುತ್ತಲೇ ಇರಲಿಲ್ಲ. ಏನೋ ಒಂದು ನಿಮಿತ್ತಕಾರಣಕ್ಕಾಗಿ ಬಂದ ಜನರಿಂದ - ಮದ್ಯಾನ್ಹ ಜರುಗಬೇಕಾದ ಊಟ ಬೆಳಗು ಮುಂಜಾನೆ ನಡೆಯಿತು, ಮಾಡಿದ ಅಡಿಗೆ ಆರಿ ಅಂಗಾರವಾಗಿ ಹೋಗಿತ್ತು. ಊಟ ತಡವಾಯಿತೆಂದು ಊಟಬೇಕಾದವರು ಏನೇನೋ ಒಂದು ಹನಿಯನ್ನು ತಳೆದುಕೊಂಡಿದ್ದರು. ಶಾಸ್ತ್ರಕ್ಕೆ ಊಟ ಮಾಡಿದರಷ್ಟೆ!

ಬೀಗರನ್ನು ಹೊತ್ತಾಗಿ ಹೊಸ ಕಡೆಯವರನ್ನು ನಾನಾರೀತಿಯಲ್ಲಿ ಸಾಮಾನ್ಯವಲ್ಲದ ಶಿಕ್ಷೆ ಸಾಮಾನುಗಳನ್ನು ಕಡೆಯುವದು ಆಗಿನ ಕಾಲದಲ್ಲಿ ಅದೊಂದು ರೀತಿಯ "ರೂಢಿ" ಯಾಗಿತ್ತು. ಈ ರೀತಿಯಲ್ಲಿ ನಮ್ಮ ಎಷ್ಟೋ ಸಾಮಾನುಗಳು ಮಾಯವಾದದ್ದು ಮದುವೆ ಮುಗಿದ ಮೇಲೆಯೇ ಆಳಿದದ್ದು.

ಅಳಿಯನ ಹೆಸರು ಶಾಮರಾವ ಎಂದು. ಸರಿಯಾಗಿ ನೆನಪಿರದಿದ್ದರೂ ಮೊದಲು ಅವರು ಮುಲ್ಕಿ ಖಾತೆಯಲ್ಲಿ ನೌಕರಿ ಮಾಡುತ್ತಿದ್ದರೆಂದು ಕಾಣುತ್ತದೆ ನಂತರ ನೌಕರಿ ಬದಲಾಯಿಸಿದರೋ ಏನು ಆಯಿತೋ ಗೊತ್ತಿಲ್ಲ. ನಂತರದ ನೌಕರಿ ಬಂದಿದ್ದು ಖಾತೆಯಲ್ಲಿ - ಅದಕ್ಕಾಗಿ ಅವರು ಸೋಲಾಪುರಕ್ಕೆ ಹೋಗಬೇಕಾಯಿತು, ಅವರಿಬ್ಬರೇ ಹೋಗಬೇಕೆಂದು. ಮನೆಯಲ್ಲಿ ತಂಗಿಗೆ ತಂಪಿನಿ ಎಂದು, ನನ್ನನ್ನು ಕರೆದುಕೊಂಡು ಹೋಗಿದ್ದರು. ಮೊದಲು ಮಂಗಳವಾರ ಪೇಟೆಯಲ್ಲಿ ಒಂದು ಚಿಕ್ಕಮನೆ ಬಾಡಿಗೆ ಹಿಡಿದಿದ್ದರು ನಂತರ ಸರಕಾರಿ ಕ್ವಾರ್ಟರ್ ಸಿಕ್ಕಿತೆಂದು ಕಾಣುತ್ತದೆ. ಸರಿಯಾಗಿ ನೆನಪಿಲ್ಲ!

ನಾನಿದ್ದ ಸಮಯದಲ್ಲಿಯೇ ಅಲ್ಲಿಯೇ ದ.ರಾ. ಚಂದ್ರಯ್ಯನವರು ~~AA~~ DAV(?) ಕಾಲೇಜಿನ ಪ್ರಾಚಾರ್ಯರಾಗಿದ್ದರು ಅವರ ಆರಹತ್ತಿರಹೋಗಿ ಸಂಪರ್ಕ ಬೆಳೆಸಬೇಕು ಅವರೊಡನೆ ನಾಲ್ಕು ಮಾತನಾಡಬೇಕೆಂಬ ಪ್ರವೃತ್ತಿ ಆಗ ನನ್ನಲ್ಲಿ ಬಂದಿರಲ್ಲ ಪ್ರಯತ್ನಮಾಡಲೂ ಇಲ್ಲ ಆದರೆ ಸಾಹಿತ್ಯಕ-ಚಿತ್ರಕಲೆಯ ಸಂಬಂಧ ಉತ್ಸಾಹ ಬೆಳೆಯುತ್ತಲೇ ಇತ್ತು....

ಅಲ್ಲಿದ್ದಾಗ ಧಾರವಾಡದಲ್ಲಿ ವಾಸವಾಗಿದ್ದ ಬಿ.ಎಂ.ಶ್ರೀ ನಿಧನರಾದರು ಸಂಯುಕ್ತ ಕರ್ನಾಟಕ ಪತ್ರಿಕೆಯ ಮೂಲಕ ಆ ಸುದ್ದಿ ತಿಳಿಯಿತು ಎಲ್ಲಿ ಹೋದರೂ ಸಾಹಿತಿಗಳ ಸಾಹಿತ್ಯಕಕ್ಕೆ ಸಂಬಂಧಿಸಿದ ಚಿತ್ರಗಳ ಪ್ಯಾಕೆಟ್ಟನ್ನು ಸಂಗಡ ತೆಗೆದುಕೊಂಡು ಹೋಗುತ್ತಿರುತ್ತಿದ್ದೆ ಆ ಸಂಗ್ರಹದಲ್ಲಿ ಬಿ.ಎಂ.ಶ್ರೀ ಚಿತ್ರವೂ ಇತ್ತು, ಕೂಡಲೇ ಶಿಕ್ಕ ಆ ಚಿತ್ರದ ರೇಖಾಚಿತ್ರಮಾಡಿ ಬೆಟಗೇರಿ ಕೃಷ್ಣಶರ್ಮರು (ಆನಂದಕಂದರು) ಹೊರಡಿಸುತ್ತಿದ್ದ "ಜಯಂತಿ" ಮಾಸಪತ್ರಿಕೆ ಕಳುಹಿದೆಂದು ಸಿದ್ಧತೆಮಾಡಿದೆ: ಆಗ ನನ್ನ ಭಾವ:

ಅದನ್ನೇನು ಮಾಡುತ್ತೀರವರು? ಎಂದು ಪ್ರಶ್ನಿಸಿದ್ದರು

ಮುಂದೆ ಒಂದುವಾರ ಕಳೆದಿರಬೇಕು, ಅದೊಂದು ದಿನ ಭಾವ ದಿನ ಬರುವ ವೇಳೆಗಿಂತಲೂ ಮೊದಲೇ ಮನೆಗೆ ಬಂದರು, ಅವರ ಕೈಯಲ್ಲಿ ಬಿ.ಎಂ.ಶ್ರೀಯವರ ನಾ ಬರೆದ - ಚಿತ್ರ ಹೊತ್ತ 'ಜಯಂತಿ' ಪತ್ರಿಕೆ ಇತ್ತು ಹೊದಿಕೆಯ ಮೇಲೆ/ಆ ಚಿತ್ರ ಪ್ರಕಟವಾಗಿತ್ತು, ನನ್ನ ಭಾವನ ಮುಖದ ಮೇಲೆ ಸಂತೋಷದ ಚಿಹ್ನೆ, ಅಭಿಮಾನದ ಸ್ಫೂರ್ತಿ ಒಡೆದು ಎದ್ದುಕಾಣುತ್ತಿದ್ದವು, ಅವರು ನನಗೆ ಅಭಿನಂದಿಸಬೇಕೆಂಬ ಶಬ್ದಗಳು - ಮಾತುಗಳೆಲ್ಲವನ್ನೂ, ಅವರ ಮುಖದ ಮೇಲೆ ಮೂಡಿದ್ದ ಭಾವಗಳೇ ಹೇಳುತ್ತಿದ್ದವು, ಆ ಸಂದರ್ಭವು ನನಗೆ ನಿಜವಾದ ಮುಕ್ತಿಯನ್ನು ತಂದಿತು, ಸಂತೋಷವಾಯಿತು, ಆನಂತರವೂ ಕೂಡ ಸ್ಥಿರ-ಶೀರ್ಷಿಕೆಗಾಗಿ ಕೆಲ ಚಿತ್ರಗಳನ್ನು ಕಳುಹಿಕೊಟ್ಟೆ, ಉಪಯೋಗಿಸಿಕೊಂಡರು! ಸ್ವಾಭಾವಿಕವಾಗಿ ಪ್ರಾರಂಭದ ದಿನಗಳಲ್ಲಿಯೇ ನನ್ನ ಚಿತ್ರಕಲೆ ಸಾಹಿತ್ಯದೊಡನೆ ಬೆರೆತುಕೊಳ್ಳತೊಡಗಿತು ಸಹಜವಾಗಿಯೇ ಸಾಹಿತಿಗಳಿಗೆ ಬರಹಗಾರರಿಗೆ ಪತ್ರಕಾರರಿಗೆ ಅವರಿಗೆ ಉಪಯೋಗವಾಗುವ ನಾನೊಬ್ಬ ಚಿತ್ರಕಾರ ಎಂಬ ಅರಿವು ಬಗೆತೊಡಗಿತು.

ಸೊಲ್ಲಾಪುರದಲ್ಲಿದ್ದಾಗಿನ ಮಾತು ಏನಾದರೂ ಕೆಲಸಕ್ಕಾಗಿ ಕಾಯಬೇಕಿಲ್ಲ, ಆಗಾಗ್ಗೆ ನಾನು ಪೇಟೆಯಲ್ಲಿ ಹೋಗುತ್ತಿದ್ದೆ ಪೇಟೆಯನ್ನು ಸೇರಬೇಕಾದರೆ ಸಂದಿಗೊಂದಿ - ಚಿಕ್ಕ ಓಣಿಗಳನ್ನು ದಾಟಿಕೊಂಡು ಹೋಗಬೇಕು. ಅಂಥ ಒಂದು ಚಿಕ್ಕ ಓಣಿಯಲ್ಲಿ - ಒಬ್ಬ "ಸೈನ್ ಬೋರ್ಡ್ ಪೇಂಟರನ ಅಂಗಡಿಯಿತ್ತು ಅದೇ ಸಮಯ ಸೊಲಾಪುರ ಮುನಿಸಿಪಾಲಿಟಿಯ ಚುನಾವಣೆ ನಡೆಯುವದಿತ್ತೆಂದು ಕಾಣುತ್ತದೆ ಆ ಪೇಂಟರನಲ್ಲಿ ಸಾಕಷ್ಟು ಕೆಲಸವಿತ್ತು, ಅದೇನು ನನಗೆ ಇಷ್ಟವಾಗುವಂತೆ ಕಾಣುತ್ತಿಲ್ಲ, ನೇರ ಅವನಲ್ಲಿ ಹೋಗಿ ಕೇಳಿದೆ "ನಿಮ್ಮಲ್ಲಿ ಏನಾದರೂ ಚಿತ್ರಕಾರರಿಗೆ ಕೆಲಸವಿದೆಯೇ?" ಎಂದು. ಅವನು ನಾನು ಏನೇನು ಮಾಡಬಲ್ಲೆ ಎಂಬ ಪ್ರಶ್ನೆ ಕೇಳಿದಾಗ - ಅವರಲ್ಲಿ ಸಾಕಷ್ಟು ಹುಲಿಯ ಚಿತ್ರಗಳಿದ್ದವು ಬಹುಶಃ ಇವರೆಲ್ಲ ಚುನಾವಣೆಯ ಹುರಿಯಾಳಿನ ಚಿತ್ರ ಹುಲಿ "symbol" ಆಗಿರಬೇಕೆಂದು ನಾನು ಅಂದುಕೊಂಡೆ, ಹಾಗು

ಇಂಥ ಚಿತ್ರಗಳನ್ನು ಮಾಡಬಲ್ಲೆ ಅಕ್ಷರಗಳನ್ನು ಬರೆಯಬಲ್ಲೆ" ಎಂದೆನು ಉತ್ತರಿಸಿದೆ! ಆ ಅಂಗಡಿಯ ಮಾಲೀಕನ ಹೆಸರು "ಬಸವರಾಜ" ಎಂದಿತ್ತೆಂದು ಕಾಣುತ್ತದೆ(?)
ನಾಳೆ ಬರ್‍ರಿ ಬಂದು ಚಿತ್ರಮಾಡಿ ತೋರಿಸಿರಿ ನನಗೆ ಕೈಯಲ್ಲಿದ್ದ ಚಿತ್ರಗಳಂತ ಚನ್ನಾಗಿ ಚಿತ್ರ ಬಿಡಿಸುವವರು ಬೇಕು ಎಂದು ಹೇಳಿದನು ನಾಳೆ ಚಿತ್ರಮಾಡಿ ತೋರಿಸ್ತೀನಿ-ನೋಡ್ರಿ ಎಂದು ಹೇಳಿದೆ - ಆಗಲಿ ಎಂದನು ----

ನಮ್ಮ ಸಂಭಾಷಣೆಯಲ್ಲ ಕನ್ನಡದಲ್ಲಿಯೇ ನಡೆಯಿತು. ಇವನಲ್ಲ ಅಷ್ಟೇ ಅಲ್ಲ ಪೇಟೆಯಲ್ಲಿ ಎಲ್ಲಿ ಹೋದರೂ ಕನ್ನಡದಲ್ಲಿಯೇ ಮಾತಾಡುವುದು ರೂಢಿಯಾಗಿಬಿಟ್ಟಿತ್ತು ಆಗ ಅನಿಸುತ್ತಿತ್ತು ಇಲ್ಲಿ ಎಲ್ಲವೂ ಕನ್ನಡ ಹಾಗಿದ್ದರೆ ಈ ಊರು ಮಹಾರಾಷ್ಟ್ರದಲ್ಲೇಕೆ ಎಂದು ಇಷ್ಟೆ ಕನ್ನಡ ಭಾಷೆಮಾತ್ರ ಬರಿ "ಇದ್ದಾನೆ" "ಇದ್ದಾಳೆ" ಎಂಬುದಕ್ಕೆ "ಹಾನ" "ಹಾಳ" ಎಂದು ಹೇಳುತ್ತಿದ್ದರು, ಇದೇ ರೀತಿ ಇನ್ನು ಕೆಲ ಶಬ್ದಗಳ ಅರ್ಥವೇ ವನಾ ಸಾತ್ರರಲ್ಲ ಪ್ರಾದೇಶಿಕ ಬದಲಾವಣೆ. ಅದರೊಂದಿಗೆ ಗಡಿಪ್ರದೇಶ ಮಹಾರಾಷ್ಟ್ರ ಆಂಧ್ರಪ್ರದೇಶಗಳ ಗಡಿಗಳು ಹೊಂದಿಕೊಂಡದ್ದರಿಂದ ಆಯಾ ಭಾಷೆಗಳ ಪ್ರಭಾವ. ಈ ಮಿಶ್ರ ಭಾಷೆಗೆ ಕಾರಣವೇನೋ ಎಂದುಕೊಂಡೆ. ಆದರೆ ಭಾಷೆ ಹೇಗೆ ಇರಲಿ ಸೊಲ್ಲಾಪುರದಲ್ಲಿ ಕನ್ನಡದ ಪ್ರಭಾವ ಹೆಚ್ಚೆಂಬುದನ್ನು ಮಾತ್ರ ಮನಗಂಡೆ.

ಮರುದಿನ ಚಿತ್ರ ತಯಾರಿಸಿಕೊಟ್ಟೆ ಬಸವರಾಜರ ಅಪೇಕ್ಷೆಗೆ ಮೀರಿಯೂ ಚಿತ್ರ ಚನ್ನಾಗಿ ಆಗಿತ್ತು! ನಾನು ಇಷ್ಟು ಚನ್ನಾಗಿ ಚಿತ್ರಿಸುತ್ತೇನೆಂಬ ಭರವಸೆಯೂ ನನಗೂ ಇರಲಿಲ್ಲ! ಕಾರಣ ಆ ಮಾಧ್ಯಮದಲ್ಲಿ ಚಿತ್ರಿಸಿದ್ದು ಅದೇ ಮೊದಲು! Banner ಬರೆಯುವ ರೀತಿಯಲ್ಲಿ ಕಟ್ಟಿಗೆ ಫ್ರೇಮಿಗೆ ಬಟ್ಟೆ ಬಿಗಿದು ಅದರಮೇಲೆ ಪೌಡರಗಳಿಂದ ಕಲಸಿಕೊಂಡು ತಯಾರು ಮಾಡಿದ ವರ್ಣಗಳಿಂದ ಚಿತ್ರಣ ಅಂತಾಗ ಗೆದ್ದೆ.

ಸೊಲ್ಲಾಪುರದ ಅದೇ ವೇಳೆಗೆ - "ಝುಂಗಾಡೆ"(?) ಒಬ್ಬ ಪೋಸ್ಟರ ಚಿತ್ರಕಾರ ಪ್ರಸಿದ್ಧನಾಗಿದ್ದ ಎಂತಹುದೇ ಇರಲಿ ಉತ್ತಮ ಚಿತ್ರಬೇಕೆಂದರೆ ಎಲ್ಲರೂ ಅವನಲ್ಲಿಗೇ ಧಾವಿಸುತ್ತಿದ್ದರು ನಾನು ಬರೆದ "ಹುಲಿಯ ಚಿತ್ರವನ್ನು" ನೋಡಿ ಬಸವರಾಜರ ಕೆಲಸಗಾರರು "ಝುಂಗಾಡೆ" ಚಿತ್ರಿಸಿದಂತೆಯೆ ಆಗಿದೆ ಎಂದು ಅಂದಿದ್ದನ್ನು ನಾನೂ ಕೇಳಿಸಿಕೊಂಡಿದ್ದೆ! ಆಮೇಲೆ ಸೊಲ್ಲಾಪುರವನ್ನು ಯಾವಾಗ ಬಿಟ್ಟೆವು ಎಂಬ ನೆನಪಿಲ್ಲ

ನನ್ನ ಚಿಕ್ಕಪ್ಪನ ಮರಣ

ನಾವಿನ್ನೂ ಸೊಲ್ಲಾಪುರದಲ್ಲಿರುವಾಗಲೇ ಅಂದೊಂದು ಮರಣದುಃಖದ ಭಾವನೆಯು ಆಂತರವಾಗಿಯೇ ಬಂತು. ನನ್ನ ಚಿಕ್ಕಪ್ಪ ಭೀಮ್ಯಾಸಾಹೇಬರು ತೀರಿಕೊಂಡ ಸುದ್ದಿಯನ್ನು ತಂದಿತ್ತು ನಾನು ತಕ್ಷಣ ಊರಿಗೆ ಹೋದೆ ಅವರು ಧನುರ್ವಾಯುವಿನಿಂದ ತೀರಿಕೊಂಡಿದ್ದರೆಂದು ತಿಳಿಯಿತು, ಧನುರ್ವಾಯು ಎಂದರೆ ಮನುಷ್ಯ ಬಿಲ್ಲಿನಂತೆ ಮುದುಡಿಕೊಂಡು ಹೊರಳಾಡಿ ಪ್ರಾಣಬಿಡುತ್ತಾನಂತೆ. [illegible]ದಂತೆ. ಆ ಹುಟ್ಟು ಬೇನೆ ಆವರಿಸಿದ ಕೆಲವು ದಿನಗಳಲ್ಲಿಯೇ ಪ್ರಾಣ ಬಿಡುತ್ತಾನೆ.

ನಮ್ಮ ವಾಡೆಯ ಹಿತ್ತಲಲ್ಲಿ ಕಕ್ಕಸವಿದೆ ಕುಳಿತುಕಟ್ಟೆದಾಟಿ ಅಲ್ಲಿ ಹೋಗಬೇಕು, ನಮ್ಮ ಚಿಕ್ಕಪ್ಪನಿಗೆ ತುಳಸೀ ಕಟ್ಟೆಯ ಸಮೀಪ ಚುಚ್ಚಿದ ಮೊಳೆಯಿಂದ ಈ ರೋಗ ಬಂದು ಪ್ರಾಣಬಿಟ್ಟರು ಇದನ್ನು ಆಧುನಿಕರು ಟಿಟಾನಸ್ ಎಂದು ಇಂಗ್ಲಿಷನಲ್ಲಿ ಕರೆಯುತ್ತಾರೆ.

22

ನನ್ನ ಚಿಕ್ಕಪ್ಪನ ಮರಣದ ಸಮಯದಲ್ಲಿ ನನ್ನ ಚಿಕ್ಕಮ್ಮ ಗರ್ಭಿಣಿ. ಕೆಲ ತಿಂಗಳ ನಂತರದಲ್ಲಿ ಆಕೆ ಗಂಡುಮಗುವನ್ನು ಹೆತ್ತಳು 'ರಾಮ' ಎಂದು ನಾಮಕರಣ ಮಾಡಿದ್ದಾರೆ

ಚಿಕ್ಕಪ್ಪನಲ್ಲಿದ್ದ ಕೆಲ ವೈಶಿಷ್ಟ್ಯಗಳ ಬಗ್ಗೆ ಹೇಳಲೇಬೇಕು.

ಚಿಕ್ಕಪ್ಪ ಜೀವಂತವಿರುವ ವರೆಗೂ ತಂದೆಯವರು ನೌಕರಿಯನ್ನು ಮಾತ್ರ ಗಾ ನೇಮಿಸಿಲ್ಲ!

ಆಗಿನ ಪೋಲೀಸ ಖಾತೆಯಲ್ಲಿ 'ಚಾಣಾಕ್ಷನಾದ' ಎಂದು ಹೆಸರು ಪಡೆದಿದ್ದರು. ಕಳವು ಖೂನಿ ಮುಂತಾದ ಅಪರಾಧಗಳನ್ನು ಪತ್ತೆ ಹಚ್ಚುವಲ್ಲಿ ನಿಸ್ಸೀಮರು. ಅವರ ಜೊತೆ ಕೆಲಸ ಮಾಡುತ್ತಿದ್ದ ಕೆಲ ಅಧಿಕಾರಿಗಳು ಹೇಳುತ್ತಿದ್ದರು: ಊರಲ್ಲಿ ಏನಾದರೂ ದೊಡ್ಡ ಅಪರಾಧ ನಡೆದರೆ ಇವರು (ಚಿಕ್ಕಪ್ಪ) ಕೆಲ ದಿನಗಳು ನಾಪತ್ತೆ, ಕೆಲ ಬೆಳಗು ಮುಂಜಾನೆ ಊರ ಹೊರಗೆ ಮುದುಕರು ಊರ ಹೊರವಲಯದಲ್ಲಿ ಚೊಂಬು ಕಟ್ಟಿಕೊಂಡು ಕೆರೆಪಕ್ಕಕ್ಕೆ ಹೋಗುವದು ಸಾಮಾನ್ಯ. ಅಂಥ ಪ್ರಸಂಗಗಳಲ್ಲಿ ಹರಟೆಗೆ ಪ್ರಾಧಾನ್ಯ. ಊರಲ್ಲಿಯ ಆಗುಹೋಗುಗಳನ್ನು ಚರ್ಚಿಸುವದೇ ಹರಟೆಯ ಮುಖ್ಯ ವಿಷಯ - ಸಹಜವಾಗಿಯೇ ರಹಸ್ಯಮಯ ಸುದ್ದಿಗಳು ಮಾತಿನಲ್ಲಿ ಬರುವದು ಸ್ವಾಭಾವಿಕ - ಈ ಮಾತಿನಲ್ಲಿ ಕೆಲವು ಸೂತ್ರಗಳು ಹೊರಬೀಳುವದು ಸಹಜ. ಅಂಥ ಮಾತುಗಳಿಂದ ಊರಲ್ಲಿ ನಡೆದ ಕಳವು, ಹಾದರ, ಖೂನಿ ಹೊಂಚು ಮುಂತಾದ ವಿಷಯಗಳಿಗೆ ಸುಳಿವು ಸಿಕ್ಕುತ್ತಿದ್ದವು. ಅದನ್ನು ಕೈಕೊಂಡು ಚಿಕ್ಕಪ್ಪ ಕುಂಟುತ್ತ ಹೋಗುತ್ತಲೇ ಕೊಂಡಿಯಾಗಿ ತಕ್ಕಪಕ್ಕ ಬಂದ ಗುಂಪಿನಿಂದ ಅನತಿದೂರ ಕದ್ದುಕುಳಿತುಕೊಂಡು ಅವರಾಡುವ ಮಾತುಗಳನ್ನೆಲ್ಲ ಕದ್ದು ಆಲಿಸುವದು. ಅಂಥ ಮಾತುಗಳು ಪತ್ತೆದಾರಿ ಕಾರ್ಯಕ್ಕೆ ಬಹಳ ಅನುಕೂಲವಾಗುತ್ತಿದ್ದವು. ಅಪರಾಧದ ವಿಶೇಷತೆಯೋ ಆ ಮೊಕದ್ದಮೆಯನ್ನು ವಿವರವಾಗಿ ಪರಿಶೀಲಿಸಲು ಪೋಲೀಸು ಖಾತೆಯವರಿಗೆ ವಿವರ ಕೊಡುವದು ಚಿಕ್ಕಪ್ಪನ ದೈನಂದಿನವಾಗಿರುತ್ತಿತ್ತು. ಅಂಥ ವಿವರಗಳಿಂದ ಪೋಲೀಸು ಖಾತೆಯವರು ಕೆಲ ಅಪರಾಧಗಳನ್ನು ಪತ್ತೆಹಚ್ಚಿದ್ದುಂಟು. ಹೀಗಾಗಿ ಎಲ್ಲಿಯೋ ಗಂಭೀರ ರೀತಿಯ ಅಪರಾಧ ಒಂದು ನಡೆಯಿತೋ ಚಿಕ್ಕಪ್ಪನಿಗೆ ಪೋಲೀಸರ ಆಮಂತ್ರಣ ಬರುತ್ತಿದ್ದದ್ದು! ಈ ರೀತಿಯಾಗಿ ಅಪರಾಧ ಪತ್ತೆಹಚ್ಚುವಲ್ಲಿ ಚಾಣಾಕ್ಷನಾಗಿದ್ದನೋ, ಹಾಗೆಯೇ ಅವನೊಬ್ಬ ಉತ್ತಮ "ಶಿಕಾರಿ" ಯೆಂದೂ ಹೆಸರುಗಳಿಸಿದ್ದ!

ನಮ್ಮೂರು ಮಲೆನಾಡಿನಂತಹ ಅಲ್ಲವೇ ಅಲ್ಲ ಆದರೂ ಅಲ್ಲಲ್ಲಿ ಚಿಕ್ಕ ಪುಟ್ಟ ಅಡವಿಗಳನ್ನು ನೋಡಬಹುದಿತ್ತು. ಅಂಥ ಕಾಡುಗಳಲ್ಲಿಯೇ ಚಿರತೆ ಚಿಗರೆ ಕಾಡು ಹಂದಿ ಮೊಲಗಳು ಮುಂತಾದ ಪ್ರಾಣಿಗಳು ಇರುತ್ತಿದ್ದವು, ಅಲ್ಲದೆ "ಡಬಗಳ" ಎಂಬ ಕೃತಕ ಥರದ ಕಾಡುಗಳು ನೆಲದಲ್ಲಿ ತುಂಬ ಇರುತ್ತಿದ್ದವು, ವನ್ಯಪ್ರಾಣಿಗಳು, ಅದೂ ಅನಾದಿಯೇ ದಟ್ಟವಾಗಿ ಬೆಳೆಯುತ್ತ "ಕಳ್ಳಿ" ಇದು ಈ ವನ್ಯಪ್ರಾಣಿಗಳಿಗೆ ಆಶ್ರಯ ಕೊಡುತ್ತಿದ್ದವು, ಹೀಗಾಗಿ ಚಿಕ್ಕಪ್ಪನಿಗೆ ಬೇಟೆಯ ಹವ್ಯಾಸ ಪ್ರಾರಂಭವಾಯಿತು ಮನೆಯಲ್ಲಿ ಡಬಲ್‌ಬಾರ 12 bore ಬಂದೂಕು ಇತ್ತು, ಆ ತುಪಾಕಿಯಲ್ಲಿ ಒಂದು ಸಮಯಕ್ಕೆ ಎರಡು ಕಾಡತೂಸುಗಳನ್ನು ಲೋಡಮಾಡಲು ಸಾಧ್ಯವಿತ್ತು. ಬೇಟೆಗಾರರ ಹವ್ಯಾಸ ಆಸಕ್ತಿ ಇದ್ದಂತೆ. ಚಿಕ್ಕಪ್ಪ ಇನ್ನೊಂದು ತುಪಾಕಿಯನ್ನು ತಂದಿದನು ಅದರಲ್ಲಿ ಒಂದು ಸಲಕ್ಕೆ ಐದು ಕಾಡತೂಸುಗಳನ್ನು ಲೋಡಮಾಡುವ ಅನುಕೂಲವಿತ್ತು

ಚಿಕ್ಕಪ್ಪ ಬೇಟೆಗೆ ಹೊರಟನೆಂದರೆ ಅವನಿಗೆ ಸಹಾಯಕರಾಗಿ ೬-೭ ಜನ ಹಿಂಬಾಲಕರು

ಇರುತ್ತಿದ್ದರು - ಅದರಲ್ಲಿ ರಾಜೇಸಾಬ - ಅಂಗಡಿ ಎಂಬುವವನು ಮುಖ್ಯನು. ಅವನು
[illegible] ಸಹಾಯಕನಾಗಿರುತ್ತಿದ್ದನು. ಆ ಕಾಡು ಪ್ರಾಣಿಗಳ, ವಾಸ್ತವ್ಯದ ಸ್ಥಳ, ಅವುಗಳ
ಚಲನವಲನಗಳು ಹೀಗೆ ಈ ಎಲ್ಲ ವಿವರಗಳನ್ನು ಪತ್ತೆಹಚ್ಚುವುದು ರಾಜೇಸಾಬನ
ಕೆಲಸವಾಗಿತ್ತು. ಈ ವಿವರಗಳು ದೊರೆತ ಮೇಲೆಯೇ ಬೇಟೆಯ ದಿನ, ಬೇಟೆಯ ಸ್ಥಳ
ಬೇಟೆಯ ಸಮಯಗಳನ್ನು ನಿಶ್ಚಿತಪಡಿಸಲಾಗುತ್ತಿತ್ತು. ಸಂ [illegible]
[illegible] ಆಹಾರ ನೀರು ಸಂಗ್ರಹಿಸಿಕೊಂಡು ತುಬಾಕಿಗಳಿದ್ದವರು ಉಳಿದವರ ಕೈಯಲ್ಲಿ
ಬರ್ಚಿ, ಕೊಡಲಿ, ಖಡ್ಗಗಳು ಮುಂತಾದ ಆಯುಧಗಳು ಇರುತ್ತಿದ್ದವು.

ನನಗೆ ನೆನಪಿದ್ದ ಮಟ್ಟಿಗೆ ಚಿಕ್ಕಪ್ಪನು ಆರು ಚಿರತೆಗಳ ಬೇಟೆಯಾಡಿ
ದ್ದಾನೆ. ನಂತರ ಅದರಿಂದಾಗಿ ಪೋಲೀಸರ [illegible] ಒಂದು [illegible]
ಅದು [illegible] ಆಗಿಹೋಯಿತು. ಅಲ್ಲಿಗೆ ಚಿಕ್ಕಪ್ಪನ ಅಂತ್ಯವೂ ಆಯಿತು.

× × ×

ನನ್ನ ಮುಂಜಿವಿ

ನಿಜವಾಗಿಯೂ ನನ್ನ ತಂದೆಯವರೇ ನನಗೆ ಮುಂಜಿ [illegible]
ನನ್ನ ಉಪನಯನದ [illegible] ಕಾರಣ ನನ್ನ ಉಪನಯನದ ಸಂಬಂಧ
[illegible] ಒಂದು ವಿಚಿತ್ರ ಘಟನೆಯನ್ನು [illegible].

ನನ್ನ ತಂದೆಯವರು ಮನೆಯಲ್ಲಿಯ ಮಹತ್ವದ ಘಟನೆಗಳನ್ನು ಹೇಳು
ವ ಮುಂಚೆ ಪೂಜ್ಯ ಶ್ರೀ ನಾರಾಯಣ ಭಗವಾನರಿಗೆ ತಿಳಿಸದೆ ಅವರ ಅಪ್ಪಣೆ ಇಲ್ಲದೆ ನೆರವೇರಿ
ಸುತ್ತಿರಲಿಲ್ಲ! ಅದೇ ತಾನೇ ಶೇಷಾಚಲ ಸಾಧುಗಳ ಜಯಂತ್ಯುತ್ಸವ ಮುಗಿದಿತ್ತು. ಭಗವಾನ
ರು ಇನ್ನೂ ಆನಂದವನದಲ್ಲಿಯೇ ಇದ್ದರು. ಮೈವಗೆ ಇನ್ನೂ ಹೋಗಿರಲಿಲ್ಲ. ~~ವ [illegible]~~
1933 ಇರಬೇಕೆಂದು ತೋರುತ್ತದೆ ನನಗೆ ೯ ವರ್ಷದ ವಯಸ್ಸಿನವನಿರಬೇಕು.
ದಿನವೂ ಹೋಗುವಂತೆ ಅವತ್ತು ಕೂಡ ಆನಂದವನಕ್ಕೆ ಭಗವಾನರೊಡನೆ ಹರಟು
ತ್ತಿದ್ದಾಗ ಅಕಸ್ಮಾತ್ ತಂದೆಯವರಿಗೆ ಅದೇನು ಹೊಳೆಯಿತೋ ಏನೋ" ಮಗನ -
ಮುಂಜಿವಿ ಮಾಡಬೇಕು ಬೇಗನೆ ಮಾಡುವದೆಂದು ಹೇಳಿದರೆ ನಾನು ಸಿದ್ಧತೆ -
ಮಾಡಿಕೊಳ್ಳುತ್ತೇನೆಂದು ಉಸಿರು ಬಿಡುತ್ತ ಭಗವಾನರ ವಾಣಿ ಅಟಂಬಾಂಬಿನಂತೆ -
ಸ್ಫೋಟವಾಯಿತು 'ನಾಳಿಲ್ಲದೇ ನಾಡಿದು ಮುಹೂರ್ತ ದಿನವಿದ್ದಾದೆ" ಅವತ್ತು ಮಾಡಿ
ಬಿಡಿ" ಎಂದು ನಿಶ್ಚಿತವಾಣಿಯಲ್ಲೇ ಆಜ್ಞಾಪಿಸಿದರು. ಹೌಹಾರಿದ ನನ್ನ ತಂದೆ ಸ್ತಂಭೀ
ಭೂತರಾಗಿ ನಿಂತು ಅಂದರೆ ಒಂದೇ ದಿನದಲ್ಲೆ ಎಲ್ಲ ತಯಾರಿ ಮಾಡಬೇಕು ದೊಡ್ಡ
ಬಳಗಕ್ಕೆ ಎಲ್ಲರಿಗೂ ಆಮಂತ್ರಣ ಹೋಗಬೇಕು ಎಂದು ಮನಸ್ಸಿನಲ್ಲಿಯೇ ಗುಣುಗುಟ್ಟಿ
ದರು. ತಂದೆಯವರು ನಾರಾಯಣ ಭಗವಾನರು ಮತ್ತು ಅಧಿಕಾರವಾಣಿಯಿಂದ [illegible]
ಸ್ವಾಮಿಪ್ಪನ ಎಲ್ಲ ಸರಿ ಹೋಗುತ್ತದ ಕಾರ್ಯಪ್ರಾರಂಭಿಸಿಬಿಡಿ - ಮನ್ನಿಯೇ ಜಯಂತು.
ತ್ತವ ಮುಗಿದ ಕೋಟಿನ ತುಂಬಿದ - - - . ಎಂದು ನುಡಿದ ಭಗವಾನರು ನಿಂ
ಹಾಸನವು ನೆಯ ಕಡೆ ಹೊರಟೇ ಹೋದರು - !

ಮುಂದೆ ಒಂದು ಕ್ಷಣವೂ ತಂದೆಯವರು ಅಲ್ಲಿ ನಿಲ್ಲಲಿಲ್ಲ. ತಡಬಡಿಸುತ್ತ
ಬಂಗ್ಲೆಗೇ ಬಂದವರೇ 'ಏ ಭಂಡ್ಯಾ. ಬಾಯಿಲ್ಲೆ' ಎಂದು ತಮ್ಮನನ್ನು ಕರೆದು "ನೋಡು

ನೋಡು. ಸಾವಿ (ಸಾವು) ಮುಂಜಿವಿನ ಸಾಡದ್ದೇ ಮಾಡುವದೆಂದು ಭಗವಾನರು ಹೇಳಿದ್ದಾರೆ ಅದಕ್ಕೆ ಎಲ್ಲ ತಯಾರ ಮಾಡಬೇಕೆಂದು ಸತ್ತೆ ಮತ್ತು ಅಧಿಕಾರದವಾಣಿಯಿಂದ ಹೇಳಿದರು

ಎಂಥದ್ದೇ ಇರಲಿ ನನ್ನ ರಟ್ಟೆಗಳಿಗೆ ಬಲದ ಶಕ್ತಿ ಇಮ್ಮಡಿಸುತ್ತಿತ್ತು ಈ ಸೇವೆಯಿಂದ ತಾ
ತ್ವಿಕವಾದುದು, ನೈತಿಕವಾದಿಯ ಶಕ್ತಿ ಹಾಗು ಮಾನಸಿಕ ಬಲ ನೂರರಷ್ಟು ಹೆಚ್ಚಿತು
ಒಂದು ಒಳ್ಳೆಯ ಮುಹೂರ್ತ ನೋಡಿ ಗೋಪುರದ ಕಟ್ಟಡ ಪ್ರಾರಂಭಗೊಂಡಿತು

ಕಟ್ಟಡಕ್ಕೆ ಬೇಕಾಗುವ ಸಾಮಗ್ರಿ, ಆಳುಗಳು, ಅಂಥ ಏನೇ ಕೆಲಸವಿದ್ದರೂ ನಗರ
ಭೀಮಾಚಾರ್ಯರ ಹೊಣೆ, ಆಳುಗಳಿಗೆ ಗೌಂಡಿಗಳಿಗೆ ಮತ್ತಿತರ ಸಾಮಗ್ರಿಗಳಿಗೆ ಹಣ ನೀಡಿ
ಲೆಕ್ಕ ಇಡುವ ಕಾರ್ಯವೂ ಅವರದೇ. ನನ್ನದು ಸೇವಾದೃಷ್ಟಿಯಿಂದ ನಡೆಯುವ ಕೆಲಸ
ಮಾತ್ರ. ಉದಾಹರಣಾರ್ಥ ಕಟ್ಟಡಕ್ಕೆ ಉಪಯೋಗಿಸುವ ಇಟ್ಟಿಗೆಗಳು ೨೪ ಘಂಟೆಯಾದರು
ನೀರಲ್ಲಿ ನೆನೆಯಬೇಕೆಂಬುದನ್ನು ಕೇಳಿದ್ದ ನಾನು ಆ ಸೇವೆಯ ಶ್ರದ್ಧೆಯಿಂದಲೇ ನೆರವೇರಿಸುತ್ತಿ
ದ್ದೆ. ಜೊತೆಗೆ, ಕಟ್ಟೆ ನಿರ್ಮಾಣವಾಗುವ ಗೋಪುರದ ಅಂದ ಕೆಡದಂತೆ ನೋಡಿಕೊಳ್ಳುವುದೂ
ನನ್ನ ನೈತಿಕ ಜವಾಬ್ದಾರಿಯ ಹೊಣೆ ಇಂಥ ಜಾಗರೂಕತೆಯಲ್ಲೂ ಕೆಲವು ಅಪಘಾತ ನಡೆದು
ಹೋಯಿತು. ಅದು ನಡೆದದ್ದು ನನ್ನ ಗೈರು ಹಾಜರಿಯಲ್ಲಿ. ಸಾಮರಾಯರಿಗೆ ನಾನಾಗಲ್ಲ
ಕೊಳ್ಳಿ ನನ್ನ ತಂಗಿ ಬಾಣಂತಿಯಾಗಿದ್ದಳು ಗಂಡು ಮಗು ಆದರೆ ಆ ಹಬ್ಬದ ಸಮಯದಲ್ಲಿ

…ಮಾಲೀಕದಲ್ಲಿಯೂ ಆ ಹನಿಗಳನ್ನು ಪ್ರಾರಂಭಿಸಿತು, ಬಾಲ್ಯಾವಸ್ಥೆಯಲ್ಲಿ ನನ್ನ ತಾಯಿ ಮೊದಲೇ ತೀರಿಕೊಂಡಿದ್ದರು, ಈ ದುರ್ಘಟನೆ ನಡೆದ ಮೇಲೆ ನನ್ನ ತಾಯಿಗೆ ಸಹಾಯಕನಾದ ನಾನು, ಕ್ಕೋಡಿ ಅಲ್ಲಿ ಅಂಗಳದಲ್ಲಿ ಇರುವ ಪ್ರತಿಯೊಂದು ಬಂದು, ಗೋಪುರದ ಕೆಲಸ ಮುಕ್ತಾಯ ಹಂತದಲ್ಲಿತ್ತು. ಕಳಶವನ್ನು ಕ್ರೇನ್ ಚಿತ್ರ ಗುಂಬಜದ ಮೇಲಿರಿಸಿತ್ತು. ಅದನ್ನು ನೋಡುತ್ತಲೇ ನನ್ನ ತಲೆ 'ಬಂದ್' ಎಂದಿತು. ಮಹದ್ಭಾಗ್ಯ ನನ್ನ ನಕ್ಷೆಯಲ್ಲಿದ್ದ ನಿರಂಗದ ಆಕಾರವನ್ನು ಆ ಗುಂಬಜದ ಮುಕ್ತಾಯದ ಹಂತದಲ್ಲಿ ಅಷ್ಟಿಬಿಟ್ಟಿದ್ದ. ಆ ವ್ಯತ್ಯಾಸವನ್ನು ನೋಡಿ ನನಗೆ ತಡೆದುಕೊಳ್ಳುವದಾಗಲಿಲ್ಲ, ಮಹಾದೇವಪ್ಪನನ್ನು ಕರೆದೆ, ಆಗಿದ್ದ ತಪ್ಪನ್ನು ವಿವರಿಸಿ ಹೇಳಿದೆ. ಆ ಸೂಚನೆಗೆ ಅವನು ಒಪ್ಪಲಾರದವನಾದ, ಆ ತಪ್ಪನ್ನು ಅವನಿಗೆ ಬಿಂಬಿಸಬೇಕಾದ ಸಾಕು ಬೇಕಾಯಿತು. ಮತ್ತೆ ಅದೇ ಆಕಾರದಲ್ಲಿ ಕಾಗದದ ಮೇಲೆ ಚಿತ್ರಿಸಿ ಕತ್ತರಿಸಿ ತೋರಿಸಿ ಅವನಿಗೆ ತಪ್ಪಿನ ಅರ್ಥವಾಯಿತು.--

ಆದರೆ ಭೀಮಾಚಾರ್ಯರು ಅದಕ್ಕೆ ಒಪ್ಪಲು ಸಿದ್ಧರಿಲ್ಲ. ಏಕೆಂದರೆ ಅದಕ್ಕೆ ಉಪಯೋಗಿಸಬೇಕಾದ ಸಲಕರಣೆಗಳನ್ನೆಲ್ಲ ಉಪಯೋಗಿಸಿ ಆಗಿದೆ, ಸಾಂದಿಗಳು ಅದರ ಕಲ್ಪನೆ ಮಾಡಿದ್ದು ಅವರ ಕಾಲಾಯವನ್ನು ಕೆಡಿಸಬೇಕಾಗಿದೆ. ಈ ರೀತಿಯಾಗಿ ಅದನ್ನು ತಿದ್ದಲು ಹೋದರೆ ಈ ಅಧಿಕ ಹಾನಿಯಾಗುತ್ತದೆ ಎಂದು ಭೀಮಾಚಾರ್ಯರ ವಾದ. ಅದು ಬದಲಿಯಾಗಲೇ ಬೇಕೆಂದು ನನ್ನ ಹಠ. ಈ ಜಗ್ಗಾಟ ನಡೆಯಿತು, ಇದರ ನಿರ್ಣಯ ಮಾಡಬೇಕಾದ ಬ್ರಹ್ಮಾನಂದರು ಊರಲ್ಲಿಲ್ಲ.

ಏನೇ ಆಗಲಿ ಆ ಆಗಿರುವ ತಪ್ಪನ್ನು ತಿದ್ದಲೇಬೇಕು ಅಧಿಕ ಹಾನಿಯ ಪ್ರಶ್ನೆ ಎಂದರೆ ಗುರುಗಳಿಗೆ ನಾನು ಹೇಳುತ್ತೇನೆಂದು ವಾದಿಸಿ ಕೆಲಸಗಾರರ ಅಭಿಪ್ರಾಯಕ್ಕೆ ಪಾತ್ರನಾದೆ. ನಂತರ ನಾನು ಎದುರಿಗೆ ನಿಂತು ಆ ತಿದ್ದುಪಡಿಯನ್ನು ಮಾಡಿಸಿದೆ, ಅದು ಆಗದಿದ್ದರೆ ಕಲೆಯ ವಿಷಯ ಅಲ್ಪ ಜ್ಞಾನವಿದ್ದವರೂ ಕೂಡ ನೋಡಿ ನಗುವಂತಾಗುತ್ತಿತ್ತು. ಅದು ತಿದ್ದಿಯಾದ ಮೇಲೆ - ಅಕ್ಕ ಪಕ್ಕ ಕಳಸದ ನಕ್ಷೆಯನ್ನು ಬ್ರಹ್ಮಾನಂದರ ಆಜ್ಞೆಯ ಮೇಲೆ ಕಾಗದ ಕತ್ತರಿಸಿ ಸಿದ್ಧಪಡಿಸಿದೆ. ಕಳಸವನ್ನು ತಾಮ್ರದ ತಗಡಿನಿಂದ ಸಿದ್ಧಪಡಿಸಿ ಹೊರಮೈಗೆ ಚಿನ್ನದ ಗಿಲೀಟು ಮಾಡಲಾಯಿತು, ಈ ಜವಾಬ್ದಾರಿಯನ್ನು ಇನ್ನೊಬ್ಬ ಹಿರಿಯ ಕಲಾವಿದರಾದ ಬೆಂಗಳೂರಿನ ಎ.ವಿ. ಸುಬ್ಬರಾಯರಿಗೆ ಒಪ್ಪಿಸಿದರು. ಅದು ಸಿದ್ಧವಾದ ಮೇಲೆ ಸುಬ್ಬರಾಯರೆ ಸ್ವತಃ ತೆಗೆದುಕೊಂಡು ಬಂದರು. ಅವರು ನಾನು ಶ್ರೀಯಂತ್ರ ಗೋಪುರದ ಮೇಲೆ ಹತ್ತಿ, ಅದಕ್ಕೆ ಎಷ್ಟು ಇಂಚಿನ ಪೀಠ ಹಾಗು ಕಟ್ಟಡದಲ್ಲಿ ಎಷ್ಟು ಒಳಗೆ ಸೇರಿಸಬೇಕೆಂಬುದನ್ನು ನಿರ್ಧರಿಸಿದೆವು, ಕೆಲದಿನಗಳ ನಂತರ ಧಾರ್ಮಿಕವಾಗಿ ಕಳಸಾರೋಹಣವಾಯಿತು!

ಹಾವೇರಿಯ ಶಂಕ್ರಪ್ಪ ಮೋಟೆಬೆನ್ನೂರ

"ಮೋಟೆಬೆನ್ನೂರ" ಅಡ್ಡಹೆಸರಿನ ಅಕ್ಕಸಾಲಿಗರ ಮನೆತನ ಒಂದು ಹಾವೇರಿಯಲ್ಲಿತ್ತು. ಆಗಿನ ಹಿರಿಯರು ಕೀರ್ತಿಶೇಷ ರಾಚಪ್ಪ ಎಂಬುವರು [illegible] ಅವರನ್ನು ನಾನು ನೋಡಿರಲಿಲ್ಲ ನನ್ನ ತಂದೆಯವರು ಅವರ [illegible] [illegible] ತಿಳಿಸುತ್ತಿದ್ದರು ಎಂದು ಅವರ ಮಗ [illegible] ಹೇಳುತ್ತಿದ್ದರು [illegible] ನನ್ನ ತಂದೆಯವರು. ಅಕ್ಕಸಾಲಿಗರು [illegible] [illegible] ಕಲೆ [illegible] [illegible] [illegible]

ಬರುವಂತ ಮುಂತಾದ ಕಾಲದಲ್ಲಿ ಅವರಿಗೆ ವಿಶೇಷವಾಗಿಯೇ ಕೈಗೊಡುತ್ತದೆ. ಸಂಸ್ಕೃತ ದ ಅಂಕಗಳ ಪ್ರಸ್ತಾಪವಾಗಿತ್ತು. ಸಂಸ್ಕೃತ ತಂದೆಯ [illegible] ಮುಂದುವರಿಸಿಲ್ಲ ಪುಸ್ತಕವನ್ನು ಕೃಷಿ ಸಂಬಂಧಿಸಿದ ಏನೇನೋ ಕೆಲಸಗಳನ್ನು ಮಾಡುವಲ್ಲ ಅವನು ಆ ಸ್ಥಳ ನಾಡಿನ ಆದ್ದ.

ನಮ್ಮ ವಿದ್ಯಾರ್ಥಿಗಳಾದರು ಹೇಗಿನ ಕಲಿಯುತ್ತಿದ್ದರೆಂದರೆ ಅವರು ದಿನ್ನ ಹೈಸ್ಕೂಲಲ್ಲಾದರೂ ಕಲಿಯುತ್ತಾರು, ನಮ್ಮ ಊರವರು ಕೆಲವರು ಹಳ್ಳಿಯ ವಿದ್ಯಾರ್ಥಿಗಳಾಗಿದ್ದರು ಇದ್ದವರು ಶಾಸ್ತ್ರಿಯವರಲ್ಲಾದರೂ ಮನೆಪಾಠ ಮತ್ತು ಅಭ್ಯಾಸ [illegible] ನಡೆಸುತ್ತಿದ್ದು ಅನುಕೂಲವಿಲ್ಲದವರು ನಡೆದುಕೊಂಡೇ [illegible] ಆ ಅಭ್ಯಾಸ ಮುಂದುವರಿಸಿತು.

ಸಂಸ್ಕೃತವನ್ನ [illegible] ಹೈಸ್ಕೂಲು ವಿದ್ಯಾರ್ಥಿ [illegible] ಮಾಡುವಾಗ [illegible] ಮಾಡುತ್ತಿದ್ದನು [illegible] ಅಂದರೆ ಶ್ಲೋಕವೃತ್ತದಲ್ಲಿ [illegible] ಬರೆಯುವುದು ಆಗ ಭಾರ ಆದಲ್ಲ [illegible] ಅವರಿಗೆ ಇರಲಿಲ್ಲ ಎಂದು ಕಾಣುತ್ತದೆ (?) [illegible] ಹಾಗೆಂದು [illegible] ವೃತ್ತಕ್ಕೆ [illegible] ಇದ್ದರು, ಅದಕ್ಕೆ [illegible] ಪ್ರಶ್ನೆಗಳ್ಳಿ [illegible] ಚಿತ್ರಗಳಲ್ಲಿ ಬರುತ್ತಿದ್ದವು, ಆ ಪದ್ಯಗಳನ್ನು [illegible] ವವರು ಬೇಕ [illegible] ಅಲ್ಲಲ್ಲಿಗೆ [illegible] ಮಾಡಿಕೊಳ್ಳಬೇ [illegible] ಆ [illegible] [illegible] ಸಂಸ್ಕೃತ [illegible] ನಮ್ಮೂರ ಶಾಸ್ತ್ರಿಯವರಲ್ಲಿದ್ದ ವಿದ್ಯಾರ್ಥಿಗಳು [illegible] ಪದ್ಯಕ್ಕೆ ನಾವಲ್ಲ [illegible] ಎಂದು ಹೇಳುವರು [illegible] ಆ ವಿದ್ಯಾರ್ಥಿಗಳಲ್ಲಿ ನಮ್ಮಲ್ಲಿಗೆ ಬಂದರು ಸಂಸ್ಕೃತ ನನ್ನ ಕೆಲವು [illegible] ನೋಡಿದರು [illegible] ಆ [illegible] ಪದ್ಯಂಗಳ [illegible] ಹಾಗು [illegible] ಪದ್ಯಗಳ [illegible] ಮಾಡಿ [illegible] ? ಎಂದರು ಕೇಳಿದರು. ನಾನು ಮಾಡಿದ್ದು ಅವರ ಮನಸ್ಸಿಗೆ [illegible] ನಾನು [illegible] ಪದ್ಯಗಳನ್ನು [illegible] ಮನೆಗೆ ತೆಗೆದುಕೊಂಡು ಹೋಗಿ [illegible] [illegible] ಬಂದರು [illegible] ಅಂಥ ಪದ್ಯಗಳು [illegible] [illegible] ಹಾಗೆ ಅವರು [illegible] ಪದ್ಯ ತರುತ್ತಲೇ [illegible] ನಾನು ಮಾಡಿಕೊಡುತ್ತಲೇ [illegible] ಕೆಲವು [illegible] ಬಗೆ ಅವರು ಕೇಳಲಿಲ್ಲ ನಾನು ಅದರ ಪ್ರಸ್ತಾಪ ಮಾಡಲಿಲ್ಲ -- ಬಹಳ ಕಾಲ ಹೀಗೆ ನಡೆಯಿತು, ಒಂದು ದಿನ [illegible] [illegible] ಶಾಸ್ತ್ರಿ [illegible] ಕಾಲು [illegible] ಅವರ [illegible] ಮಾಡುವ [illegible] ಅದು. [illegible] ಮನೆಯಲ್ಲೇನೋ [illegible] ಯಿಂದ ಅದಕ್ಕೆ [illegible] [illegible] ಎಂದು [illegible] ಮಾಡಿದ್ದಾಯಿತು ಅದು [illegible] ಆ [illegible] ಸಂಸ್ಕೃತ [illegible] ಹೈಸ್ಕೂಲಿನಲ್ಲಿ [illegible] ಎಂದು [illegible] ಇತ್ತು ಮ ನಾನು [illegible] ಅದು [illegible] ನನ್ನಲ್ಲಿದ್ದ [illegible] ಜ್ಞಾನವನ್ನು [illegible] ಲಾಭ [illegible] ಎಂಬ ಶಂಕೆ ನನ್ನಲ್ಲಿ [illegible].

[illegible] ವಿಷಯದ [illegible] ಹೈಸ್ಕೂಲಿನಲ್ಲಿದ್ದ

ಡ್ರಾಯಿಂಗ್ ಮಾಸ್ತರರು ಗುಡಿಗಾರರಿಂದಲೂ ಕಲಿತದ್ದು. ಗುಡಿಗಾರರ ಮಾಸ್ತರರು ತಮ್ಮ ಮಗನನ್ನು ಡ್ರಾಯಿಂಗ್ ಟೀಚರ ಕೆಲಸಕ್ಕೆ ಸೇರಿಸಿ ಅದನ್ನು ಮಾಡಿಸಿದ್ದರು. ಹಾಗೂ ತಮ್ಮ ... ಮಗನನ್ನು ಟೀಚರ ಕೆಲಸವನ್ನು ಕಾಯಂ ಬಿಟ್ಟಿದ್ದರು. ಅಂದರೆ ಆ ... ಸಂಸ್ಕೃತದವರಿಗೆ ನೀಡುವುದು ದುಃಸಾಧ್ಯವಾಗಿತ್ತು.

ಆ ಸಮಯ ಪ್ರತಿ ಜಿಲ್ಲಾ ಸ್ಥಳದಲ್ಲಿಯೂ ಡ್ರಾಯಿಂಗ್ ಟೀಚರ ಅಲ್ಲದೇ, ಕ್ರಾಫ್ಟ್ ಟೀಚರ ... ಇರಬೇಕೆಂಬ ಬಂದಿತು. ಒಂದು ಕಾನೂನು ಮಾಡಿ, ಮೊದಲಿನ ಸಂಸ್ಕೃತದವರಿಗೆ ಒಂದೊಂದು ... ಆದರೆ ಆ ಶಿಕ್ಷಕರ ಅರ್ಹತೆ ... ಕ್ರಾಫ್ಟ್ ಟೀಚರ್ಸ್ ಕೋರ್ಸ್ ಮುಗಿಸಬೇಕೆಂಬ ಶಿಕ್ಷಕರು ಇತ್ತು. ಆ ಕಾಲದಲ್ಲಿ ಮುಂಬೈ ... ಮಾತ್ರ ಅದರ ಶಿಕ್ಷಣ ಪಡೆಯಲು ಸಾಧ್ಯವಿರಲಿಲ್ಲ. ಮುಂಬೈಗೆ ಹೋಗಲು ... ಸ್ಥಳವನ್ನು ಪಡೆದ ಸಂಸ್ಕೃತದವರು! ಇನ್ನು ಆರ ಕೆಲವರನ್ನು ಕರೆದುಕೊಂ... ಮುಂಬೈ ಪ್ರಯಾಣಕ್ಕೆ ಅಣಿಯಾದರು ಸಂಸ್ಕೃತದವರು!

ಅವರು ಮುಂಬೈಗೆ ಹೋಗಿದ್ದ ಅವರ ಮೊದಲ ಕಾಗದ ನನ್ನ ಕೈಸೇರಿತು! ಕಾಗದದಲ್ಲಿ ಹೆಚ್ಚಿನ ವಿಷಯ ಏನೂ ಬರೆದಿರಲಿಲ್ಲ. ಮುಂಬೈಯ ವಸತಿಯ ತೊಂದರೆ ಅನುಭವಿಸ ಪ್ರಾರಂಭದ ದಿನದ ... ಮುಂದಾದ ವಿಷಯ ... ಆಗಿದ್ದರು ... ... ದಾಮೋದರರಿಯಲ್ಲಿ ಸಾಧ್ಯವಾಗಿರುವುದಾಗಿ ... ತು.

ಸೋಮನಾಥ ಹನುಮಂತರಾವ್ ಕುಲಕರ್ಣಿ:

ಇವರು ನನ್ನ ಬಾಲ್ಯಸ್ನೇಹಿತರು ದತ್ತಾತ್ರೇಯರ (ಸಾಧು ...) ... ಬಳಿಯ ಮನೆ ಕ್ರಾಫ್ಟ್ ... ಊರಿನವರು ... ಆರಿಸಿಕೊಂಡಿದ್ದರಿಂದ ... ಮುಲ್ಕಿ ... ಸೋಮಣ್ಣ ತಮ್ಮ ... ಇದ್ದರು. ಸೋಮಣ್ಣ ... 'ಬಾಪೂಜಿ' ... ಅವರು ... ಕನ್ನಡ ... ಸೋಮಣ್ಣ ಹೆಚ್ಚಿನ ಓದುವ ... ಹೋಗಲು ಅನು... ಇರಲಿಲ್ಲ - ಸೋಮಣ್ಣನ ... ಇದನ್ನರಿತು ... ಅಲ್ಲಿಯ ... ಎಂಬುವರು ಸಹಕಾರದಿಂದಾಗಿ ಮುಂಬೈಗೆ ಹೋಗಿದ್ದರು. ಅನಂತರ ಮೊದಲು ... ಅವರು ಅವ ಹನುಮಂತರಾವ ... ಆಗಲೇ ಮುಂಬೈ ... ಕುಮಾರರು ಮುಂಬೈಗೆ ಹೋಗಲು ಅವರು ಸಹಾಯ ಮಾಡಿದ್ದರು. ... ಅವರು ... ಬಂದಾಗ ಸೋಮಣ್ಣನಿಗೆ ಮುಂಬೈಗೆ ಹೋಗಿ ಏನಾದರೂ ಸಹಕರಿಸುತ್ತೇನೆಂದು ... ಹೇಳಿದ್ದರು. ಇರಲು ಮನೆಯಲ್ಲಿ ... ಭರವಸೆಯನ್ನು ... ಸೋಮಣ್ಣನಿಗೆ ಆಶ್ರಯ ಆದವು. ಮುಂಬೈಗೆ ಹೋಗಿದ್ದನು. ಸೋಮಣ್ಣನ ... ಆಗಿತ್ತು. ಇನ್ನು ಅನ್ನ ... ವಿದ್ಯಾಭ್ಯಾಸದ ಕಡೆಗೆ ... ಯೋಜನೆಯಾಗಿತ್ತು - ಅಂದೇ ... ಇದರಲ್ಲಿ ಕೂಡಿತ್ತು.

ಅಂತೂ ಸೋಮಣ್ಣ ಮುಂಬೈಗೆ ಹೋಗಿದ್ದ ... ಮೊದಲು ... ಸೋಮಣ್ಣನಿಗೆ ... ಹೇಳಿದ್ದರು ಪ್ರಾರಂಭದಲ್ಲಿ ನಿನ್ನ ಕೆಲಸವನ್ನು ಮಾಡಲು ... ನೆಂದು, ಸೋಮಣ್ಣ ಅದರ ... ಭರವಸೆಯನ್ನು ... ದನು.

1A

SRMotebennur (SRM) ಅವರಿಗೆ ಸೋಮಣ್ಣನ ವಿಳಾಸವನ್ನು ಕೊಟ್ಟಿದೆ ಅವ
ರೀರ್ವರಿಗೂ ಪರಸ್ಪರ ಪರಿಚಯವಿತ್ತು ಸೋಮಣ್ಣನನ್ನು ಒಮ್ಮೆ ಭೆಟ್ಟಿಯಾಗಿ ಬಂ
ದ ವಿಷಯವನ್ನು ಒಂದು ಪತ್ರದಲ್ಲಿ ಬರೆದಿದ್ದರು - ಮುಂಬೈಯಲ್ಲಿ ಅವರು ಕೆಲವು
ಬೇಕಾದ [illegible] ಕಲಿಸುವ ಶಾಲೆಯಾಗಿ ಅಲ್ಲಿ ಸೇರಿದ ನಂತರ ಅದರ ವಿವರ ಕಳಿಸುವ ಪತ್ರ
ಬರೆವ ಅಲ್ಲದೆ ಚಿತ್ರಕಲೆಗೆ ಮುಂಬೈಯಲ್ಲಿ ಎಷ್ಟು ಬೇಡಿಕೆಯಿದೆ ಹಾಗಿದೆ ಎಷ್ಟು
ಮಹತ್ವವಿದೆ ಎಂಬ ವಿವರವನ್ನು ನೀಡಿದ್ದರು ದಿನದಿನಕ್ಕೆ ಜನರ ಪರಿಚಯ ಹೆಚ್ಚು
ತ್ತ ಹೋಗುವದು ಸಹಜ ಹಾಗು ಬೇರಬೇರೆ ಕ್ಷೇತ್ರಗಳಲ್ಲಿರುವವರ ಸಂಪರ್ಕ ಬರುವುದೂ
ಸಹಜ ಇವರು ಇದ [illegible] ಕನ್ನಡಿಗರಾಗಿದ್ದು ಒಂದು ಜಾಹಿರಾತು ಕಂಪನಿ
ಯಲ್ಲಿ ಕೆಲಸವಾಗುವವರು ದೇಶಪಾಂಡೆ (?) ಎಂದು ಅವರ ಹೆಸರಿತ್ತೆಂದು ಕಾಣುತ್ತದೆ.
ಅವರ ಪರಿಚಯದ ವಿಷಯಬರೆಯುತ್ತ ನಿಮ್ಮಂಥವರು ಮುಂಬಯಿಗೆ ಬಂದರೆ ಕೆಲಸ
ಸಿಗಲು ತೊಂದರೆಯಾಗಲಾರದು ಎಂದು ಅವರು ಹೇಳಿದ್ದಾರೆಂದು ಬರೆಯುತ್ತ ನಾನ್ಯಾಕೆ ಒಬ್ಬ
ಮುಂಬೈಗೆ ಬಂದು ಹೋಗಬಾರದೆಂದೂ ಸೂಚಿಸಿದ್ದರು - ಈ ಪತ್ರ ನನ್ನನ್ನು ಮುಂಬೈಗೆ ಆಮಂ
ತ್ರಿಸುವ ಮೊದಲನೆಯ ಪತ್ರವಾಯಿತು

ಮುಂದಿನ ಪತ್ರದಲ್ಲಿ ದೇಶಪಾಂಡೆಯವರು ನಿಮಗೆ ನೌಕರಿ ನೋಡಿಟ್ಟಿದ್ದಾರೆ
ಎಂದೂ ತಿಳಿಸಿದ್ದರು! ಹೀಗಾಗಿ ನನಗೆ ಪ್ರತಿ ಪತ್ರದಲ್ಲೂ ನಾನೇಕೆ ಮುಂಬೈಗೆ
ಹೋಗಬಾರದು ಎಂಬ ಸೂಚನೆ ಇದ್ದೇ ಇರುತ್ತಿತ್ತು. ಅದ್ದು ಅದಕ್ಕೆ ಕಾರಣ ದಿನದಿನಕ್ಕೆ
ಹೆಚ್ಚುತ್ತಿರುವ ಮುಂಬೈ ಸಂಪರ್ಕ - ಅಲ್ಲಿ ಕಲಾವಿದರ ಅವಶ್ಯಕತೆ ಅದರಲ್ಲೂ ನನ್ನಂಥ ಆಲ್
ರೌಂಡರ ಕಲಾವಿದರಿಗಿರುವ ಕೆಲಸಗಳ ಅನುಕೂಲತೆ ಇವೆಲ್ಲ SRM ಅವರನ್ನು ಆಕರ್ಷಿ
ಸಿದ್ದರೆ ತಪ್ಪಲ್ಲ, ಅವರಿಗೆ ನನ್ನ ಬಗ್ಗೆ ಅಷ್ಟೊಂದು ಕಳಕಳಿಯಾಗಿತ್ತು ನಾನು ಮುಂಬೈ ಬಿಡು
ವ ಮುನ್ನ ಒಮ್ಮೆಯಾದರೂ ಬನ್ನಿ ಎಂದೂ ಅವರ ಬಿನ್ನಹವಾಗಿತ್ತು

SRM ರ ಒತ್ತಾಯ ನನ್ನ ಮನಸ್ಸಿನಮೇಲೆ ಪರಿಣಾಮ ಮಾಡತೊಡಗಿತು ಇಷ್ಟೊಂದು
ಕಳಕಳಿಯಿಂದ ಅವರು ಕರೆಯುತ್ತಿದ್ದಾರೆ ಒಮ್ಮೆ ಏಕೆ ಹೋಗಿಬರಬಾರದು ಎಂಬ ವಿಚಾರ ನ
ಡೆಯುತೊಡಗಿತು. ಈ ಮಧ್ಯ ಮತ್ತೊಂದು ಪತ್ರಬಂತು, ಸರಕಾರದ ಸಿದ್ಧತೆಗಳು ಈಗ
ಮುಗಿಯುತ್ತಲ್ಲಿ ನಡೆಯುತ್ತಿರುವದರಿಂದ ಕೆ.ಎಫ್. ಪಾಟೀಲರು ಕುಟುಂಬ ಸಮೇತ ಮನೆಯನ್ನು
ಪುಣೆಗೆ ಬದಲಾಯಿಸಿದ್ದಾರೆ ಅವರ ಮನೆ ಖಾಲಿಯಿದ್ದುದರಿಂದ ನಾವು ಒಟ್ಟಿಗೆ ಕೆಲಕಾಲ ಅಲ್ಲಿ ಆರಾಂ
ಇರಲು ಅನುಕೂಲವಿದೆ, ಇದೊಂದು ಉತ್ತಮ ಸಂಧಿ ನೀವು ಬೇಗ ಬನ್ನಿ ಎಂಬ ಒತ್ತಾಯವೂ
ಬಂತು.

ಅಂದಿನ ಮುಂಬೈಸರಕಾರದಲ್ಲಿ ಮೊರಾರ್ಜಿದೇಸಾಯಿಯವರು ಮಂತ್ರಿಗಳಾಗಿದ್ದರು
ಅವರ ಪಾರ್ಲಿಮೆಂಟರಿ ಸೆಕ್ರೆಟರಿಯೆಂದು K.F ಪಾಟೀಲ ಕೆಲಸ ನಿರ್ವಹಿಸುತ್ತಿದ್ದರು
ಅವರು ನಮ್ಮ ತಾಲೂಕಿನಿಂದ ಆರಿಸಿಬಂದಿದ್ದ MLA ಆಗಿದ್ದರು!

ಸರಿ, SRM ಹೇಳಿದರೆಂದು ಕೂಡಲೇ ಹೊರಡಲು ಸಾಧ್ಯವೇ? ---

ಕೆಲದಿವಸಗಳು ಕಳೆದಿರಬೇಕು ಸೋಮಣ್ಣ ಕೆಲದಿನಗಳ ರಜೆಯ ಮೇಲೆ ಊರಿ
ಬರುವದಾಗಿ ತಿಳಿಸಿದ, SRM ಗೆ ವಿಷ್ಯ ತಿಳಿಯುತ್ತಲೇ, ಮರಳಿ ಬರುವಾಗ ದೇಶಪಾಂಡೆಯವರನ್ನು
ಕರೆದುಕೊಂಡು ಬರಬೇಕೆಂದು ತಾಕೀದು ಮಾಡಿದ್ದ, ಅಲ್ಲದೆ ವಿಷಯವನ್ನು

ನನ್ನ ತಂದೆಯವರಿಗೂ ತಿಳಿಸಲು, ಅವರು ಒಪ್ಪುವಂತೆ ಮಾಡಲು ಹೇಳಿದ್ದರು, SRMಗೆ ಹೋಗುತ್ತ, ಸೋಮಣ್ಣ ತಂದೆಯವರಿಗೆ ಏನಾದರೂ ಸೂಚನೆ ಮಾಡಿದರೆ ಅದನ್ನು ಅವರು ನಿರಾಕರಿಸುವುದಿಲ್ಲವೆಂದು, ಕೇಳಿಸಿದ್ದ ಪತ್ರ ನನಗೆ ಬಾರದ್ದು ಇರುತ್ತದೆಯೇ ನಾನು ಮುಂಬಾಯಿಗೆ ಒಮ್ಮೆಯಾದರೂ ಹೋಗಬೇಕೆಂದು ಮಿಂಚಿದ ವಿಷಯಕ್ಕೆ ಈಗ ರೆಕ್ಕೆ ಪುಕ್ಕ ಬಂದಿದ್ದವು. ಸೋಮಣ್ಣ ಬರಲಿ ನೋಡೋಣವೆಂದು ಸಮಾಧಾನಮಾಡಿಕೊಂಡೆ.

ನನ್ನ ಪತ್ನಿ ಬಸುರಿ

ಇದೇ ಸಮಯದಲ್ಲಿ ನನ್ನವಳು ಬಸುರಿ, ಚೊಚ್ಚಲು ಬಸುರಿ ಎಂದರೆ ತವರಿಗೆ ಹೋಗುವುದು. ತವರುಮನೆಯವರು ಬಡವರು ಇದ್ದ ಅರುವತ್ತೆಲ್ಲ ಮದುವೆಯಾದ ಕೆಲ ತಿಂಗಳ ನನ್ನವ ಚಿಕ್ಕಪ್ಪ ಆರಿಸಿಕೊಂಡರು (ಅಂದೆ ಮುಂಬಯಿಯಲ್ಲಿ ಇದ್ದರು) ಮನೆತನದ ಜೊತೆ ಜವಾಬ್ದಾರಿಯಲ್ಲಿ ಉಮ್ಮಕ್ಕನದೆ (ಅಂದರೆ ಇವಳ ಅಕ್ಕ) ಇವಳ ತಾಯಿ ಮನೆತನದ ಜವಾಬ್ದಾರಿಗಳೆಲ್ಲ ಹೊರಲು ತಯಾರಿರಲಿಲ್ಲ ಅಪ್ಪಂದಿರಿಬ್ಬರು ಇನ್ನೂ ಅಲ್ಪವಯಸ್ಕರು. ಉಮ್ಮಕ್ಕ ತಂದೆ ಬಿಟ್ಟು ಹೋದ ಮನೆಯಲ್ಲಿಯೇ (ಬಾಡಿಗೆ ಮನೆ) ಇರುತ್ತಿದ್ದಳು ತಾಯಿ ತಮ್ಮಂದಿರ ಸ್ವತ್ತರದಲ್ಲಿ ಇನ್ನೊಂದು ಚಿಕ್ಕ ಮನೆಯಲ್ಲಿರು ತ್ತಿದ್ದರು ಸಮ್ಮಿಳಿತವೇ ಹೋದ ಆಸ್ತಿಯನ್ನ ಉಳಿದ ಆಸ್ತಿಯನ್ನು ಕೃಷ್ಣಾಚಾರ್ಯರು ಕೋರ್ಟ್ ತಾಬಾಮಾಡಿದ್ದ ಕಾರಣ ಇವಳ ತಾಯಿಗೆ ಬರುತ್ತಿದ್ದ ಬಡ್ಡಿಹಣ ಕೋರ್ಟಿನಿಂದ ಮುಖಾಂತರವಾಗಿ. ಆ ಹಣ ಮನೆತನ ನಡೆಸಿಕೊಂಡು ಹೋಗುವುದಕ್ಕೆ ಸಾಕಾಗುತ್ತಿರಲಿಲ್ಲ ಅಂಥ ಪ್ರಸಂಗದಲ್ಲಿ ಉಮ್ಮಕ್ಕ ಬಿಚ್ಚಿಟ್ಟ ಹಣ ಸೋರಿಹೋಗುತ್ತಿತ್ತು, ಅವ ಸು ನಿರ್ವಹಿಸುವುದರಿಂದ ಚಿಕ್ಕಮ್ಮ ಮತ್ತು ಅವಳ ಮಕ್ಕಳನ್ನು ಸಲಹಿದ್ದಳು ನಿಜವಾಗಿ ಹೇಳಬೇಕೆಂದರೆ ಉಮಕ್ಕನ ಕಡೆಯಿಂದರೆ ಪರೋಪಕಾರ ಬುದ್ಧಿಯನ್ನು ಸಹ್ಯಮಾಡಿ ಕೊಡುವ ಜೀವ.

ಬಸ್ರೀಕಣ್ಣ ಶಂಕ್ರಪ್ಪ ಅಕ್ಕನಿಂಗಪ್ಪ ಸ್ವಾಮಿ ಹೊನ್ನಪ್ಪ ಮುಂತಾದವರೊಂದಿಗೆ ನನ್ನ ಪರಿಚಯ ವಾಗಿ ನನ್ನ ವಿವಾಹ ಸಂಬಂಧ ಬೆಳೆಸುವಾಗ ಆಗಿದ ಉಮ್ಮಕ್ಕನ ಪಾತ್ರ ದೊಡ್ಡದು. ಅವಳು ಮುಂತುವರ್ಜಿ ವಹಿಸದಿದ್ದರೆ ಈ ಸಂಬಂಧವು ಸಾಧ್ಯವಿರಲಿಲ್ಲ. ಆ ಮೊದಲು ನಾಕೆಂಟು ಕನ್ಯೆ ಗಳನ್ನು ನೋಡಿದ್ದಾಯಿತು ಈ ಮದುವೆ ನಿಶ್ಚಯವಾದಮೇಲೆ ನನ್ನ ಹಬ್ಬದ ಸಮಯದಲ್ಲಿ ಧಾರವಾಡದಲ್ಲಿಯೇ ಸ್ವೀಕಾರ ಆಗಿತ್ತು ಅದೇ ಸಮಯ ಕೆಲ್ವರೊಂದ ಕೆವರಾಯರ ಕಮ್ಯುನಿಸ್ಟ್ ಪಕ್ಷ "ಜನಶಕ್ತಿ" ವಾರಪತ್ರಿಕೆಯ ಪ್ರಕಟನೆಯ ಕಾರ್ಯಕ್ಕಾಗಿ ಆ ಕಾರ್ಯದಲ್ಲಿಯೂ ತೊಡಗಿರುತ್ತಿದ್ದೆ.

ಈಗಿನ 'ಹನಿಮೂನ' ನನ್ನ ಮದುವೆಯ ಸಮಯದಲ್ಲಿಯೂ ಗೊತ್ತಿರಲಿಲ್ಲ. ಶಹ ರದಲ್ಲಿನಾದರೂ ಪ್ರಚಾರದಲ್ಲಿತ್ತೋ ತಿಳಿಯದು, ಆ ವೇಳೆ ಮದುವೆಯಾದಮೇಲೆ ಕೆಲಸ್ಥಳಗಳಿಗೆ ಹೋಗುವುದು ಕಡಿಮೆ ಕೊಂಡ ಹಣವೆಲ್ಲವನ್ನು ತರಿಸುವ ಇಂಥ ಕಾರ್ಯಕ್ರಮಗಳೇ ಹುಟ್ಟಿರುತ್ತಿದ್ದವು

ಇವಳು ಬಸುರಿ ಎಂದು ಗೊತ್ತಾಗುವದು ಆದ 3ನೆ ತಿಂಗಳಲ್ಲಿ 'ಕೈಸಮಸಿ' ಎಂದು ಹಾಡಿದರು 7ನೆ ತಿಂಗಳು Official Announcement of the pregnancy ಆ ತಿಂಗಳು ತೌರುಮನೆಯವರು ಬಸುರಿಯನ್ನು ಕರೆದು ಕೊಂಡು ಸೀಮಂತ ಮಾಡುತ್ತಾರೆ, ನಂತರವೆ ಯಾರುಬೇಕಾದರೂ ಆಮಂತ್ರಿಸಿ ಊಟಕ್ಕೆ ಮಾಡಬಹುದು ಇನ್ನು ಅತ್ತೆ ಮನೆಯವರು ಮಾಡುವ ಈ ಕಾರ್ಯಕ್ಕೆ "ಸೀಮಂತ" ಎನ್ನುತ್ತಾರೆ.

ಈ ಎಲ್ಲ ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ಸಾಂಗೋಪಾಂಗವಾಗಿ ನಡೆದವು. ನನ್ನ ತಾಯಿಗೆ ಮುತ್ತೈದೆಯಾಗಿ ಇದ್ದು ನನ್ನ ತೊಡೆ ಮೇಲೆ ತಲೆಯನ್ನಿಟ್ಟು ಹೋಗುತ್ತೇನೆಂದು ಹೇಳುತ್ತಿದ್ದವಳ ಬಯಕೆ ಪೂರೈಸಿಕೊಳ್ಳುವದು.

ಅದ್ವೈತಾ ಈಗಲು ನನಗೆ ಉತ್ತರ ಕೊಡುತ್ತಿರುವವಳು ಬಸಿರಿ ಎಂದು ತಿಳಿದಮೇಲೆ ಅವಳಿಂದ ದೂರವಿರಲು ಮನಸ್ಸು ಒಪ್ಪುತ್ತಿರಲಿಲ್ಲ ಅವಳ ತವರು ಮನೆಗೆ ತೆರಳಿದಾಗಲೂ ನಾನು ಅವಳಿಂದ ದೂರ ಹೋಗದೆ, ಈ ಸಂದರ್ಭ ನನ್ನವನಿಗೆ ಅನುಭವ ವಾಗಲ್ಲಿ ನನ್ನಂತೆಯೇ ಅವಳು ಕೂಡ ನನ್ನ ಇರುವಿಕೆಯನ್ನು ತನ್ನ ಬಳಿಯೇ ಬಯಸಿದಳು. ಹೀಗೆ ಮಾಡಿಕೊಂಡು ಅದನ್ನು ನಾವಿಬ್ಬರು ಪೂರೈಸಿಕೊಂಡೆವು.

ಅವಳ ತಾಯಿಯಮನೆ ಚಿಕ್ಕೋಡು ಬಾಗಲಕೋಟಕ್ಕೆ ಯಾವ ಹೆರಿಗೆ ಆಸ್ಪತ್ರೆಗಾ ಹೆಸರನ್ನು ನೊಂದಾಯಿಸಿರಲಿಲ್ಲ. 1948-ಗೋಕುಲಾಷ್ಟಮಿಯ ದಿವ ಹೆರಿಗೆ ಆಯಿತು ತಂದೆ ತಾಯಿ ಬಂದು ಮೊಮ್ಮಗನನ್ನು ನೋಡಿಕೊಂಡು ಹೋದರು, ಗೋಕುಲಾಷ್ಟಮಿಯ ದಿನ ಹುಟ್ಟಿದವನೆಂದು ಅವನಿಗೆ "ಕೃಷ್ಣ" ಎಂಬ ನಾಮಕರಣ ಪ್ರೀತಿಯಿಂದ 'ಬಾಳ' ಎಂದು ಕರೆಯುತ್ತಿದ್ದೆವು ರೂಢಿಯಲ್ಲಿ ಅವನನ್ನು ಎಲ್ಲರೂ "ಬಾಳ" ಎಂದೇ ಕರೆದರು.

ಸೋಮಣ್ಣನ ರಜೆ

ಈ ಮಧ್ಯ ಸೋಮಣ್ಣ ಯೋಜಿಸಿಕೊಂಡ ರಜೆ ಪಡೆದು ಊರಿಗೆ ಬಂದನು ಆ ಸಮಯದಲ್ಲೇ ನಾನು ಮುಂಬೈಗೆ ಹೋಗುವಬಗ್ಗೆ ವಿಚಾರಿಸಿದ್ದ ಒಮ್ಮೆ ಹೋಗಿ ಬರುವದೆಂಬ ವಿಚಾರದಿಂದಲೇ ಸಿದ್ಧತೆ ಮಾಡಿಕೊಂಡಿದ್ದೆ ತಂದೆಯವರ ಪರವಾನಗಿಯೂ ಹಾಗು ರೂ-೫೦/-(ಐವತ್ತು) ಕೂಡ ನನ್ನ ಕೈಸೇರಿದ್ದವು. ಆಗ ನಾನು ಪೂರ್ಣ ವಿಚಾರಮಾಡಲಿಲ್ಲ ೫೦/- ಹೇಗೆ ಸಾಕಾದೀತು? ಎಂದು ಅಂತೂ ಹೊರಡುವನಿರ್ಧಾರವಾಯಿತು ಸೋಮಣ್ಣ ಮರಳುವ ದಿನವನ್ನು ನಿಶ್ಚಯ ಮಾಡಿಕೊಂಡೇ ಬಂದಿದ್ದ, ನಮ್ಮ ತಂದೆಯವರು ಅನಂತನ ವ್ರತ ಮಾಡುತ್ತಿದ್ದರು ಆ ವರ್ಷ ಸೋಮಣ್ಣನಿಗೆ [illegible] ನೋಂತಿತ್ತು ಅವನು ಚತುರ್ದಶಿಯ ಪೂಜೆ ಮುಗಿಸಿಕೊಂಡು ಊಟವಾದ ತಕ್ಷಣ ಹೊರಡುವದೆಂದು ಅವನನಿರ್ಧಾರವಾಗಿತ್ತು.

ನಮ್ಮ ಪ್ರಯಾಣ ಅಗಡಿಯಿಂದ ಹಾವೇರಿಗೆ ಹೋಗಿ ಅಲ್ಲಿ ರೈಲು ಹಿಡಿಯಬೇಕು ಮಧ್ಯ ಪುಣೆಯಲ್ಲಿ ಟ್ರೇನು ಬದಲಾಯಿಸಬೇಕು ಈಗಿನಂತೆ ಆಗ ಸ್ಲೀಪರ ಕೋಚ ಮುಂತಾದ ವ್ಯವಸ್ಥೆಗಳೇನು ಇರಲಿಲ್ಲ ೨೦೦ ಮೈಲಿಗಿಂತ ಹೆಚ್ಚು ಪ್ರವಾಸಮಾಡುವವರಿಗೆ ಒಂದು ಪ್ರತ್ಯೇಕ ಬೋಗಿ ಮಾತ್ರ ಇರುತ್ತಿತ್ತು ಅದು, ಹೆಸರಿಗ ಮಾತ್ರ, ಉಳಿದ ಬೋಗಿಗಳಕ್ಕಿಂತ ಹೆಚ್ಚು ತುಂಬಿರುತ್ತಿತ್ತು ಆಗ ಮುಂಬೈ ಪ್ರವಾಸ ನರಕವೇ ಎನಿಸಿತ್ತು

ಸೋಮಣ್ಣನಿಗೆ ನಾನು ಕಳಕಳಿಯಿಂದ ಕೇಳಿಕೊಂಡೆ ಧಾರವಾಡದಲ್ಲಿ ಇಳಿದು ಮುಂದೆ ಹೋಗೋಣ ಎಂದು ಅಂದರೆ ಮಗನನ್ನು ನೋಡಿಕೊಂಡು ಹೋಗುವದೆಂಬ ಉದ್ದೇಶವಿತ್ತು ಒಪ್ಪಿಕೊಳ್ಳಲಿಲ್ಲ - ನೇರ ಹೋಗಿಯೇ ಬಿಟ್ಟೆವು ಪುಣೆಯಲ್ಲಿ ಗಾಡಿ ಬದಲಾಯಿಸಿದೆವೆಂದು ಆಗಿನ ಕಾಲದಲ್ಲಿ ದೊಡ್ಡ ಪ್ರಯಾಸದ ಕೆಲಸವಾಗಿತ್ತು ಹಮಾಲರ ಉಪ್ಪಟಳ

ನೋಟದ ನಡೆದೇ ಇರುತ್ತಿತ್ತು

ಅಂತೂ ದಾದರ ತಲುಪಿದೆವು, ತಲುಪಿದಾಗ ಪೈಕಿ ಎಷ್ಟಾಗಿತ್ತು ಎಂದು ನೆನಪಿಲ್ಲ. ಮಧ್ಯಾಹ್ನದ ಊಟವನ್ನು ಮನೆಯಲ್ಲಿಯೇ ಮಾಡಿದೆವು. ದಾದರಿನಿಂದ ಹವಾಲ್ದಾರ್‌ಪೋಲ್ ರೋಡು ಪ್ರಾರಂಭಿಸಿಕೊಂಡೇ ಮನೆಗೆ ಹೋದೆವು, ನಾವು ನೇರ ಹೋದದ್ದು ಕಪೂರ್‌ಕಿತಾಪಟ್ಟಣ ಮನೆಗೆ. ಅಂದರೆ ಶ್ರೀ ಗೋಪಾಲಯ್ಯನ ಅಕ್ಕನ ಮನೆಗೆ ~~ನನ್ನ~~ ನಾವು ಮುಂಬಯಿಯಲ್ಲಿ ಪ್ರಥಮವಾಗಿ ಕಾಲಿರಿಸಿದು ಕಪೂರರ ಅವರ ಮನೆಯಲ್ಲಿ

ಇದು ಮುಂಬಯಿಗೆ ನನ್ನದು ಪ್ರಥಮ ದರ್ಶನ ಇದುವರೆಗೆ ಇಷ್ಟು ಎತ್ತರದ ಮನೆಗಳನ್ನು ನಾನು ನೋಡಿರಲಿಲ್ಲ ಅಷ್ಟು ಬಸ್ಸು ಕಾರುಗಳನ್ನು ಕಂಡಿರಲಿಲ್ಲ. ಆಶ್ಚರ್ಯವಾಯಿತು.

ನಾವು ಬರುವ ವಿಷಯವನ್ನು SRM ಗೆ ಮೊದಲೇ ತಿಳಿಸಿದ್ದೆವು, ಆದರೆ ನಾವು, ಅಲ್ಲಿ ಪ್ರಥಮ ಭೆಟ್ಟಿ ಎಲ್ಲಿ ಮಾಡಿದೆವು, ಎಂಬ ನೆನಪಿಲ್ಲ. ಈ ಮೊದಲೇ ನನ್ನ ಸೋದರಮಾವ ಮುಂಬೈ ಸೇರಿಯಾಗಿತ್ತು State Bank ನಲ್ಲಿ ನವಕರಿ ಇರುವದು ಮಾಟುಂಗದಲ್ಲಿ ಅವನ ಅಕ್ಕನ ಮನೆಯಲ್ಲಿ ಅಂದರೆ ನನ್ನ ಚಿಕ್ಕಮ್ಮನ ಮನೆಯಲ್ಲಿ ಅವನಿಗಾ ನನ್ನ ಬರುವನ್ನು ತಿಳಿಸಲಾಗಿತ್ತು.

ಹೋದ ದಿನವು ಸಾಯಂಕಾಲ SRM ರನ್ನು ಸಂದರ್ಶಿಸಿದೆವು. ಮರುದಿನ ಆವರು ತಾವು ಕೆಲಸ ಕಲಿಯುತ್ತಿದ್ದ ಕಾಲೇಜನ್ನು ತೋರಿಸುವದಲ್ಲದೆ ನನಗೆ ನವಕರಿ ಕೊಡಿಸುವದಾಗಿ ಹೇಳಿದವರನ್ನು ಭೆಟ್ಟಿ ಮಾಡಿಸುವದಾಗಿ ತಿಳಿಸಿದರು ದೇಶಪಾಂಡೆಯವರು Times of India ದಲ್ಲಿ ಪ್ರಕಟವಾಗುತ್ತಿದ್ದ Classifide Advt ನಲ್ಲಿ ಹುಡುಕಿ ಒಂದು ಜಾಹೀರಾತನ್ನು ಆರಿಸಿ ಇಟ್ಟಿದ್ದ ಚಿತ್ರಕಲಾವಿದ ಬೇಕೆಂಬುದನ್ನು ತಿಳಿಸುವದು ಆ ಜಾಹೀರಾತು. ದೇಶಪಾಂಡೆಯವರು ನನ್ನಲ್ಲಿಗೆ ಕರೆದುಕೊಂಡು ಹೋದರು, ಅದೊಂದು Film Producing Co Indian National films (?) ಎಂದು ಆ ಕಂಪನಿ ಹೆಸರಿತ್ತೆಂದು ಕಾಣುತ್ತದೆ. ಅದೇ ತಾನೆ 'ಡಾಕ್‌ಬಂಗಲೊ' ಎಂಬ ಚಿತ್ರವನ್ನು ತಯಾರಿಸಿದ್ದರು (x).

ಆ ಕಂಪನಿಯ ಕ್ಯಾಮರಾಮನ್ ~~A~~. ಮೇಜರ್ ಮ್ಯಾಟ್ಜನರ್ ಎಂದು ಹೆಸರಿತ್ತೆಂದು ಕಾಣುತ್ತದೆ. ಜರ್ಮನ್ ಜ್ಯೂ ಇದ್ದನು ಸಧ್ಯ ಚಿತ್ರ ತಯಾರಿಕೆ ಇಲ್ಲದ್ದರಿಂದ- ಅಂಥಿಂಥ ಜಾಹೀರಾತು ಕೆಲಸ ಮಾಡುತ್ತಿದ್ದರೆಂದು ಕಾಣುತ್ತದೆ - Atalrai ಹಾಗು ಜಯನಂದಾ ಖೇರಾ ಇಲ್ಲದೇ ಇನ್ನು ಕೆಲ ಚಿಕ್ಕ ಕಂಪನಿಗಳ ಜಾಹೀರಾತು ಮಾಡುತ್ತಿದ್ದರೆಂಬ ನೆನಪು,

ಬಹುಶಃ ಇದೇ ಸಮಯದಲ್ಲಿಯೇ SRM ಜೊತೆ ಕೆ. ಎಫ್. ಪಾಟೀಲರ ಮನೆಗೆ ಇರಲು ಹೋದೆನೆಂದು ಕಾಣುತ್ತದೆ. ಅವರೇ ಇದ್ದ ಒಂದೆರಡು ಪಟ್ಟಿಗಳನ್ನು ಬಿಕಲವ್ವನ ಮನೆಯಿಂದ ಕೈಚೀಲದಲ್ಲಿ ತೆಗೆದುಕೊಂಡು ಹೋದೆವು. ಕೆ.ಎ.ಫ್. ಪಾಟೀಲರಿಗೆ ಕೊಟ್ಟ ಕ್ವಾರ್ಟರ್ಸ ಮರೀನ್ ಲೈನ್ಸ ಸ್ಟೇಶನ್ ಪಕ್ಕದಲ್ಲಿಯೇ ಇತ್ತು, ಚನ್ನಾದ ಮನೆ, ಲಿಫ್ಟ್ ಕೂಡ ಇತ್ತು

~~ಕೆಲವೇ ದಿನಗಳಲ್ಲಿ ನಾನು~~ (x) ಆ ಕಂಪನಿಯು ಕೊಲಾಬಾದಲ್ಲಿ ತಾಜ್ ಮಹಲ ಹೋಟೆಲ ಪಕ್ಕದಲ್ಲಿತ್ತು ಟಿಲರ್ ರೋಡ ನ್ಯಾಶನಲ್ ಹೌಸಿನಲ್ಲಿತ್ತು

ಆ ಕಂಪನಿಯಲ್ಲಿ ಬಹಳ ದಿನ ಕೆಲಸ ಮಾಡಲಿಲ್ಲ. ಮೇಜರ್ ಮ್ಯಾಟ್ಜನರನಿಗಾ ಕಂಪನಿ ಸ್ವಂತ ಸ್ಟೂಡಿಯೋ ವಿನಗೇ ಜಿಹ್ವೆಬಂತು ಮಾಡ್ಬೇಕೆನ್ನುವ ಹೋಗಬೇಕು, ಆದರೆ ಅವನು ನನ್ನಕ್ಕೇ ಬಿಡೆ- ಅವನ ಮನೆ ಜುಹುದಲ್ಲಿ Palmgrove ಎಂಬಲ್ಲಿತ್ತು ಅವನು ಇಲ್ಲಿಗೆ ಬರುವನೆಂದು

ಕ್ರಿಶ್ಚನ್ ಶಾಲೆಗೆ ಸಂಬಂಧಿಸಿದವರು Palmgrow ದಲ್ಲಿ ಇಂದುಗುರುವಿನ ಆರ ಅವರ ಮನೆ. ನಾನು ಕೆಲವೊಮ್ಮೆ ಕೇಳಲು ಅಲ್ಲಿಗೆ ಹೋಗಿ ಬರುತ್ತಿದ್ದೆ. ಹಾಗು ಹೀಗಾ ಕಲಿಸುವುದು ಕಲಿಯುತ್ತಿರುವಾಗ ----

ಈ ಮಧ್ಯೆ SRM ನನ್ನ ಕರೆದುಕೊಂಡು ಅಲ್ಲಲ್ಲಿ ತಿರುಗಾಡಿದೆ ಈ ತಿರುಗಾಟದಲ್ಲಿ ಮುಖ್ಯವಾಗಿ ಕಲಾಗುರು ದಂಡಾವತಿಮಠರ ನೂತನ ಕಲಾಮಂದಿರವನ್ನು ಕಾಣುವದು ಮುಖ್ಯವಾಗಿತ್ತು. ಅಲ್ಲಿ ನನ್ನ ಭವಿಷ್ಯದ ವಿಷಯವಾಗಿ ನಿರ್ಧರಿಸುವ ಕಾರ್ಯ ಮುಖ್ಯವಾಗಿತ್ತು. ನಿಜ ಅನುಭವಿಸಿಬಿಟ್ಟು ಸೋಮಣ್ಣನ ಜೊತೆ ಮುಂದಿನ ಹೋರಾಟಕ್ಕೆ ಇಂಬುಕೊಡದೇ ಕಾರ್ಯಮಾಡಬೇಕು ಕಲಾಭ್ಯಾಸವನ್ನು ಮುಂದುವರಿಸಬೇಕು ಎಂಬ ಮುಂತಾದ ಯಾವ ನಿರ್ಧಾರವನ್ನು ಮಾಡಿರಲಿಲ್ಲ - ಅಂದು ನನ್ನ ಆಸಕ್ತಿಯ ಪ್ರಕಾರ ಕಲಾಶಾಲೆಯನ್ನು ಸೇರಲು ಕೂಡ ಕನಿಷ್ಠ ಮೆಟ್ರಿಕ್ ಪರೀಕ್ಷೆಯಾಗಿರಬೇಕು ಎಂಬುದು ಕಲ್ಪನೆಯಿತ್ತು, ಅಂತೂ ನೂತನ ಕಲಾಮಂದಿರಕ್ಕೆ ಹೋದೆವು ಆ ಶಾಲೆಯು ಒಪೆರಾ ಹೌಸ ಭಾಗದಲ್ಲಿ ಬ್ಲಿಬೆಸ್ತಿ ಲಾಜ್ ಎಂಬ ಕಟ್ಟಡದ ಎರಡನೇಯ ಮಾಳಿಗೆಯಲ್ಲಿತ್ತು ಆ ಕಟ್ಟಡದ ಮೊದಲನೇ ಸೇರ್ಪಡಿಸುವ ಮಾಳಿಗೆಯಲ್ಲಿತ್ತು ಕೆಳಗಿನಿಂದಲೇ ಕೇಳುವ ಅನೇಕ ಹಾಲುಗಳನ ಮಾಡುತ್ತಿದ್ದರು. ಅಂತೂ. SRM ನನ್ನನ್ನು ಅಲ್ಲಿ ಕರೆಕೊಂಡುಹೋದರು ಗುರುಗಳಿಗೆ ನಮಿಸಿ ನನ್ನ ಇಚ್ಛೆ: ಚಿತ್ರಕಲಾಭ್ಯಾಸವನ್ನು ಮಾಡಬೇಕೆಂಬ ಉದ್ದೇಶವನ್ನು ಅರುಹಿದೆ ಹಾಗು ನಾನು ಮೆಟ್ರಿಕ್ ಪರೀಕ್ಷೆ ಆಗಿಲ್ಲ, ಕಲಿಯಬೇಕೆಂಬ ಇಚ್ಛೆಯೊಂದೇ ಇದೆ ಎಂದು ಗುರುಗಳಿಗೆ ತಿಳಿಸಿದೆ. ಅವರು ನನ್ನ ಕಲ್ಪನೆಯನ್ನು ತಿಳಿದುಕೊಂಡರು, ಮೆಟ್ರಿಕ್ ಆಗಿರಲೇಬೇಕೆಂಬ ಕಟ್ಟಳೆ ಏನೂ ಇಲ್ಲ ನೀನು ಚಿತ್ರಿಸಿದ ಕೆಲ ಚಿತ್ರಗಳನ್ನು J.J. School ಗೆ ಕಳಿಸಬೇಕು ಅವುಗಳನ್ನು ನೋಡಿ ವಿದ್ಯಾರ್ಥಿಯ ಅರ್ಹತೆಯನ್ನು ಅಳೆಯುತ್ತಾರೆ. ಆ ಮಾತನ್ನು ಕೇಳಿ ಮನಸ್ಸಿಗೊಂದು ನೆಮ್ಮದಿ ಎನಿಸಿತು. ಪ್ರವೇಶಕ್ಕೆ ಅಂತಾ ತೊಂದರೆಯಿಲ್ಲ ಎಂಬ ಭರವಸೆ ಉಂಟಾಯಿತು. ಆಗ ಹೋದ ಸಮಯದಲ್ಲಿ ಕೆಲ ಕನ್ನಡ ವಿದ್ಯಾರ್ಥಿಗಳು ಅಲ್ಲಿ ಅಭ್ಯಾಸಮಾಡುತ್ತಿರುವದನ್ನು ಗಮನಿಸಿದೆ.- ಹಾಗು ಪ್ರವೇಶದ ಸಮಯಕ್ಕೆ ಟಿ. ಮುಟ್ಟ ಸಲಕರಣೆಯಬಗ್ಗೆ ಎಷ್ಟು ವೆಚ್ಚವಾಗಬಹುದೆಂಬ ವಿಷಯವನ್ನು ಗುರುಗಳಿಂದ ಕೇಳಿ ತಿಳಿದುಕೊಂಡೆ ನಾನು ಹೋರಾಡುವಾಗಿನ ಮಾಸಿಕದ ರೂ 30/- ಎಂದಾಗಲೇ ತಿಳಿದುಹೋಯಿತು. ಆನಂತರ ಅಲ್ಲಲ್ಲಿ ಚಿತ್ತಗೆ ವೆಂಕಟ ಮ್ಯಾನೇಜರ್ ಚಿತ್ರ ದುಡಿದ ಹಣದಿಂದಲೇ ದಿನ ಸಾಗಿತ್ತು, ಪ್ರವೇಶ ಖರ್ಚು ಹಣವೆಂಬುದನ್ನು ಅಂದಿನಮಟ್ಟಿಗೆ ಬರೆದು ತಿಳಿಸಿದ್ದೆ ಹಾಗು ಶಾಲೆಗೆ ಸೇರಬೇಕೆಂಬ ನನ್ನ ಹಂಬಲವನ್ನು ತಿಳಿಸಿದ್ದೆ.....

ಮುಂಬೈಯಲ್ಲಿ ಆಗ ದಿನೋವಿಶಾಲ - ಧಿರೋಜಶಹಾ ಮೆಹತಾ ರೋಡನಲ್ಲಿ ಗೋಪಾಲಾಶ್ರಮ ಎಂಬುದೊಂದು ಹೋಟೆಲ್ ಇತ್ತು, ಅಲ್ಲಿ 0-50 ಪೈಸೆ (ಆ ಆಣೆಗೆ ರೈಸ್ ಪ್ಲೇಟ ಊಟ ಸಿಗುತ್ತಿತು, ಅಷ್ಟು ಕೊಡಲು ಆಗದ ಇಲ್ಲವೆಂದಾರೆ ಇನ್ನು ಹಲವು ಹೆಜ್ಜೆ ಹೆಜ್ಜೆ ಮುಂದೆ ಹೋದರೆ ಇನ್ನೊಂದು ಹೋಟೆಲ್ ಇತ್ತು, ಅಲ್ಲಿ ಆರು ಆಣೆಗೆ ಊಟ ಆದರೆ ಅನ್ನದಲ್ಲಿ ನೊಣ ಬೆಳೆಯನ್ನು ಬೆರೆಸುತ್ತಿರುತ್ತಿದ್ದರು, ಇಲ್ಲವಾದರೆ ಉಳಿದವರಲ್ಲಿ ಗೋಪಾಲಾಶ್ರಮದ ಮಧ್ಯಲ. ಅಂದು ಕಡೆಯಲ್ಲಿ ಆರಾಣೆಯೂ ಇಲ್ಲವೆಂದರೆ ಎರಡಾಣೆಯ ಬ್ರೆಡ್ ತಾಜಾ ತಂದು ಇನ್ನೊಂದು ಲೋಟ ನೀರು ಜೊತೆಗೆ ಕುಡಿದು ಹೊಟ್ಟೆಯಮೇಲೆ ಕೈಯಾಡಿಸುತ್ತ ದಿನದಲ್ಲಿ ತಿರುಗಾಡುವುದು.

ನನ್ನ ಚಿಕ್ಕಮ್ಮನೆಗೆ ಪ್ರಯಾಣ

ಕೆಲವರ್ಷಗಳ ಮುಂಚೆಯೇ ನನ್ನ ಸೋದರಮಾವ (ಎನ್. ಆ. ಆರ್. ನ- ಮಿನ್ಹಾಲ್ ಎಂದು ಹೆಸರು) ಮುಂಬಯಿಗೆ ಹೋಗಿದ್ದನು ಅವನು ಕೂಡ ಮೆಟ್ರಿಕ್ ನ ತೀರ್ಗಡೆಯಾಗಿದ್ದರೂ ಅಪ್ರಾಮಾಣಿಕ ಆಗಿನ ಯುದ್ಧದ ಕಾಲದಲ್ಲಿ ಮಿಲ್ A/s ಕೌಂಟರ್ ನಲ್ಲಿ ಕೆಲಸ ಇದ್ದು - ಮಿಲ್ಲಿನಲ್ಲಿ ಕೆಲಸ ಮಾಡಿದ ಹಿನ್ನೆಲೆಯ ಅವನಿಗೆ Imperial Bank ನಲ್ಲಿ ನೌಕರಿ ದೊರಕಿತು ಅದೇ ಬ್ಯಾಂಕು ಈಗ State Bank of India ಎಂದು ಕರೆಯಲಡುತ್ತದೆ.

ಹೋದ ತಕ್ಷಣ ಅವನಿಗೆ ವಾಸಕ್ಕೆ ತೊಂದರೆಯಾಗಲಿಲ್ಲ. ಅಕ್ಕನ ಮನೆ ಇತ್ತು ಅಕ್ಕನ ಗಂಡ ದ್ಯಾಮಪ್ಪ ಎಂದು ಜಮಖಂಡಿಯವರು ಮಾಟುಂಗಾದಲ್ಲಿನ ದಕ್ಷಿಣ ಬ್ರಾಹ್ಮಣವಾಡಿ ಎಂಬಲ್ಲಿ ಒಂದೇ ರೂಮಿನ ಮನೆಯಲ್ಲಿ ವಾಸವಾಗಿದ್ದರು. ಯುದ್ಧದ ಸಮಯದಲ್ಲಿ ಮುಂಬೈ ನಗರದ ಮೇಲೆ ಯಾವಾಗ ಬಾಂಬು ಬಿದ್ದೀತೋ ಎಂಬ ಭಯದಿಂದ ಎಷ್ಟೋ ಜನ ಫ್ಲ್ಯಾಟ್ ಇದ್ದು ಕೊಂಡವರನ್ನು ತಮ್ಮ ತಮ್ಮ ಊರುಗಳಿಗೆ ಯುದ್ಧ ನಿಂತಮೇಲೆ ಮರಳಿ ಕೊಡುವದಾಗಿ ಹೇಳಿ ಕಳುಹಿದ್ದರು ನನ್ನ ಚಿಕ್ಕಮ್ಮನ ಮನೆಯವರು ಕೂಡ ಅದೇ ಕಾರಣದಿಂದಲೇ ಮಾದರಿ ದೊಡ್ಡ flat ನ್ನು ಬಿಟ್ಟು ಬ್ರಾಹ್ಮಣವಾಡಿಯಲ್ಲಿನ ಸಿಂಗಲ್ ರೂಮಿನ ಮನೆ ಹಿಡಿದು ಸದ್ಯ ನಿವಾಸ ಇಡಲೆಂದು ಉದ್ದೇಶಿಸಿ ಆ ಚಿಕ್ಕ ಖೋಲಿಯಲ್ಲಿ ಸಾ-ಮಾನುಗಳೊಂದಿಗೆ ಒಬ್ಬರೇ ಉಳಿದರು, ದುರ್ದೈವ ಕೆಲವರು ದ್ರೋಹ ಮಾಡಿ ಒಳ್ಳೇ ಮನೆ-ಯನ್ನು ಅಲ್ಪ ಕ್ರಯಕ್ಕೆ ಭಾಡಿಗೆ ಹಿಡಿದುಕೊಂಡು ಮುಂದಿನ ಜೀವನ ಸಾಗಿಸಿದ್ದರು. ಈಗಲೂ ನನ್ನ ಚಿಕ್ಕಮ್ಮನ ಮೊದಲ ಮನೆ ಹೋಯಿತು ಈ ಸಿಂಗಲ್ ರೂಮಿನ ಖೋಲಿಯೊಂದೇ ಉಳಿ-ದು ಈಗಲೂ ಅದೇ ಮನೆಯೇ ಎಲ್ಲಾ ಚಿಕ್ಕಮ್ಮನಿಗೆ ಆಧಾರ! ಉಳಿದವರು ಬೇರೆ ಮನೆ ಮಾಡಿಕೊಂಡು ಹೋದರು, ಹೆಣ್ಣುಮಕ್ಕಳು ಸಹ ಜವಾಬ್ದಾರಿಯ ಗಂಡನ ಮನೆಗೆ ತೆರಳಿದ. ನನ್ನ ಆ ಚಿಕ್ಕಮ್ಮನಿಗೆ 3 ಗಂಡು 3 ಹೆಣ್ಣುಮಕ್ಕಳು ತಂದೆ ತಾಯಿ ಹಾಗು ಕೆಲವರ್ಷ ನನ್ನ ಸೋದರಮಾವ ಇಷ್ಟು ಜನ ಒಂದೇ ಮನೆಯಲ್ಲಿಯೇ ಇದ್ದರು (ಒಂದೇ ಖೋಲಿಯ ಮನೆ)

ಮತ್ತೊಮ್ಮೆ ನಾನು ಚಿಕ್ಕಮ್ಮನನ್ನು ಕಾಣಲು ಹೋದಾಗ ಅವ್ವನೊಂದು ವಿಷ್ಯ ತಿಳಿದದ್ದು ಅವಳ ಪತಿ ದ್ಯಾಮಪ್ಪರ ಅಬಚಿ (ಮಾಂಸಿ) ಯ ಮಗ ಒಬ್ಬನು ಮುಂಬೈಯಲ್ಲಿ ಬಂದಿದ್ದಾನೆ, ಪ್ರೀಮಿಯರ್ ಅಟೋಮೊಬೈಲನಲ್ಲಿ ನೌಕರಿ ಇರಲು ಒಬ್ಬನೇ ಇದ್ದಾನೆ ಇನ್ನೂ ಮದುವೆಯಾಗಿಲ್ಲ ಆದರೂ ಅವನಿಗೆ ಕಂಪನಿಯು Staff Quarter ಕೊಟ್ಟಿದೆ ನೀನು ಬೇಸಿಗೆ ರಜೆಗೆ ಕೆಲಕಾಲ ಇರುವಂತಿದ್ದರೆ ಅವನನ್ನು ಕೇಳುತ್ತೇನೆಂಬ ಸೂಚನೆ ನೀಡಿದಳು ನಾನು ಅವಶ್ಯವಾಗಬಹುದು ಎಂದು ನನ್ನ ಅಭಿಪ್ರಾಯ ಸೂಚಿಸಿದೆ ಮರುದಿನ ಕ್ಕೆ ವಿಷಯವಾಗಿ ಸೋಮಣ್ಣನ ಜೊತೆ ಚರ್ಚಿಸಿದೆ, ೫-೬ ತಿಂಗಳಾದರೂ ನಿನ್ನನ್ನು ಆ ಮನೆಯಲ್ಲಿಟ್ಟುಕೊಳ್ಳುವದರ ಅಡ್ಡಿಯಿಲ್ಲ ವೆಂದು ಸೋಮಣ್ಣನ ತನ್ನ ಅಭಿಪ್ರಾಯ ಸೂಚಿಸಿದ, ಕ್ರಾಂತಿ ಯ ನಾನು ಬಿM ಜೊತೆ ಹೋಗಲಿಲ್ಲ!

ಮರುದಿನ ಅವನನ್ನು -ಅವನ ಹೆಸರು, ರಾಯಬಾಗಿ" ಎಂದು - ಕರೆಸಿ ವಿಷಯ ಪ್ರಸ್ತಾಪ ಮಾಡಿ ಅವನು ಅಡ್ಡಿಯಿಲ್ಲ ನನ್ನ ಕುಟುಂಬವನ್ನು ಕರೆಸಲು ತೊಂದರೆಯಿಲ್ಲ ೫/೬ ತಿಂಗಳು ನಾನು ಅವನಲ್ಲಿ ಇರಬಹುದು ಎಂಬ ಅಭಿಪ್ರಾಯವನ್ನು ಕೊಡುವುದಾಯಿತು

ನೀಡಿದಾಗ, ಈ ಎಲ್ಲ ಚಿತ್ರಗಳನ್ನು ನೋಯಮ್ಮನ ಜೊತೆ ತೋರಿಸಿದಂತೆ, ನನ್ನ ಜೊತೆಯಲ್ಲಿಯೇ ನಿಂತು ಆಲಿಸಿ ನನ್ನ ಚಿಕ್ಕಮ್ಮನೂ ಸ್ವೀಟ್ ಹೇಳಿದ್ದಳು.

ಸರಿ, ನಾವು ಅಡಿಗೆ ಬರೆದು ಆಂದೆಯವರಿಗೆ ತಿಳಿಸಿದ ಹಾಗೂ ಆದಷ್ಟು ಬೇಗ ಮುಂಬೈಗೆ ಬರಬೇಕೆಂದು ಬರೆದುಕೊಂಡು ಬಂದರೆ ಉತ್ತಮ ಎಂದೂ ತಿಳಿಸಿದೆ. ಯಾಕೆಂದರೆ ಈ ಹೊತ್ತಿಗಾಗಲೇ ಆಂದೆಯವರಾದ ನನ್ನ ಮಗನನ್ನು ನೋಡುವ ಆತುರ, ಉತ್ಸಾಹ, ಅವನನ್ನು ಬೇಗ ನೋಡಬೇಕು ಎತ್ತಿ ಮುದ್ದಾಡಬೇಕು ಎಂಬುವ ಆಸೆ ಆರಂಭಿಸಿತ್ತು-

ಆಂದೆಯವರು ತಡಮಾಡಲಿಲ್ಲ ಮುಂಬೈಗೆ ಹೊರಡುವ ದಿನಾಂಕ ನಿಶ್ಚಯಿಸಿ ಬರೆದರು ಮತ್ತೆ ನಾವು ಚಿಕ್ಕಮ್ಮನಲ್ಲಿ ಹೋಗಿ ಸಿದ್ಧ ನಡೆದ ಕಾರ್ಯದ ವಿವರ ತಿಳಿಸಿದೆ ಆ ಪ್ರಕಾರ ನಾಮಕರಣ ಮಾಡುವವರಿಗೆ ಚಿತ್ರಗಳ ತೋರಿಸಿಯಾಯಿತು ಅವರು ಈ ಚಿತ್ರಗಳನ್ನು ನೋಡಿ ಒಂದು ರೀತಿಯ ಸಂತೋಷವನ್ನು ವ್ಯಕ್ತಪಡಿಸಿದರು----!

ಬಹುಶಃ ನಾವು ನೋಯಮ್ಮ ಬಂದಾಗ ಆಂದೆಯವರು ಪ್ರಯಾಣ ಮಾಡಿದ್ದರೆಂದು ಕಾಣುತ್ತದೆ, ಆಗ ಮಧ್ಯಾಹ್ನದ ಸಮಯವಾದದ್ದರಿಂದ ಅಲ್ಲಿಂದ ನೋಯಮ್ಮನನ್ನು ನಾನು ದಾದರ ಸ್ಟೇಷನ್ನಿಗೆ ಕರೆದುಕೊಂಡು ಹೋಗಿದ್ದೆ ಗಾಡಿ ಪ್ಲಾಟ್‌ಫಾರ್ಮ ತಲುಪುವದೇ ತಡ ಇಳಿಯುವ ಗಡಿಬಿಡಿ ಪ್ರಾರಂಭವಾಯಿತು, ನೋಯಮ್ಮ ಡಬ್ಬಾಲರನ್ನು ನೋಡುತ್ತ ನಿಂತಿದ್ದ ಆಂದೆಯವರು ಪ್ರಯಾಣದಲ್ಲಿ ತಂದಿದ್ದ ಸಾಮಾನುಗಳೆಲ್ಲವ ಇಳಿಸಿಕೊಂಡಾಗಿದೆಯೆ ಎಂಬ ತಾಳಿಕೆಯಲ್ಲಿದ್ದರು ಮನೆಯವಳು ಮಗುವಿನೊಂದಿಗೆ ಕೋಂಟಾದಾರ ವಿದ್ದಳು ನನ್ನ ಕಣ್ಣುಗಳು ಅದನ್ನೇ ಹುಡುಕುತ್ತಿದ್ದವು, ಬಂದ ಜನರು ತಂದ ಸಾಮಾನುಗಳು ಇವುಗಳ ಬಗ್ಗೆ ನನ್ನ ಲಕ್ಷ್ಯವಿರಲಿಲ್ಲ ಮೊದಲು ಮಗುವನ್ನು ಕಾಣಬೇಕಿತ್ತು, ಮಗುವಿನೆಡೆಗೆ ಧಾವಿಸಿದೆ, ಮಗು ತಾಯಿಯ ಕಂಕುಳದಲ್ಲಿತ್ತು ನನ್ನನ್ನು ಕಾಣುತ್ತಲೆ ಬಹುದಿನದ ಪರಿಚಯವಿದ್ದವರನ್ನು ಕಂಡಂತೆ ಎರಡೂ ಕೈಗಳನ್ನು ನನ್ನೆಡೆಗೆ ಚಾಚಿತು, ಈ ದೃಶ್ಯವನ್ನು ಆಂದೆಯವರು ನೋಡುತ್ತಲೇ ನನ್ನ ತಾಯಿಗೆ ಹೇಳಿದರು ನೋಡು ಅಪರಿಚಿತರಾದವರಿದ್ದರೆ ಹೋಗದ ನಿನ್ನ ಮೊಮ್ಮಗ ತನ್ನ ಅಪ್ಪನತ್ತ ಹೇಗೆ ಓಡಿದ ನೋಡು ಎಂದು ಟೀಕಿಸಿ ಮಾಡಿದರು ನಿಜವಾಗಿಯೂ ಆ ದೃಶ್ಯ ನನಗೂ ಆಶ್ಚರ್ಯವನ್ನೇ ಮಾಡಿತು. ಆಂದೆಯವರು ರದ್ದು ಮಾಡಿದ ಅವರ ತಾಳಿಯಲ್ಲಿ ರೇಷ್ಮೆಯ ದಟ್ಟಕದಿಂದ ಹೊಲಿಸಿದ ಕುಲಾಯಿ ಮತ್ತು ಅಂಗಿ ಮಗುವಿಗೆ ಹೇಳಿ ಮಾಡಿಸಿದ ವರ್ಣವಾಗಿತ್ತು ಮಗುವಿನ ವರ್ಣಕನಾದ ಬಿಳುಪಿನ ಸೊಂಪ ಮಾಡಿದಂತಿತ್ತು ಆ ನೀಲ ಅಂಗಿಯ ಮೇಲೊಂದು ಬಂದೇ ಎಳೆಯ ಚಿನ್ನದ ಸರ ಬಹು ಅಂದವಾಗಿ ಕಾಣುತ್ತಿತ್ತು- ಅಂತು ಈ ಮುದ್ದಾಟದಲ್ಲಿ ಕೆಲನಿಮಿಷಗಳು ಕಳೆದವು, ನಂತರ ಟ್ಯಾಕ್ಸಿಯಲ್ಲಿ ಕುಳಿತೆವು! ಪ್ರಯಾಣ ಊರಿನಿಂದ ಕಳುಹಿಸಲ್ಲ ಚೀಲವನ್ನು ಪಾರ್ಸಲ್ ಆಫೀಸಿನಲ್ಲಿಂದೇ ಬಿಟ್ಟು ಸಾಯಂಕಾಲ ಬಂದು ತೆಗೆದುಕೊಂಡು ಹೋಗಿ ಎಲ್ಲರಿಗೂ ಹಂಚಿದೆವು

ಮಧ್ಯಾಹ್ನ ರೈಲಿನಿಂದ ಮನೆಗೆ ಬಂದೊಡನೆ ಊರಿಂದ ಕಟ್ಟಿಕೊಂಡು ಬಂದ ರೊಟ್ಟಿ ಪಲ್ಯ ಕಲಸನ್ನು ಬುತ್ತಿಯನ್ನೇ ಸೇವಿಸಿದರು ಪ್ರಯಾಣದ ಆಯಾಸವಾದ್ದರಿಂದ ಮುಂದಿನ ವೇಳೆಯಲ್ಲಿ ಆಂದೆಯವರು ತಾಯಿ ಇಬ್ಬರೂ ವಿಶ್ರಾಂತಿಗೆಂದು ಮಲಗಿದರು, ಪ್ರಯಾಣದ ದಣಿವಿನಿಂದಾಗಿ

...ರಿಗೆಲ್ಲ ಸರಿಯಾಗಿ ನಿದ್ರೆಯೇ ಹತ್ತಿತ್ತು, ಸೋಮಣ್ಣ ಎಲೆಅಡಿಕೆ ಅಂಗಡಿ ಕಿತ್ತುಕೊಂಡು ...ಹೇಟಿನ ಬಳಿ ನಡೆದನು ಊರಲ್ಲಿದ್ದಾಗಲೇ ಅವನಿಗೆ ಆಂಬಾಸದ ಗಿರಾಕಿಯಿತ್ತು.

ಊರಿಂದ ಮನೆಗೆಂದು ತಂದ ಸಾಮಾನುಗಳನ್ನು ಮನೆಯವಳು ಜೋಪಾನವಾಗಿಡು-ವ ಸನ್ನಾಹದಲ್ಲಿದ್ದಳು ನನಗೆ ಬಂದ್ರೆ ಕೆಲಸ. ಮಗುವಿನೊಂದಿಗೆ ಆಟ, ಮಗುವಿಗೂ ಅವ-ನೇಕೆ ~~...~~ ತ್ರಾಸವೋ ಎಂಬೆನಿಸುವಂತೆ ಖುಷಾಲವಾದ ಆಟ. ಆಭರದಲ್ಲಿ ನನಗೂ ಜೊಂಪು ಬಂ-ದಂತಾಯಿತು, ಮನೆಯವಳೂ ಕೈಯಲ್ಲಿ ಹಿಡಿದ ಡಬ್ಬದಲ್ಲಿ ಏನನ್ನೋ ತುಂಬುತ್ತಲೇ ಆಕ-ಳಿಸುತ್ತಿದ್ದಳು ಮಗು ನಿದ್ದೆ, ಆಕಡೆ ಹೊರಳುತ್ತಲೇ ತೂಕಡಿಸುತ್ತಿದ್ದ ನನ್ನವಳ ಜೀವ ನನ್ನ ಹತ್ತಿರಕ್ಕೆ ಸರಿದಿತ್ತು. ಆ ನಿದ್ದೆ ಮಬ್ಬಿನಲ್ಲಿ ಎರಡು ದೇಹಗಳು ಒಂದಾಗಿದ್ದವು. ಅವಳು ಬೆಚ್ಚಿ ಬಿದ್ದು ಆಡಿವರಿಗೆ ಎದ್ದವಳಂತೆ ಛೀ! ಇದ್ಯಾಕೆ, ಹಗಲೆಲ್ಲ ರಾತ್ರಿಯಿಲ್ಲ ಮನೆಯಲ್ಲಿ ಇಷ್ಟೊಂದು ಜನ ಇದ್ದಾರೆಂಬ ಖಬರು ಇಲ್ಲ ಎಂದು ಏನೇನೋ ಕನವರಿ-ಸುತ್ತ ಹೊರಗೆ ಹೋದಳು ----? ಅಂದು ಜೂನ ತಿಂಗಳ ೧೧ನೆಯ ದಿನಾಂಕವಿತ್ತೆಂಬ ನೆನಪು. ---- ಆನಂತರ ಇವಳು ಮುಟ್ಟಾಗಲೇ ಇಲ್ಲ!

ಇವಳು ಚಹಾ ಮಾಡುವ ತಯಾರಿ ನಡೆಸಿದ್ದಳು ಅಷ್ಟರಲ್ಲಿ ಗಾಯಕವಾಡಿಯವ-ರೆಂದರು ನಾನು ಸೋಮಣ್ಣ ದಾದರ ರೈಲು ನಿಲ್ದಾಣಕ್ಕೆ ಹೋಗಿ ಪಾರ್ಸಲ್ ಆಫೀಸಿನಿಂದ ಕೈಯ-ಲ್ಲಿದ್ದ ಚೀಲವನ್ನು ತಂದು ಎಲ್ಲರಿಗೂ ಅಚ್ಚರಿ ಹಂಚಿದ್ದಾಯಿತು. ಸೋಮಣ್ಣ ಮತ್ತೆ ಬ-ರುವದಾಗಿ ಹೇಳಿ ದಾದರಿಗೆ ಮರಳಿದನು...

ಈಗ ವಾಸ್ತವ್ಯದ ಸ್ಥಳ ಬದಲಾಯಿತು, ಗೋಪಾಲಾಶ್ರಮದ ಬದಲಾಗಿ ಮನೆಯ ಊಟ ಸಿಗಲಾರಂಭಿಸಿತು. ಆದರೆ, ಗಾಯಕವಾಡಿ ~~...~~ ಇರಲು ತಾತ್ಕಾಲಿಕವಾಗಿ ಹಿಡಿದ ಮನೆ ಕಾರಖಾನೆಯ ಆವಾರದಲ್ಲಿಯೇ ಇತ್ತು ಮಧ್ಯಾಹ್ನದ ಊಟವನ್ನು ಮನೆಗೆ ಬಂದು ಊಟ ಮಾಡಿ ಹೋಗುವಷ್ಟು ಹತ್ತಿರ, ವೇಳೆಗಾಗಿ ರೈಲಿನ ಬಸ್ಸಿನ ಪ್ರವಾಸವಿಲ್ಲ. ಸ್ಥಳಾಂತರ ಆತಿಥ್ಯ ತೋರಲಿಕ್ಕಾಗಲಿಲ್ಲದೆ ಪ್ರೀಮಿಯರದಲ್ಲಿಯೇ ನೌಕರಿಯನ್ನೇಕೆ ದೊರಕಿಸಲು ಪ್ರಯತ್ನಿಸಬಾ-ರದು ಎಂಬ ವಿಚಾರ ಸುಳಿಯ ತೊಡಗಿತು!

ಆಗ ಪ್ರೀಮಿಯರ ಅಟೋಮೋಬೈಲ್ಸದಲ್ಲಿ Dy Gen Manager ಎಂದು ಒಬ್ಬ-ರು ಮಗನಲಾಲ ಶಹಾ ಎಂಬುವರು ಇದ್ದರು ಅವರು ಇಂಡಿಯಾದಿಂದಲೆ MLC ಎಂದು ಆರಿಸಿ ಬಂದವರು ಕನ್ನಡವನ್ನು ಬಲ್ಲ, ಕನ್ನಡ ಮಾತಾಡಬಲ್ಲವರಾಗಿದ್ದರಲ್ಲದೆ ಕಟ್ಟಾ ಕಾಂಗ್ರೆಸ್ಸಿಗರಾಗಿದ್ದರು ನೌಕರಿಗಾಗಿ ಅವರ ಸಹಾಯ ಪಡೆಯುವದೆಂದು ವಿಚಾರ ಪ್ರಾರಂಭವಾಯಿತು ಕರ್ನಾಟಕದ ಹಿರಿಯ ಕಾಂಗ್ರೆಸ್ ಮುಖಂಡರನ್ನು ಅವರು ಚನ್ನಾಗಿ ಬಲ್ಲವರಾಗಿದ್ದರು ಆ ಸಂ-ಬಂಧದ ಉಪಯೋಗ ಮಾಡಿಕೊಳ್ಳುವದೆಂದು ಈಗಾಗಲೇ ನನಗೆ ಪರಿಚಯ ಹಾಗು ನನ್ನ ಕೆ-ಲ ಪತ್ರಗಳನ್ನು ಉಪಯೋಗಿಸಿಕೊಂಡು ಡಾ|| ನಾ. ಸು. ಹರ್ಡೀಕರ ಅವರ ಪರಿಚಯದ ಲಾಭ ಪಡೆಯುವದೆಂದು ತಂದೆಯವರಿಗೆ ಬರೆದು ಪ್ರೀಮಿಯರ್ ಮೇನೇಜಮೆಂಟಿಗೆ ನನಗೆ ನೌಕರಿಗೆ ಶಿಫಾರಸ್ ಮಾಡಲು ಹರ್ಡೀಕರರಿಂದ ಒಂದು ಪತ್ರ ಕಳಿಸಲು ಕೇಳಿಕೊಂಡ ಪ್ರಕಾರ ತಂದೆಯವರು ಪತ್ರ ಕಳುಹಿದರು, ಡಾ|| ಹರ್ಡೀಕರ ಅವರು ನೇರ ಕಂಪನಿಯ ಚೇರಮನ್ ರಾಗಿದ್ದ ಶ್ರೀ ಲಾಲಚಂದ ಹೀರಾಚಂದ ಅವರಿಗೆ ಕಾಗದ ಬರೆದಿದ್ದರು, ಆ ಕಾಗದ ಶ್ರೀ ಮಗನ-ಲಾಲ ಶಹಾರವರಲ್ಲಿ ಬಂದಿತ್ತು, ನಾನು ನೌಕರಿಗೆ ಅರ್ಜಿಯನ್ನು ಸಲ್ಲಿಸಿದ್ದೆ, ಹೀಗಾಗಿ -

ಪ್ರತಿಬಿಂಬಪುರದಲ್ಲಿ ನೌಕರಿ ದೊರಕಿಸಿಕೊಳ್ಳುವ ಪ್ರಯತ್ನದ ಬೇಟೆಯಾಟಕ್ಕೆ ಬಹು ಜೋರಾಗಿ ನಡೆಯಿತು. ಇತ್ತೀಚೆಗಷ್ಟೇ ರಾಯಬಾಗಿಯವರ ಮನೆಯಲ್ಲಿರಲು ಪ್ರಾರಂಭಿಸಿ 3/4 ತಿಂಗಳು ಆಗಿರಬೇಕು.

ರಾಯಬಾಗಿಯವರ ಸಂಕುಚಿತ ಸ್ವಭಾವ

ನನ್ನ ಚಿಕ್ಕಮ್ಮನ ಶಿಫಾರಸಿನ ಪ್ರಕಾರ ರಾಯಬಾಗಿಯವರು ನಮಗೆ ಮನೆಯಲ್ಲಿರಲು ಸ್ಥಳವನ್ನೇನೋ ದಯಪಾಲಿಸಿದ್ದರು, ಅವರ ಸ್ವಭಾವದ ಪರಿಚಯ ಮಾತ್ರ ಒಳ್ಳೆಯದ್ದಾಗಿ ಇರಲಿಲ್ಲ ಅದನ್ನು ತಿಳಿಯುವ ಗೊಡವೆಗೂ ಹೋಗಿರಲಿಲ್ಲ ಯಾಕೆಂದರೆ ಅವರನ್ನು ಪರಿಚಯಿಸಿದವಳು ನನ್ನ ಚಿಕ್ಕಮ್ಮನೇ. ದಿನಗಳೆದಂತೆ ಆ ಮನುಷ್ಯ ಬಹು ಸಂಕುಚಿತ ಸ್ವಭಾವದವರು, ತೀರ ಸಣ್ಣಮನಸ್ಸಿನವರು ಎಂಬ ಭಾವನೆ ಉದ್ಭವಿಸಲು ಪ್ರಾರಂಭವಾಯ್ತು. ನಾನು ಪ್ರತಿಬಿಂಬಪುರದಲ್ಲಿ ನೌಕರಿ ದೊರಕಿಸಿಕೊಳ್ಳಬೇಕೆಂಬ ಬಯಕೆಗೆ ಬಹಳ ಬಹು ಅಡ್ಡಿ ಮಾಡಿಕೊಂಡಿದ್ದರೆಂದು ನನಗೆ ಹೊಳೆದಿರಲಿಲ್ಲ!-----

ಅದೊಂದು ದಿನ ಬೆಳಿಗ್ಗೆ ಅವರು ಆಫೀಸಿಗೆ ಹೊರಡುವಾಗ ಇವತ್ತು ಸಾಯಂಕಾಲ ನನ್ನ ಅಣ್ಣ-ಮುದ್ದಣ್ಣ ವಿಜಾಪುರದಿಂದ ಬರುವವನಿದ್ದಾನೆಂದು ತಿಳಿಸಿದರು ಬರಲಿ ಸಂತೋಷ ಎಂದ್ಹೇಳಿ ನಾನಾ ಸಾಯಂಕಾಲ ಬೇಗ ಬರುತ್ತೇನೆಂದು ಉತ್ತರಿಸಿದೆ! ಹಾಗು ಅವರಿಗೆ ಸರಿಯಾಗಿ ಆದರಾತಿಥ್ಯ ಮಾಡುವೆದೆಂದು ಲೆಕ್ಕಾಚಾರ ಹಾಕುತ್ತಲೆ ಹೊರಬಿದ್ದೆ.--

ಸಾಯಂಕಾಲ ನಾನು ಮರಳಿದಾಗ ಅವರ ಅಣ್ಣ ಒಂದು ಖುರ್ಚಿಯ ಮೇಲೆ ಕುಳಿತಿದ್ದರು ವೆಂಕಣ್ಣ ಅವರ ಹಿಂದೆ ನಿಂತಿದ್ದ- ನಾನು "ನಮಸ್ಕಾರ ಬಂದು ಬಹಳ ಹೊತ್ತಾಯಿತೆ? ಎಂದು ಕೇಳಿದ್ದಕ್ಕೆ ನನಗೆ ದೊರೆತ ಉತ್ತರವೇನು ಗೊತ್ತೆ, ಮನುಷ್ಯನಾದ ಯಾವ ಸಾಮಾನ್ಯ ಉಂದಿ ಅಂಥ ಉತ್ತರ ನಿರೀಕ್ಷಿಸಲು ಸಾಧ್ಯವೇ ಇಲ್ಲ ಅತಿ ಅನಾಗರಿಕತೆ ಉತ್ತರವದು. ಆ ನನ್ನ ಪ್ರಶ್ನೆಗೆ "ಇಲ್ಲ ನೀವು ಮನೆ ಯಾವಾಗ ಖಾಲಿ ಮಾಡುವವರು ಎಂಬುದೇ ಆ ಅನಿರೀಕ್ಷಿತ ಪ್ರಶ್ನೆಯಾಗಿತ್ತು ವೆಂಕಣ್ಣನಿಗೆ ಏನೇನೋ ಕೇಳಬೇಕೆನಿಸಿತು. ಆದರೆ ಆ ಮಾತೆಲ್ಲ ನುಂಗಿಕೊಂಡು ಉತ್ತರವಾಗಿ ಒಂದೇ ಒಂದು ಮಾತನ್ನು ಮಾತ್ರ ಹೇಳಿದೆ- "ಇನ್ನೆರಡು ನಿಮ್ಮ ಮನೆ ಬಿಟ್ಟು ಹೊರಡುತ್ತೇವೆ----" ಎಂದು

ಆ ವೆಂಕಣ್ಣ ಅಣ್ಣನನ್ನು ತಂಗಲು ಮಾಡಲಿಕ್ಕೆ ಕರೆಸಿಕೊಂಡಿದ್ದನೆಂದು ಕಾಣುತ್ತದೆ. ನಾವು ಮನೆ ತೆರವು ಮಾಡಬೇಕೆಂದು ಆ ಮೊದಲು ಒಂದು ಶಬ್ದವನ್ನೂ ಕೇಳಿರಲಿಲ್ಲ ಹೇಳಿರಲಿಲ್ಲ ಅಣ್ಣ ಆ ಆದೇಶವನ್ನು ಗಂಭೀರವಾಗಿ ಹೇಳುತ್ತಿದ್ದಾಗ ವೆಂಕಣ್ಣ ಪೆಚ್ಚುಮುಖ ಮಾಡಿ ನಿಂತಿದ್ದ ಮೊದಲೇ ಪೆಚ್ಚುಮುಖ ಈ ಸಂದರ್ಭದಲ್ಲಿ ಹುಚ್ಚುಚ್ಚಾಗಿ ಮಾರ್ಪಟ್ಟಿತ್ತು.

ನನಗೆ ಜೀವನದಲ್ಲಿ ಮೊದಲು ಬಂದ ಆಘಾತ ದಿಕ್ಕು ತೋಚದಾಯಿತು ಏನು ಮಾಡಬೇಕೆಂದು ತಿಳಿಯದಾಯಿತು! ಕೂಡಲೆ ಹೊರಹೊರಟೆ ನನ್ನ ಸೋದರಮಾವನಿಗೆ ಫೋನ ಸಂಪರ್ಕದಲ್ಲಿ ವಿಷಯ ತಿಳಿಸಿ, ಕೂಡಲೆ ನನಲ್ಲಿ ಬರಲು ಕೇಳಿಕೊಂಡೆ, ಒಂದು ಘಂಟೆ ಕಳೆದಿರಬೇಕು ಮಾವ ಬಂದ ಬರುವಾಗ ತನ್ನೊಬ್ಬ ಗೆಳೆಯನನ್ನೂ ಸಂಗಡ ಕರೆದುಕೊಂಡು ಬಂದಿದ್ದ. ಅವರು ಬಂದ ಸಮಯದಲ್ಲಿ ಮಬ್ಬುಗತ್ತಲು ಕವಿದಿತ್ತು

ಮಾವನ ಜೊತೆ ಬಂದಿದ್ದ ಗೆಳೆಯನ ಹೆಸರು ರಾಘವೇಂದ್ರ ಘೂಳಿಕರ ಎಂದು

ಮಾಲತಿ: ಶ್ರೀ ಬೆಳ್ಳಿಯವರು ಪೂನಾದಲ್ಲಿ ಮಿಲ್ಟ್ರಿ ಅಕೌಂಟ್ಸ್‌ನಲ್ಲಿ ಮಾವನ ಜೊತೆ ಕೆಲಸ ಮಾಡಿದವರು, ಅವರು ಸಧ್ಯ ಕ್ಯಾನ್ಸರ್ Institute ನಲ್ಲಿ ಕೆಲಸ ಮಾಡುತ್ತಿದ್ದರು ಮನೆ ಘಾಟಕೋಪರನಲ್ಲಿತ್ತು, ನಾವಿದ್ದ ಟ್ರಾಂಬೆಯ ಕಾಲನಿಗೆ ಹತ್ತಿರವೇ ಇತ್ತು, ಸಧ್ಯ ಘಾಟಕಾರರ ಕುಟುಂಬ ಅವರು ಮನೆಗೆ ಬಾಣಂತನಕ್ಕೆ ಹೋಗಿದ್ದರಿಂದ ಘಾಟಕಾರ ಒಬ್ಬರೆ ಇರುತ್ತಿದ್ದರು ಅದನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನನ್ನ ಮಾವ ಅವರನ್ನು ಕರೆದುಕೊಂಡು ಬಂದಿದ್ದರು ಹಾಗು ಸಧ್ಯದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಮನವರಿಕೆ ಮಾಡಿದ್ದರು.- ಪೂರ್ಣ ಮಾನವೀಯ ವಿಚಾರವಂತರಾದ ಶ್ರೀ ಘಾಟಕಾರರು - ನಾವು ಅವರಲ್ಲಿ ಹೋಗುವುದಕ್ಕೆ ಏನೂ ಅಡಚಣೆ ಮಾಡಲಿಲ್ಲವಷ್ಟೇ ಅಲ್ಲ ಆಪ್ತರಾಗಿ ಆ ಮನೆ ಬಿಟ್ಟು- ಹೋಗಲು ತುಂಬಾ ಸಹಾಯ ಮಾಡಿದರು

ನಡೆದ್ವೆ ಪ್ರಯಾಣ

ಆಗ ಮುಂಬೈಯಲ್ಲಿ ಬಸ್ಸುಗಳು ಸಾಯನ್‌ವರೆಗೆ ಮಾತ್ರ ಓಡುತ್ತಿದ್ದವು - ಘಾಟಕೋಪರಿಗೆ ಇನ್ನು 10 km ಮೊದಲೇ ಮರಳುತ್ತಿದ್ದವು- ಘಾಟಕೋಪರ ಮಾರ್ಗದಲ್ಲಿ ಆಗ ಸ್ವಾಮಿ Transport ಎಂದು ಖಾಸಗಿ ಬಸ್ ಸರ್ವೀಸ್ ಇದ್ದವು, ಅವುಗಳಲ್ಲಿ ಪ್ರವಾಸ ಎಂದರೆ ಅದೊಂದು ಪ್ರಯಾಸವೇ ಎನ್ನಬೇಕು.

ಸರಿ ಘಾಟಕಾರ ಅವರ ಮನೆಗೆ ತೆರಳುವುದೆಂದು ನಿಶ್ಚಿತವಾದದ್ದೇ ತಡ ನಾವೆಲ್ಲರೂ ಅಂದರೆ ನಾನು, ನನ್ನ ತಾಯಿ ತಂಗಿ ರತ್ನ ಮನೆಯವಳು ಹಾಗು 7 ತಿಂಗಳ ಮಗ, ಜೊತೆಗೆ ನನ್ನ ಸೋದರಮಾವ ಮತ್ತು ಘಾಟಕಾರ ಅವರು ಮಧ್ಯಾಹ್ನ ಮಾಡಿದ ಅಡಿಗೆ ಊಟದ್ದನ್ನೆಲ್ಲ ಕಟ್ಟಿಕೊಂಡು ಹೊರಟೆವು, ಕಾಲನಿ ದಾಟಿ ಮೇನ್‌ಗೇಟ್ ನಂತರ ಆಗ್ರಾರೋಡ ಸಿಗುತ್ತದೆ ಅಲ್ಲಿ ಸ್ವಾಮಿ ನಾವು, ಘಾಟಕೋಪರ ತಲುಪಬೇಕು, ಯಾರಾರ ಕೈಯಲ್ಲಿ ಎತ್ತಿಕೊಳ್ಳಲು ಸಾಧ್ಯವೋ ಅಷ್ಟನ್ನು ತೆಗೆದುಕೊಂಡು ಹೋದೆವು ಎರಡು ಘಂಟೆಯ ನಡಿಗೆಯ ನಂತರ ಘಾಟಕಾರ ಅವರ ಮನೆಗೆ ತಲುಪಿದೆವು, ಹೆಣ್ಣುಮಕ್ಕಳಿಲ್ಲದ ಮನೆ ಸಾಮಾನುಗಳೆಲ್ಲ ಅಸ್ತವ್ಯಸ್ತವಾಗಿ ಬಿದ್ದಿದ್ದವು, ಆಗ ಅವನ್ನೆಲ್ಲ ವ್ಯವಸ್ಥಿತವಾಗಿಡುವ ಗೊಡವೆಗೆ ಹೋಗಲಿಲ್ಲ ಬೇರೆ ಅಡಿಗೆಯನು ಮಾಡುವ ಗೋಜಿಗಾ ಹೋಗಲಿಲ್ಲ ಇದ್ದದ್ದನ್ನೆ ಕೆಡುತ್ತಿನಂತೆ ಎಲ್ಲರು ಹಂಚಿಕೊಂಡು ತಿಂದೆ. ನನ್ನ ಮಗನ ಆಟ ನಡೆದಿತ್ತು ಅದನ್ನು ನೋಡುವುದರಲ್ಲಿಯೇ ನಮಗಾದ ಸಂತೋಷ ಹನಿವೆರಸು ಮರೆಸಿತು.

ಅಗಡಿಯಿಂದ ತಂದ ಎಲ್ಲ ಸಾಮಾನುಗಳನ್ನು ಕೈಚೀಲದಲ್ಲಿ ತರಲು ಸಾಧ್ಯವಿರಲಿಲ್ಲ ಗಾಡಿಯಲ್ಲೇ ತೆಗೆದುಕೊಂಡು ಹೋಗಬೇಕು ಕುಂದಾಪುರದವರೊಬ್ಬರು ಗಣಪತಿ ಭಟ್ಟ ಎಂಬುವರೊಬ್ಬರು ಕಂಪನಿಯ ಡ್ರೈವರ ಆಗಿದ್ದರು ಮರುದಿನ ಅವರನ್ನು ಕಂಡೆ, ಅವರು ಹಿಂದಿನ ದಿನ ಘಟನೆಗಳನ್ನೆಲ್ಲ ಪ್ರತ್ಯಕ್ಷ ಕಂಡಿದ್ದರು ಅವರು ಡ್ರೈವರ್ ಆಗಿದ್ದರು ಸಹ ಮಗನಲಾಲರ ವಿಶ್ವಾಸಪಾತ್ರರಾಗಿದ್ದರು ಅದೊಂದೇ ಆಧಾರದ ಮೇಲೆ ಯಾವ ಅಧಿಕಾರಿಗಳನ್ನು ಕೇಳದೇ ಒಂದು Station Wagon ತಂದರು ಅದರಲ್ಲಿ ಎಲ್ಲ ಸಾಮಾನುಗಳನ್ನು ಹೇರಿಕೊಂಡು ಘಾಟಕೋಪರಕ್ಕೆ ಬಂದೆವು,

ಅಲ್ಲಿಂದು ಎರಡು ದಿನ ನಾವೆಲ್ಲಾ ಸೋತ್ತೆವು ವೆಂಕಣ್ಣನ ಅಣ್ಣ ಮಾಧವರಾವ್ ಸಾವಿತ್ರಮ್ಮ, ಮುಂದಿನ ದಿನ ನನ್ನನ್ನು ಮನೆಯವರನ್ನು ಕರೆತ್ತರ ಎಂದು ಹೇಳಿದಾಗ

ಹುಸ್ತ್ರವ್ರೆ "ನಾನೂ ಬರಲ್ವೇನು ಗಾಡ್ತ್ಯಾಗ?" ಎಂದು ಕೇಳುತ್ತಿದ್ದೆ, ಎಂಥ ನಾಚಿಗ್ಗೇಡಿ ಮನುಷ್ಯ ಇವ' ಎಂಬ ಮುನಿಸು ಹುಸಿ ಅದ್ರೆ ನಕ್ಕಳು" ನನ್ನ ಮುಖದಿಂದಲೂ ಒಂದು ಪ್ರಶ್ನೆ ನಗೆ ಹೊರಹೊಮ್ಮಿತು ಆಗ ಘಟಾನುಘಟಿಗಳಿಲ್ಲ ನಮ್ಮ ಮನೆಯಲ್ಲೇ ಇರಲಿಲ್ಲ ಗಣಪತಿ ಶಿಬಿರ ಟಿಪ್ಪಣಿಯ ಹೇಳಾದಲಿದ ಪ್ಪಯಂಡ್ರೆವರು ಆಗಿದ್ದರು ಅವರು ನಾಡಿ ಯುಗ್ಗಲಿಯ ನೀವನಾಮ ಗಳನ್ನು ಇಳಿಸಲು ಅವನ್ನು ಕಿರಣವಾಗಿ ಇಡಲು ತುಂಬಾ ವಿಹಾರಿಯು ಮಾಡಿದರು ಪೆಂಕಣಾವ ಅಣ್ಣ ಮಾಧವರಾಯ್ರು ಅಂಥ ಸಂದಿಗ್ಧ ಪರಿಸ್ಥಿತಿಯಲ್ಲೂ ಕಷ್ಟ ಜಾಹಿರಾಡಲು ನಂದೇಯಲ್ಲಿ, ಕೂಡಿದ್ದು ಬಂದ ವ್ಯಾನನಲ್ಲೇ ಮರಳಿದರು ಮಾಧವರಾಯರು ಹೀಗೆ ಪಿಶಾಚಿಕೆ ಬಂದು ನಮ್ಮನ್ನು ಮನೆಯಿಂದ ಹೊರಗೆ ಕಳುಹಿದ ಪ್ರಶ್ನೆ ಜಟಿಲ ಪ್ರಶ್ನೆಯಾಗೇ ಆಗಿ ಉಳಿದಿದೆ. ವಿಷಯವನ್ನು ಚಿಕ್ಕಮ್ಮನಿಗೆ ಅಳಿದ ಅವರ ವಿವರ ಕೇಳಬಾರದಾಗಿಯೂ ಚಿಕ್ಕಮ್ಮನಿಗೆ ಕೇಳಿಕೊಂಡೆ. ಅಂತೂ ಇದು ಜೀವನದಲ್ಲಿಯ ಕಟು ಅನುಭವ ಮುಂಬೈಯಲ್ಲಂತಾ ವಿಚಿತ್ರ ಅನುಭವ. ಮಾಧವರಾವ್ ಕಪ್ಪೇಣ ಹಿಡಿದವರು ಶಹರದಲ್ಲಿದ್ದವರು ಆದರೆ ಸಂಸ್ಕೃತಿಯ ಗಂಧವೇ ಇರದಿದ್ದರೆ ಜೀವನ ಏತಕ್ಕೆ ಬಂತು? ಅಂತಾ ಆ ವಿಷಯವನ್ನು ಅಲ್ಲಿಗೆ ಬಿಟ್ಟೆ ಅದರಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ ಆದರೆ ಪ್ರೀಮಿಯರ್‌ದಲ್ಲಿಯೇ ನವಕರಿ ಸಿಕ್ಕೀತಲ್ಲ ಬಿಡ್ರೆಂಬ ಹಂಬಲಕ್ಕೆ ಈ ಘಟನೆ ಪ್ರಚೋದನವಾಯಿತು - - - -

<u>ಪ್ರೀಮಿಯರ್‌ನಲ್ಲಿ ನವಕರಿ ಪ್ರಯತ್ನ</u>

ಹಿರಿಮೇಲಿನ ಘಟನೆಗಂತೂ ತಿಲಾಂಜಲಿ ಅರ್ಪಿಸುತ್ತ, ಮುಂದಿನಾಗುವ ಜೀವಿ ಕೊಂಡ ಕಾರ್ಯಕ್ಕೆ ಸಿದ್ಧಿವಿನಾಯಕನ ಪೂಜೆ ಮಾಡಲಾಯಿತು. ಅದ್ವೆ ಪ್ರೀಮಿಯರ್‌ನಲ್ಲಿ ನವಕರಿ ದೂರಕಿರುವದು!

ತಂದೆಯವರಿಗೆ ಬರೆದು ಡಾ|| ನಾಡು ಹರ್ಡೀಕರರಿಂದ ಒಂದು ಪತ್ರವನ್ನು ದೊರಕಿ ಪ್ರೀಮಿಯರ್ ಕಂಪನಿಯ ಅಧಿಕಾರಿಗಳು ನನಗೊಂದು ನವಕರಿಯನ್ನು ದಯಪಾಲಿಸಬೇಕೆಂದು ಆ ಸಂಬಂಧವಾಗಿ ಮಗನಲಾಲ ಶಹಾ ಅವರಿಗೆ ಇಲ್ಲಿ ಶೇಲಾಲಚಂದ ಹೀರಾಚಂದ ಅವರಿಗಾಗಲೇ ಪತ್ರದೊರಕಿಸಿ ಕಳಿಸಲು ಕೇಳಿಕೊಂಡಿದ್ದೆ ಅಂತು ~~ತಂದೆ~~ ತಂದೆಯವರು ಆ ಕಾಗದ ದೊರಕಿಸಲು ಎಷ್ಟು ತೊಂದರೆ ತೆಗೆದುಕೊಂಡರೋ ಪರಿಚಯ ಪತ್ರಗಳು ಬಂದವು)

ಅವನ್ನು ತೆಗೆದುಕೊಂಡು ಮಗನಲಾಲ ಶಹಾರನ್ನು ಪತ್ರದಲ್ಲಿ ನಾನು ಚಿತ್ರಕಾರ ಅವನಿಗೆ ಸರಿಹೋಗುವಂತಹ ನವಕರಿಯನ್ನು ಕೊಡಬೇಕೆಂದು ಕೇಳಿಕೊಳ್ಳಲಾಗಿತ್ತು! ಶಹಾ ಅವರ ಆ ಚೀಟಿಗಳನ್ನು ನೋಡಿ ಎಂಪ್ಲಾಯಮೆಂಟ್ ಆಫೀಸರ್ ಆಗಿದ್ದ ಬಿಬ್ರೀ ಪಾಂಡೆ ಯಂಬುವರನ್ನು ಕರೆದು ನನ್ನ ಪರಿಚಯಮಾಡಿ ಇವನಿಗೆ ಯೋಗ್ಯವಾದ ನವಕರಿಯ ವ್ಯವಸ್ಥೆ ಮಾಡಬೇಕೆಂದು ಅವರಿಗೆ ಹೇಳಿದರು ಅವರೊಂದು ಫಾರ್ಮ್ ತುಂಬಿಸಿಕೊಂಡು ಶಿಪಾಯಿ ಜೊತೆಗೆ ಕಾರ್ಖಾನೆಯ ಒಳಗಡೆ ಟೀಪೇರ ಶಾಪ್ ಎಂಬ ವಿಭಾಗಕ್ಕೆ ಕಳುಹಿದರು ಅಲ್ಲಿಯ ಮುಖ್ಯ (ಹೆಸರು ಮರೆತು ಹೋಗಿದೆ) ಸ್ಥ ಇನ್ನೊಬ್ಬರನ್ನು ಕರೆದು ನನ್ನ ಟೆಸ್ಟ್ ತೆಗೆದುಕೊಳ್ಳಲು ಹೇಳಿದರು ಅವರು ನನಗೊಂದು ನಂಬರ್ ಪ್ಲೇಟ ಬರೆಯಲು ಹೇಳಿದ. ಅದು ನಾನು ಮಾಡಬೇಕಾದ ಕೆಲಸವಾಗಿರಲಿಲ್ಲ- ಆಗ ಅವರಿಗೆ ಹೇಳಿದೆ ನಾನು ಆರ್ಟಿಸ್ಟ್ ಇದ್ದೇನೆ ಇದು ಪೇಂಟರನ ಕೆಲಸ ಎಂದು

ತಿಳಿಸಿದ ಈ ವಿಷಯದಲ್ಲಿ ಮರಾಠಿಭಾಷೆಯ ಒಂದಕ್ಷರವನ್ನೂ ಬಳಸುತ್ತಿರಲಿಲ್ಲ. ಹರಕು ಮುರುಕು ಇಂಗ್ಲಿಷಿನಲ್ಲಿಯೇ ಹೇಳಿದೆ ಹಾಗು ನೇರ ಶಹಾ ಅವರಲ್ಲಿ ಬಂದು ನಡೆದ ಸಂಗತಿಯನ್ನು ಅರುಹಿದೆ ಹಾಗು ಅವರಿಗೆ ಸ್ಪಷ್ಟವಾಗಿ ಹೇಳಿದೆ ನಾನೊಬ್ಬ ಚಿತ್ರಕಾರ ನಾನು ಪೇಂಟರ ಅಲ್ಲ ಅಂಥ ಕೆಲಸವನ್ನೇನಾದರನ್ನು ಕೊಟ್ಟರೆ ಉಪಕಾರ ಎಂದು ಹೇಳಿದೆ. ಬಹುಶಃ ನಾನು ನನ್ನ ನಾಚಿಕೆ ಸ್ವಭಾವವನ್ನು ಬದಿಗಿಟ್ಟು ಸ್ವಾಭಿಮಾನವನ್ನು ಪ್ರಕಟಿಸಿದ್ದರು ಇದ್ದ [illegible]?

ನನ್ನ ಈ ಮಾತು ಕೇಳುತ್ತಲೆ ಶಹಾರ ಮುಖ ಕೆಂಪಾಯಿತು ಕೋಪದಲ್ಲಿಯೇ ಪಿಯೂನ್ನು ಕರೆದು "ಏ ಬಂಡೇನಾ ಬುಲಾವ" ಎಂದು ಹೇಳಿದರು ಕ್ಷಣಮಾತ್ರದಲ್ಲಿ ಏ ಬಂಡೆ ಬಂದರು ಅವರನ್ನು ನೋಡುವದೆ ತಡ ಮೊದಲೆ ರೇಗಿದ್ದ ಅವರ ರೋಷ ಇಮ್ಮಡಿಸಿತು ಧ್ವನಿ ಇನ್ನೂ ಜೋರಾಯಿತು ಆ ಧ್ವನಿಯಿಂದ ಹೊರಡುವ ಮಾತಿನಲ್ಲಿಯೆ ಅವರ ಕೋಪವನ್ನು ಅಳೆಯಬಹುದಿತ್ತು: ...ನೀನು ಯಾರನ್ನು ಯಾವ ಸ್ಥಾನಕ್ಕೆ ಸಂದರ್ಶನಕ್ಕೆ ಕಳಿಸಬೇಕೆಂಬುದೇ ಇಷ್ಟು ವರ್ಷ ಸರ್ವಿಸ ಆದರೂ ತಿಳಿಯದಿದ್ದರೆ ನಿಮ್ಮ ಆರ್ಡರನ್ನು ತೆಗೆದುಕೊಂಡು ಏನು ಮಾಡುವದು, ಅವರೊಬ್ಬ ಆರ್ಟಿಸ್ಟ್ ಅವರನ್ನು ಸೈನ್ ಬೋರ್ಡ ಬರೆಯಲು ಕಳಿಸುವದೆ ಎಂದು ರೇಗಾಡುತ್ತ ಮರಾಠಿಯಲ್ಲೇ ಕೂಗಾಡಿದರು. ಈ ಸಂಭಾಷಣೆಯು ನಡೆಯುತ್ತಿದ್ದ ಶಹಾರ ಚೇಂಬರನಲ್ಲಿ ಕುಳಿತಿದ್ದರು ಅವರನ್ನು ನಾನು ನೋಡಿದೆ ಗುಂಡಾಗಿ ಮನೆಯ ತಿನ ಕಟ್ಟಡದಲ್ಲಿಯೆ ಅವರು ಇರುತ್ತಿದ್ದರು. ಹೆಸರು ಶಿಂವಳಕರ ಎಂದು. ಕಂಪನಿಯಲ್ಲಿ ಅವರು Industrial Relations officer ಆಗಿದ್ದರು. ಏ ಬಂಡೆ ಹೋದಮೇಲೆ ನನ್ನನ್ನು ಕರೆದರು ಶಹಾರ ಚೇಂಬರಿನ ಹೊರಗಡೆಯೆ ಅವರ ಟೇಬಲ್ ಇತ್ತು, ತಮ್ಮ ಎದುರು ಕುಳಿತುಕೊಳ್ಳಲು ಹೇಳಿದರು ಹಾಗು." ನಾವು ಆದಷ್ಟು ಬೇಗನೆ ಕಂಪನಿಯ ಒಂದು ಡಿಸೈನ್ ಸೆಕ್ಷನ್ ತೆರೆಯುವವರಿದ್ದೇವೆ ಆವಾಗ ನಮಗೆ ಆರ್ಟಿಸ್ಟರ ಕೆಲಸ ಅವಶ್ಯ ಬೇಕಾಗುತ್ತದೆ ಆ ಜವಾಬ್ದಾರಿ ತೆಗೆದುಕೊಳ್ಳಲು ಸಿದ್ಧರಿದ್ದೀರಾ? ಎಂದು ಕೇಳಿದರು ನನ್ನ ಒಪ್ಪಿಗೆ ಕೊಟ್ಟೆ, ನಂತರ ಪಗಾರ ಮುಂತಾದ್ದರ ವಿಷಯ ಕೇಳಿದರು ಪ್ರಶ್ನೆಗೆ ಉತ್ತರ ಕೊಡುವಾಗ ಮಾತ್ರ ನಾನು ತಪ್ಪು ಮಾಡಿದೆ ಹಿಂದಿನ ಕಂಪನಿಯಲ್ಲಿ ನಿಮ್ಮ ಪಗಾರ ಎಷ್ಟಿತ್ತು ಕೇಳಿದರು ನಾನು ನಿಜವಾದ ಅಂಕಿಯನ್ನು ಹೇಳಬಾರದಿತ್ತೆಂದು ಹಿಂದಿನಿಂದ ಹೊಳೆಯಿತು ಕೆಲವು ತಿಂಗಳಾಗಿ ಅಲ್ಲದೆ ಆಗ ನನಗೆ ಎಂಥದೋ ಒಂದು ಸಂಕೋಚವಿತ್ತು ಮತ್ತು ಅದು ಕೇವಲ ಕೆಲ ತಿಂಗಳಾಗಿ ಮಾತ್ರವಿತ್ತು ಹೀಗಾಗಿ ಅದು ಅಲ್ಪ ಪಗಾರಕ್ಕಾಗಿ ದುಡಿಯುತ್ತಿದ್ದೆ ಎಂದು ಹೇಳಬೇಕಾಯಿತೆಂದ ನಂತರ ಆಗಿನ ಆದರೆ "ಶಾರ್ಟ ಮುಗಿದು ಹೋಯಿತು" ಅಂತೂ ಆವತ್ತೇ appointment letter ಕೊಡ ಕೊಟ್ಟರು ಸದ್ಯ [illegible]/ಘಾಟಕೋಪರ್ [illegible] ಕುಳಿತುಕೊಳ್ಳ ಬಹುದು ಅಲ್ಲಿಯೆ ಕೆಲಸ ಮಾಡಿ ಎಂದು ಹೇಳಿದರು ಇನ್ನೊಂದು ಅಚ್ಚರಿ ಎಂದರೆ ನನಗೊಂದು ರೂಮು ಕೂಡಾ ಅಲಾಟ್ ಮಾಡಿದರು ಆದರೆ ಅದು ಸಿಂಗಲ್ ರೂಮು ಆಗಿತ್ತು.

ಆ ಪತ್ರವನ್ನು ತೆಗೆದುಕೊಂಡು 'ಶಿಂವಳಕರ'ರನ್ನು ಕೇಳಿದೆ ಅಲ್ಲಿಗಾಯಿತೇ ನಾನು ಕುಟುಂಬಸ್ಥ ಎಂದು [illegible] ನಾನು [illegible] ಆ ಒಂದು ರೂಮಿನಲ್ಲಿ ನಾವೆಲ್ಲರೂ ಇರುವುದು ಹೇಗೆ? ಎಂದು ಕೇಳಿದೆ ಉತ್ತರವಾಗಿ ಸದ್ಯಕ್ಕೆ ಡಬಲ್ ರೂಮ ಕೊಡಲು ಬರುವಂತಿಲ್ಲ ಕೆಲ ತಿಂಗಳು [illegible] ಕೊಡಿಸಲು

ಪ್ರಯತ್ನ ಮತ್ತೇನೆಂದು ಹೇಳಿದರ

ನನ್ನನ್ನು ಸಮಾಧಾನಪಡಿಸಲು ಹಾಗೆ ಹೇಳಿದರೋ ಏನೋ ಆ ಬಗೆ ನಾವು ಆರ ಮನಸ್ಸು ಗೊಂದಲ ಮಾಡಿಕೊಳ್ಳಲಿಲ್ಲ, ನಮಗೆ ನಿಶ್ಚಿತ, ನಿನ್ನೆ ದಿ ಆದರೂ ಆತಂಕವೇನೋ ಇದ್ದೇ ಇತ್ತು ಸಾರು ಇಂಬಿತು ಮುಂದಿನ ವಿಚಾರ ಮುಂದೆ ನೋಡೋಣ ಎಂದು ಕೊಂಡು ಧೈರ್ಯದಿಂದ ಸಾಗಿದೆ.

ಈ ಒಂದೆರಡು ದಿನಗಳಲ್ಲಿ ಸಂಭವಿಸಿದ ವಿಷಯಗಳನ್ನು ನೋಡುತ್ತ ನನ್ನ ಮಾನವನಿಗೆ ಆಶ್ಚರ್ಯಕ್ಕೇ ಅಲ್ಲ ಮುಂದೇನು ಎಂಬ ವಿಚಾರವನ್ನು ಮಾಡ ಬೇಕಾಗಿತ್ತು, ಮರುದಿನ ಕಳೆದೆವು, ಸಾಯಂಕಾಲ ನನಗೆ ಆಲೋಚನೆ ಆದರೂ ಚಿನ್ನಲ್ಲಿಯೇ ನೋಡಿದೆವು, ಅಲ್ಲಿಂದ ಶ್ರೀಕಂಠಯ್ಯನವರ ಸೋದರರ ಮನೆಗೆ ಹೋದೆವು ಅಂದು ಎಲ್ಲರೂ ಸೇರಿ ಊಟ ಮಾಡಿದೆವು ಕೆಲ ವಿಚಾರ ವಿನಿಮಯ ಮಾಡಿ, ಮನೆಯ ಎಲ್ಲರನ್ನೂ ಅಲ್ಲಿಗೆ ಕಳಿಸುವುದು ಸದ್ಯ ನಾನೊಬ್ಬನೇ ಇದು ಡಬಲ್ ಸೀಟ್ ಮೇಲೆ ಎಲ್ಲರನ್ನೂ ಕರೆಸಿಕೊಳ್ಳುವೆಂಬ ನಿರ್ಣಯ ಮಾಡಿದೆವು, ಆ ಪ್ರಕಾರ ತಂದೆಯವರಿಗೆ ತಿಳಿಸಿದೆವು,

ಎಲ್ಲರನ್ನೂ ನಾನೇ ಹೋಗಿ ಕರೆಸಿ ಬಂದೆನೋ ಅವರೇ ಹೋದರೋ ಎಂಬುದು ಜ್ಞಾಪಕದಲ್ಲಿ ಇಲ್ಲ ಈ ಸಮಯ ಕಾಗಲೇ ಬಂಗಲೆಯ ವಾಸ್ತವ್ಯವನ್ನು ಬಂದುವಾಗಿ ಅಗಡಿಯ ಓಣಿಯಲ್ಲಿಯೇ ಬಸವಣ್ಣ ಕಾಂಟೋನ್ಮೆಂಟಿನೊಂದಿಗೆ ತಂದೆಯವರ ವಾಸ್ತವ್ಯ ಪ್ರಾರಂಭವಾಗಿತ್ತು ~~[illegible]~~ ಅಚ್ಚುಕಟ್ಟಾದ ವಿಶಾಲವಾದ ಮನೆಯೂ ಆಗಿತ್ತು, ಸದರಗಟ್ಟಿ ಎದುರಿನ ಕಟ್ಟೆ ಕಟ್ಟೆಗೆಯಾಗಿತ್ತು ಸದರಗಟ್ಟಿ ಗಳದಿ ಮನುಗಳನ್ನಿಡುವ ಸ್ಥಳವಾಗಿ ಮಾರ್ಪಟ್ಟಿತ್ತು. ಕುದುರೆ ಕಟ್ಟುವ ಜಾಗದಲ್ಲಿ ಅಡಿಗೆಮನೆ ಬಂದಿತ್ತು, ಧಮಣಿ ಟಾಂಗಾ ಬಿಡುವ ಸ್ಥಳವನ್ನು ನಮ್ಮ ಬಾಲ್ಯಬಂಧುಗಳಾದ ಶ್ರೀ ಶ್ರೇಷ್ಠಿಗಾಡ ಎಂ. ಬಹದ್ದೂರ ದ್ವಾರಾಯಿಯವರಿಗೆ ಮಾರಿದ್ದರು. ಅಲ್ಲವ್ವನ ದರ್ಬಾರ ಇನ್ನು ಹಬ್ಬ ಪ್ರಮಾಣದಲ್ಲಿ ಕಾರ್ಯನಡೆಸಿದ್ದು ಊರ ಕಾಳಗಿನ ಬರಹೋಗುವ ಹಳ್ಳಿಗರ ಸಂಖ್ಯೆ ಹೆಚ್ಚಾಗಿತ್ತು ಬಾಡದ ಗಿರಿಮೆ ಇವನ್ನು ಕೇಳಬೇಕೆ, ಸಹಜವಾಗಿಯೇ ಇಳಿದಿತ್ತು ಹಿಂದೆ ದೇಸಾಯರ ವಾಡೆಕ್ಕೊಂದು ಭಂಗದ ಭಾವನೆಯಿದ್ದುದು ಈಗ ಯಾರಿಗೂ ಸಹಜವಾಗಿ ಬಳಬರಲು ಹಿದರಿಕೆ ಎಂಬುದೇ ಉಳಿದಿರಲಿಲ್ಲ. ನನ್ನ ತಾಯಿ ಚಿಕ್ಕ ತಂಗಿ ಮಗ ಈ ವಾತಾವರಣಕ್ಕೆ ಹೊಂದಿಕೊಂಡೇ ಹೋಗಬೇಕಿತ್ತು! ನಾನು ಮನೆಯ ಜನರಿಂದ ಬೇರ್ಪಟ್ಟಾಗಿನ ವಾತಾವರಣದು

ಮುಂಬೈಯಲ್ಲಿಯ ಪ್ರಾಸಮನೆ

ನನಗೆ ಸಿಕ್ಕಿದ್ದ ಒಂದೇ ಖೋಲಿಯಲ್ಲಿಯೇ ಅನುಕೂಲತೆ ಮಾಡಿಕೊಳ್ಳಬೇಕು ಸ್ವಂತವಾಗಿ ಅನ್ನವನ್ನು ಬೇಯಿಸುವುದು ಗೊತ್ತಿತ್ತು ದಿನಗಳಲ್ಲಿ ಹುಳಿ, ಚಟ್ನಿ ಮಾಡಿಕೊಳ್ಳುವುದನ್ನು ರೂಢಿಸಿಕೊಂಡೆ ಹೋಟೆಲಿನಲ್ಲಿಯಂತೂ ಯಾವಾಗಲೂ ಊಟ ಮಾಡುವುದು ಬೇಡೆಂದು ನಿರ್ಧರಿಸಲಾಗಿತ್ತು ಅದಕ್ಕೆ ಪ್ರಥಮ ಕಾರಣ ಆರೋಗ್ಯವಾಗಿದ್ದರೆ ಎರಡನೆಯದು ಆರ್ಥಿಕದ. ನನ್ನ ಪಕ್ಕದ ರೂಮಿನಲ್ಲಿ ವಿಜಾಪುರದ ಅರವಿಂದ ಮುದ್ದಾಪುರ ಎಂಬುವರಿಗೆ ಅಲಾಟ್ ಆಗಿತ್ತು, ಅವರಿಗೆ ಅಡಿಗೆ ಬರುತ್ತಿರಲಿಲ್ಲ, ಕ್ಯಾಂಟೀನಿನಲ್ಲಿ ಆರು ಆಣೆಗೆ ಊಟ ಕೊಡುತ್ತಿದ್ದರು ಆದರೆ ಮೊದಲೆ ಅವರು ಸುಧಾರಿಸಿಕೊಂಡಿದ್ದ ರಾತ್ರಿಯ ಸಮಯದಲ್ಲಿ ಹೋಗ

ಹೋದಾಗ ಊಟದ ಶಾಸ್ತ್ರ ಮುಗಿಸಿಕೊಂಡು ಬರುತ್ತಿದ್ದೆವು. ನಾವು, ಅಡಿಗೆ ಮಾಡು
ವುದು (ಪ್ರತಿದಿನ ಬೆಳಗ್ಗೆ) ಸ್ಟೋವ್ ಮೇಲೆಂದೇ ಮುಸುರೆ ಭಾಂಡೆಗಳನ್ನು ನಾವೇ ತೊಳೆದು
ಕೊಳ್ಳುವುದು ಅಭ್ಯಾಸವಾಗಲು ವಿದ್ಯಾರ್ಥಿಗಳಲ್ಲಿ ಈ ನಮ್ಮ ಅಂತೇವಾಸಿ ಮಿತ್ರರಲ್ಲೊಬ್ಬ ಪ್ರೇರ
ಕರಾದ ಶ್ರೀ ಎಂ. ಹುಲಗೆಪ್ಪ ಎಂಬುವರೂ ಇರುತ್ತಿದ್ದರು ಅವರು ಕಟ್ಟಾ ಕಾಂಗ್ರೆಸ್
ಕಾರ್ಯಕರ್ತ ಹಾಗೂ ಗಾಂಧೀವಾದಿ ಅವರು ಕೂಡ ಮೋಹನಲಾಲ ಶರ್ಮಾರ ಸಹಾಯ ಪಡೆದು ಪ್ರಿ
ಮಿಯರ್‌ನಲ್ಲಿ ಓದುವ ಸಲುವಾಗಿ ಬಂದವರು ಆದರೆ ಶರ್ಮಾ ಅವರ ಅವರನ್ನು ಕಂಪನಿಯಲ್ಲಿ
ಸೇರಿಸಿಕೊಳ್ಳಲಿಲ್ಲ ಕಂಪನಿಯ ಕೆಲಸಗಾರರಿಗೆಂದು ಒಂದು ರೇಶನ್ ಅಂಗಡಿಯಿತ್ತು ಆ
ಅಂಗಡಿಯನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಅವರಿಗೆ ಕೊಟ್ಟು ಉಳಿದ ಸೌ
ಲಭ್ಯಗಳನ್ನು ಅವರಿಗೆ ನೀಡಿದ್ದರು ಆ ಸೌಲಭ್ಯದಲ್ಲಿಯೇ ಅವರಿಗೆ ಇರಲು ಜಾಗೆ ಸಿಕ್ಕಿತ್ತು
ಕೊನೆಗೂ ಅವರಿಗೆ ಕಂಪನಿಯಲ್ಲಿ ಸೇರಿಸಿಕೊಳ್ಳಲಿಲ್ಲ ಅದು ಅವರಿಗೆ ಆಶಾಭಂಗವಾದಂತೆ
ಯಿತು, ಯಾವಾಗ ಬಿಟ್ಟು ಹೋದರೆಂಬುದು ನೆನಪಿಲ್ಲ ಅವರು ಆಗಾಗ ನಮ್ಮ ರೂಮಿಗೆ ಬಂದು ಸ್ವಂ
ತವಲ್ಲ ಸೇರಿಕೊಳ್ಳುತ್ತಿದ್ದರು ಮಾತ್ರ!

ಅಂತೂ ಇದ್ದುದರಲ್ಲಿಯೇ ಒಬ್ಬಂಟಿಗ ಬ್ರಹ್ಮಚಾರಿ ಜೀವನವನ್ನು ಹಸನಾಗಿಸಿಕೊಂಡಿದ್ದೆ
ಅದೊಂದು ದಿನ- ಮಧ್ಯಾಹ್ನ ಹನ್ನೆರಡರ ಸುಮಾರಿಗೆ ಮುದ್ದಾಪುರನು ಆನ್ನ ಡಿಪಾರ್ಟಮೆಂಟಿನಿಂ
ದ ನನಗೆ ಫೋನ್ ಮಾಡಿ ಕೂಡಲೆ ಅವನಲ್ಲಿ ಬರಲು ಹೇಳಿದ- ಹೋದೆ, ನನ್ನೆದುರಿಗೊಂದು
ಕಾಗದ ಹಿಡಿದನು ಅದು ಒಬ್ಬ ಕೆಲಸಗಾರನಿಂದ ಆತನಿಗೆ ಕೊಟ್ಟಿದ್ದು ಮನೆ ಆತ್ನಿಗೆ ಬಿಟ್ಟು ಕೊಡಬೇಕೆಂದು
ಕೇಳುವ ಸಂದೇಶವಿತ್ತು, ಅದನ್ನು ತೋರಿಸುತ್ತ, ಇವತ್ತು ಈ ಮನೆಯನ್ನು ಬಿಟ್ಟು ಬಿಡು ಸ
ಬಂಧಿಸಿದ ಈ ಚಿತ್ನಿ ಕಳೆದುಕೊಳ್ಳಬೇಡವೆಂದಾಗ ಮುದ್ದಾಪುರ ಹೇಳಿದನು ಲಾಟರಿಯ ಮೇಲೆ
ಮನೆ ಬದಲಿಸುವ ಅಥವಾ ಹೊಸ ಮನೆ ಅಲಾಟ್ ಮಾಡುವ ಅಧಿಕಾರಿಯ P.A. ರಜೆ
ಮೇಲಿದ್ದು ಅವನ ಜಾಗೆಯಲ್ಲಿ ಅದೊಂದು ದಿನಕ್ಕೆ ಮಾತ್ರ ನಮ್ಮವರೇ ಆದ ಮೈಸೂರಿನ M. ವಾ
ಸುದೇವ ರಾವ್ ಎಂಬುವರಿದ್ದರು ಮುದ್ದಾಪುರ ಆಡಮಾಡದೆ ಬಂದಿದ ಆ ಕಾಗದೊಂದಿಗೆ ಹೋಗಿ
ರಾವ ಅವರಿಗೆ ದೈನಿಂದಿಗೆ ದೊಡ್ಡ ಮನೆಯ ಅವಶ್ಯಕತೆ ಬಹಳವಿದೆ ಅವನಿಗೆ ಈ ಮನೆಯನ್ನು
ಅಲಾಟ್ ಮಾಡಿದರೆ ಅನುಕೂಲವೆಂದು ಹೇಳಿ ಹಿಂದೆ ನಡೆದ ಪ್ರಸಂಗವನ್ನು ಅವರ ಗಮನಕ್ಕೆ
ತಂದನು ರಾವ ತಡಮಾಡಲಿಲ್ಲ ಆ ಪತ್ರದೊಂದಿಗೆ Adm officer ಆಗಿದ್ದ ಶ್ರೀ ಶ್ರೀನಿವಾಸರಾ
ವ್ ರಿಗೆ ನನ್ನ ಹೆಸರಿಗೆ ಈ ಮನೆಯನ್ನು ಅಲಾಟ್ ಮಾಡಲಡ್ಡಿಯಿಲ್ಲವೆಂದು ಬರೆಸಿಕೊಂಡು ಬಂ
ದರು ಅಷ್ಟೇ ಅಲ್ಲ ಕೂಡಲೆ ತಾನೆ Order type ಮಾಡಿ ಸಂಬಂಧಿಸಿದವರಿಗೆ ಪತ್ರದ ಪ್ರತಿಗ
ಳನ್ನು ಕಳುಹಿ ನೋಟೀಸು ಬೋರ್ಡ ಮೇಲೆ ಪ್ರತಿಯನ್ನು ಅಂಟಿಸುವ ಕಾರ್ಯವನ್ನು ಆಫೀಸ್
ಬಂದಾಗಿಂದ ಮೊದಲೇ ಮಾಡಿಸಿದ! ಈ ಅವಸರಕ್ಕೆ ಕಾರಣವೆಂದರೆ ಅಂದು ರಜೆಯಮೇಲಿದ್ದ
P.A. ಹೆಸರು ನಾರಾಯಣ ಎಂದಿತ್ತು ಅವನು ಕೇರಳಿಗನು ಇಂಥ ಪ್ರಸಂಗಗಳೆಲ್ಲವನ್ನು, ದುಡ್ಡು ಪಡೆದು
ಕೇರಳಿಗರಿಗೆ ಅನುಕೂಲ ಮಾಡಿಕೊಡುವ ಅವನ ಸ್ವಭಾವವನ್ನು ಮುದ್ದಾಪುರ ತಿಳಿದಿದ್ದ
ಲ್ಲದೆ ಆ ಡಿಪಾರ್ಟಮೆಂಟಿನ ಮುದ್ದಾಪುರನ್ನೆ ಹೆಡ್ ಕ್ಲರ್ಕ್ ಆಗಿದ್ದ. ಮರುದಿನ ನಾರಾಯಣನು,
ಒಂದೇ ದಿನದಲ್ಲಿ ಆದ ಬದಲಾವಣೆಗಳನ್ನು ಕಂಡು ಏನು ಅಂದುಕೊಂಡನೋ? ಅಂತೂ
ಆಗಿಯೇ ಹೋಗಿತ್ತು. ಅವನೆ ಅಲಾಟ್ ಆದ ಮನೆ ಗ್ರೌಂಡ ಫ್ಲೋರ್ ಮೇಲಿತ್ತು ಆಗ
ನಾನು ಮುದ್ದಾಪುರನಿಗೆ ಮನೆ ಮೇಲಿನ ಫ್ಲೋರ್ ಮೇಲಿತ್ತಾದರೆ ಚಿನ್ನಾಗಿತ್ತು ಎಂದಷ್ಟೇ ಹಾಗೆ

ಆಗ ಅವನ ಕೋಪ ನೆತ್ತಿಗೇರಿತು. "ಕದ್ದು ಹೋಳಿಗೆ ಕೊಟ್ಟರ ಬೆಲ್ಲ ಇಲ್ಲ ಅಂಬುವ--!"
ನೀನು ಎಂದು ನನನ್ನು ಟೀಕಿಸಿದನು ಏನೋ ಚಿಪ್ಪ ನನಗೆ ಬೆನ್ನಾಗಿತ್ತು ಮನೆ
ಬೇಡ ಎಂಬುವವನ ಅರ್ಜಿ ಬಂದಾಗ ನಾಗರಾಯರು ಇಲ್ಲದ್ದು ಅವ ನೈಕಾಲ ಗೇ
ರಾವ್ ಇದ್ದದ್ದು ಚಿಪ್ಪ ನಡೆದು ~~ಪ್ರಸಂಗ~~ ಅದನ್ನು ಆರೋಗ್ಯ ಮತ್ತೆ ಮುಂದ
ನೋಡಬೇಕಾಗಿದೆ ಎಂದು ನನ್ನನ್ನು ಸುಮ್ಮನಿರಿಸಿದ! ಬಂದಿದ್ದು ಬರಲಿ ಬರುತ್ತ.
ಅವನ ಮಾತನ್ನು ಕೇಳಿ ಸುಮ್ಮನಾದೆ, ಹಿರಿತ್ತವ ಕಮೆಂಟ್ ಮಾಡಲಿಲ್ಲ!

ಇನ್ನು ಮನೆ ಬದಲಿಸುವ ಮೂರನೇ ಆಟಕ್ಕೆ ಪ್ರಾರಂಭ. ಒಮ್ಮೆ ಗಾಯಬರಿ
ಮನೆ ಬದಲಿಸಿದ್ದು ನಂತರ ಘಟಕಾರರ ಮನೆಯಿಂದ ಊರಿಗೆ, ಊರಿನಿಂದ
ನನಗೆ ಸಿಕ್ಕ ಸ್ಥಿರ ಮನೆಗೆ (ಕಂಪನಿಯ ಬಾಡಿಗೆ ಮನೆ) ಬದಲಾಯಿಸುವದು ಇದಕ್ಕಾಗಿ
ಮತ್ತೆ ಹೋಯಿತು ನನ್ನ ಮಾವರಗಾಂದಿಗೆ ಮೀಟಿಂಗ್ ಬೇಡ!

ಈಗ ಚಿಕ್ಕ ಮನೆಗೆ ಎಲ್ಲರನ್ನು ಕರೆದುಕೊಂಡು ಬಂದು ವಾಸ್ತವ್ಯ
ಮಾಡಿದೆನೋ ಇಲ್ಲವೋ ಎಂಬ ವಿಷಯ ಜ್ಞಾಪಕಕ್ಕೆ ಬರುತ್ತಿಲ್ಲ----?

ಆದರೆ ಈ ಮಧ್ಯೆ ನಡೆದ ಘಟನೆಯೊಂದು ನನಗೆ ಅನುಕೂಲವಾಯಿತು:

D4 ನಂ ಕಟ್ಟಡವನ್ನು ಕೇವಲ ಶಾಕಾಹಾರಿಗಳಿಗಾಗಿಯೇ ಎಂದೊಂದು
ನಿಯಮವನ್ನು ಕಂಪನಿಯವರು ವಿಧಿಸಿದ್ದರು. ಈ ಸಂದರ್ಭದಲ್ಲಿ ರಾಜಾಧ್ಯಕ್ಷ
ಎಂಬುವ ಪರ್ಸನೆಲ್ ಮ್ಯಾನೇಜರ ಆಗಿದ್ದ ಅವನು ಕಂಪನಿಯ ಪ್ರತಿಪಾದಿಸಿದ
ನಿಯಮಕ್ಕೆ ಅನುಕೂಲವಾಗಿದ್ದವನು ಕೇವಲ ನಿಯಮಕ್ಕೆ ತೊಂದರೆ ಕೊಡಬಾರ
ದೆಂಬ ಭಾವನೆಯವನು ಅವನು. ಬಬ್ರು "ರಾಗಿ" ಎಂಬುವವನಿಗೆ ಈ ಶಾಕಾಹಾರಿ ~~ಜನರಿದ್ದ~~
ಜನರಿದ್ದ D4 ಕಟ್ಟಡದಲ್ಲಿ 3ನೇ ಮಾಳಿಗೆಯಲ್ಲಿ ಒಂದು ಮನೆಯನ್ನು ಅಲಾಟ್
ಮಾಡಿದ - 3ನೇ ಅಂತಸ್ತಿನ ಮನೆಗಳಿಗೆ 4(ನಾಲ್ಕು) ರೂ. ಬಾಡಿಗೆ ಹೆಚ್ಚು ರಾಗಿಗೆ ಈ ವಿಷ
ಯ ತಿಳಿಯುತ್ತಲೆ- ಮೇನೇಜಮೆಂಟಿಗೆ ಬರೆದು ಸಾಧ್ಯವಾದರೆ ನನಗೆ ನೆಲಮಾಳಿಗೆ
ಯ ಮೇಲಿನ ಮನೆಯನ್ನು ಅಲಾಟ್ ಮಾಡಬೇಕೆಂದು ಕೇಳಿಕೊಂಡಿದ್ದನು. ಈ ಅಲ್ಲ
ಕ್ಷೀರಸಾಗರ ಅವರ (Asst) ಆಫೀಸರರ ಕೈಗೆ ಸಿಕ್ಕಿತು. ಅಷ್ಟರಾತ್ರಿಗೆ ರಾಗಿಯವರಿಗೆ ಯಾರು
ಹೇಳಿದ್ದರೆಂದು ಕಾಣುತ್ತದೆ ಮೇಲಿನ ಅಂತಸ್ತಿನ ಮೇಲೆ ಗಾಳಿ ಬೆಳಕು ಚೆನ್ನಾಗಿರುತ್ತದೆಂ
ದು ಅದು ತಿಳಿಯುತ್ತಲೇ ರಾಗಿ ಮತ್ತೊಂದು ಅರ್ಜಿಯನ್ನು ಬರೆದುಕೊಂಡು ಕೊಟ್ಟ
ಅಲಾಟ ಆದದ್ದೇ ಇರಲಿ ಎಂದು ಹೇಳುವ ಅರ್ಜಿಯನ್ನು ತಂದನು ಆಗ ಕ್ಷೀರಸಾಗ
ರರ Asst ಆಫೀಸರ ಅವರ ಹೆಸರು ಪ್ರೇಮಾ ಎಂದು ಅವರು ಜೈನರು ಶುದ್ಧ ಶಾಕಾಹಾ
ರಿಗಳು. ಈ ಮೊದಲಿಗೆ ನಾವು, ಎರಡು ಮೂರು ಜನ ಸೇರಿ ಈ ಶಾಕಾಹಾರಿ ಕಟ್ಟಡದಲ್ಲಿ
ಮಾಂಸಾಹಾರಿಯವರಿಗೆ ಹೇಗೆ ಜಾಗ ಕೊಡಲಾಯಿತು ಎಂದು ಕೇಳಿಯೂ ಆಗಿತ್ತು ಆಮೇ
ಅವರ ಮನಕ್ಕೆ ತಾಕಿದ್ದವು. ರಾಗಿಯ ಎರಡನೆ ಅರ್ಜಿಯನ್ನು ನೋಡಿ ರಾಗಿಯವರಿಗೆ
ಹೇಳಿದ್ದರು ಇದು ಶಾಕಾಹಾರಿಗಳಿಗಾಗಿ ಮೀಸಲಿಟ್ಟ ಕಟ್ಟಡ ಕಣ್ರೀ ನಿಮಗೆ ಅಲಾಟವಾಗಿದೆ
ಕ್ಷಮಿಸಿ ಎಂದು ಹೇಳಿ ಆ ಅಲಾಟಮೆಂಟ್ ರದ್ದು ಪಡಿಸಿ ಅದೇ ಮನೆಯನ್ನೆ ನನಗೆ ಕೊಟ್ಟರು
ಅದು D4/12 ಅದೇ ಮನೆಯಲ್ಲಿಯೇ 30 ವರ್ಷಗಳಕಾಲ ನಾವು ವಾಸವಾಗಿದ್ದೆವು.

ಈ ಪ್ರಸಂಗ ಅಲಾಟ್ ಆದಮೇಲೆ ಮತ್ತೆ ಮುಖ ಬಂದು ಟೀಕಿಸದೆ ಇರಲಿಲ್ಲ!

ಹೊಸಮನೆಗೆ ಸುಣ್ಣ ಬಣ್ಣ

ಮನೆಯವರನ್ನೆಲ್ಲ ಕಾಡುತ್ತಿರುವ ಕೊರಗುವ ಅವಸರವನ್ನು ನಾವು ಮಾಡಿಲ್ಲ. ಇಷ್ಟರಾತ್ರಿಗೆ ಪ್ರಿಯದರ್ಶಿನಿಯಲ್ಲಿ ಕೆಲಸಗಳೆಲ್ಲ ಮುಗಿದಿತ್ತು ಅದಕ್ಕಾಗಿ ಜನರ ಪರಿಚಯವಾಯಿತು, Construction Dept.ನಲ್ಲಿ ಪರಿಚಯವಾದ ಕಾರ್ಮಿಕರ ಎಂಜಿನಿಯರ್‌ಗಳಿದ್ದರು ಅವರ ಜೊತೆ ನಮ್ಮ ಕಾಲೋನಿ ಕೆಲಸವನ್ನು ಒಂದು ಕಟ್ಟಡದಲ್ಲಿದ್ದ ಹಲವಾರು ಕಾರ್ಮಿಕರ ಪರಿಚಯವೂ ಹೊಸದಾಗಿ ಮಾಡಿಕೊಂಡೆವು.- ಅವರಿಗೆ ನನಗೆ ಹೊಸಮನೆ ಆಗುತ್ತಿರುವುದು ಅದಕ್ಕೆ ಸುಣ್ಣಬಣ್ಣ ಮಾಡಿಕೊಡಲು ಕೇಳಿಕೊಂಡೆ, ಇಂಥ ಕೆಲಸಗಳನ್ನು ತಾವುಗಳು ತಮ್ಮ ಖರ್ಚಿನಲ್ಲಿಯೇ ಮಾಡಿಕೊಡುವುದು ವಾಡಿಕೆ. ಅವರ ಒಂದೇ ಮಾತಿನಲ್ಲಿ ಹೇಳಿದರ ಅರ್ಥ ಸುಣ್ಣ-ಬಣ್ಣವೇಕೆ. ಏನೇನು ಬೇಕೆಂಬುದನ್ನು ಒಂದು ಪಟ್ಟಿ ಮಾಡಿದರೆ ಎಲ್ಲವನ್ನೂ ಮಾಡಿಸುತ್ತೇವೆಂದರು.

ಆ ರೂಮಿಗೆ (ಎರಡನೇ ಕೋಣೆ) Cooking Platform ಇರಲಿಲ್ಲ ಮುಂದಿನ ರೂಮಿನಲ್ಲಿ ಒಂದು wooden Partition ಹಾಕಿದರೆ ಅಷ್ಟೇ Privacy ಸಿಗುವುದೆಂಬ ವಿಚಾರ ಬಂತು, Cooking Platform ಮೇಲೆ ಬಿಳಿಯ tiles ಹಾಕಿದರೆ ಅಂದ ಹೆಚ್ಚಾಗುವುದರಿಂದ ಅದನ್ನು ಪಟ್ಟಿಯಲ್ಲಿ- ಕಂಪನಿ ಖರ್ಚಿನಿಂದ ಆಗದಿದ್ದರೆ, ಟೈಲ್‌ಗಳನ್ನು ನಾವೇ ತಂದು ಕೊಟ್ಟರಾಯಿತು ಎಂದು ಅಂದುಕೊಂಡಿದ್ದೆ. ನಾವು ಪಟ್ಟಿಯಲ್ಲಿ ಹೇಳಿದ ಎಲ್ಲವನ್ನೂ ಕಾರ್ಮಿಕರು ಸ್ವತಃ ಮುತುವರ್ಜಿ ವಹಿಸಿ ಸ್ವಚ್ಛ ಸ್ವಚ್ಛವಾಗಿ ಕೆಲಸ ಮಾಡಿಸಿಕೊಟ್ಟರು

ಮನೆ ಅಂದವಾಯಿತು, ಮನೆಯವರೆಲ್ಲ, ಮುಖ್ಯವಾಗಿ ಮಗ ಬೇಗ ಬರಬೇಕೆಂಬ ಆತುರ ಪ್ರಾರಂಭವಾಯಿತು ಈ ಆತುರ ಮೊದಲಿರಲಿಲ್ಲ ಈಗ ಅದು ಇಮ್ಮಡಿಯಾಯ್ತು, ಬಹುಶಃ ಈಗ ಮನೆ ಚೆನ್ನಾಗಿ ಆಗಿದೆ ಅಲ್ಲಿಗೆ "ಹೊರಟು ಹೋಗು" ಎಂಬುವರಾರೂ ಇಲ್ಲವೆಂಬುದೇ ಅಡಗಿರುವ ಮಾನಸಿಕ ಸಮಾಧಾನವೇ ಕಾರಣವಾಗಿತ್ತೋ ಏನೋ ---

ಮನೆಯವರನ್ನೆಲ್ಲ ನಾವೇ ಹೋಗಿ ಕರೆದುಕೊಂಡು ಬಂದೆವೋ ತಂದೆಯವರೇ ಬಂದು ಕಳಿಸಿಕೊಟ್ಟರೋ ಎಂಬುದು ನಿಖರವಾಗಿ ನೆನಪಿಲ್ಲ ಬಹುಶಃ ತಂದೆಯವರೇ ಕರೆದುಕೊಂಡು ಬಂದರೆಂದು ಕಾಣುತ್ತದೆ_?

ಮನೆಯವಳು ಬಹುಶಃ ಇನ್ನು ಕೆಲ ತಿಂಗಳುಗಳಲ್ಲಿಯೇ ಬಾಣಂತಿ ಆಗುವವಳಿದ್ದಾಳೆಂದು ಖಾತ್ರಿಯಾಗಿತ್ತು ಈ ಸಂದರ್ಭದಲ್ಲಿ ಅವಳು ಬಾಣಂತಿಯಾಗುವುದನ್ನು ಲಕ್ಷ್ಯದಲ್ಲಿಟ್ಟುಕೊಂಡೂ ಹಾಗೂ ಆಯಿಯವರ ಸೂಚನೆಯ ಮೇರೆಗೆ ಒಂದು ತಾಮ್ರದ ಬಂಬು ಖರೀದಿ ಮಾಡಿರು ಆಸೆಯಾಯಿತು, ಅದಕ್ಕೆ 42/- ರೂ. ಕೊಟ್ಟಿದೆವು ಎರಡು ಕೊಡ ನೀರು ಹಿಡಿಯುವಷ್ಟು ಇತ್ತು ಆ ಬಂಬು.

ನನಗೆ ಸ್ವಂತ ಮನೆಯ ಕಟ್ಟಡದ ವಿನ್ಯಾಸ ನನಗೆ ಗೊತ್ತಿಲ್ಲದ್ದು [illegible] ಕಟ್ಟಡದ [illegible] [illegible] ಮನೆಗಳು ಕೆಲ ಕಟ್ಟಡಗಳು [illegible] [illegible] [illegible] [illegible] [illegible] [illegible] [illegible] ಮನೆಗಳನ್ನು [illegible] [illegible] [illegible] [illegible] [illegible] [illegible] [illegible] [illegible] ಕಟ್ಟಡಗಳಿಗೆ [illegible] [illegible] [illegible] [illegible] [illegible] ಕಟ್ಟಡ ಕಟ್ಟಡಗಳಿಗೆ [illegible] [illegible] [illegible] [illegible]

ಆಗಿನ ಕಾಲಕ್ಕೆ, ಪ್ರತಿ ತಿಂಗಳಿಗೆ ೮ ಮನೆಗಳ ಬಾಡಿಗೆಗಳು ಮೂರು ಸ್ಥಾನಗಳ
ಹಣವು ಸಿಕ್ಕುತ್ತಿದ್ದವು ವಿಶ್ವಾಸದಿಂದ ಹಾಗೆ ನಿಯಮಿತವಾಗಿಯೇ ಇದ್ದವು
ಕೆಲವು ಬಾಡಿಗೆದಾರರು ಪ್ರತಿ ತಿಂಗಳಿಗೆ ಒಂದೆಡೆ ಎಲ್ಲ ಕೊಡುತ್ತಿದ್ದರು.

ನನಗೆ ಮನೆ ಕೊಟ್ಟಾಗ ನನ್ನ ಅಕ್ಕಭಾವನವರ (ನನ್ನ ಸೇವೆಗೆ ...) ಹೆಸರು ಹೇಳುತ್ತಿದ್ದ ಬಾಡಿಗೆದಾರರು (2) T.M. Shah (3) ಗೆಟ್ಟಿ ಗಲಿ, S.N. Shah – ಬಿಲ್ಡರ್ (1) R.K. Shah ಡಿಪ್ಲೋ, ಪಿಂಪ್ರ್ಯರ (ಸ್ವಾಮಿ) ಇವರೆಲ್ಲರು ಮೊದಲಿನಿಂದ ಇರುವವರು - ಅದು ನಮಗೆ ಬಹಳ ಅನುಕೂಲ, ಇಲ್ಲವಾದರೆ ಪೊಲೀಸ್ ಕೋರ್ಟಿನವರಿಗೆ ಹೇಳಿದರು ನಾವು ಇವರನ್ನು ಖಾಲಿ ಮಾಡಿಸಿಕೊಳ್ಳುತ್ತಿದ್ದೆವು

ಇವರು ಕೊನೆವರೆಗೆ ಬಾಡಿಗೆ ... ಸಂಬಂಧಿಕರಾಗಿ ... ಗಳು ಆಗುತ್ತಲೇ ಇರುತ್ತಿದ್ದವು

ಪಿಂಪ್ರ್ಯರ್ (ಸ್ವಾಮಿ) ಎಂಬುವರು ತಮಿಳರು ಪಿಂಪ್ರ್ಯರಾಗಿದ್ದು ಸ್ಮಾರ್ತ ಬ್ರಾಹ್ಮಣರಾಗಿದ್ದರು ಮನೆಯೊಡತಿಯ ಹೆಸರು ಕಮಲಮ್ಮ ಎಂದು, ತಮಿಳರಾಗಿದ್ದರೂ ಬ್ರಾಹ್ಮಣರಾಗಿದ್ದರಿಂದಲೂ ಸಂಸ್ಕಾರ ಸಂಸ್ಕೃತಿ ಹೊಂದುತ್ತಿದ್ದಂತೆ ನಾವು ಹತ್ತಿರದವರಾಗಿದ್ದೆವು, ತಿಂಡಿ ಊಟ exchange ಆಗುತ್ತಿದ್ದವು ಅವರಿಗೆ ಎರಡೇ ಮಕ್ಕಳು ಒಂದು ಗಂಡು, ಒಂದು ಹೆಣ್ಣು ಆ ಮಕ್ಕಳು ನನ್ನ ಮಕ್ಕಳ ವಾರಿಗೆಯವರಾಗಿದ್ದರಿಂದ ಸಹಜವಾದ ಸ್ನೇಹ ಮಕ್ಕಳಲ್ಲಿ ಬೆಳೆದಿತ್ತು

ಆ ಬದಿಯಲ್ಲಿ ಗವಿಯಪ್ಪ ಎಂಬುವರು ಅಕ್ಕಲಕೋಟೆಯವರು, ಅಂತೂ ಮೊದಲು ಮನೆಯಲ್ಲಿ ಕಮಲ ಚೆನ್ನಾಗಿತ್ತು ಇದ್ದ ಆಸ್ತಿಯನ್ನು ಮಾರಿಕೊಂಡು ಬಂದಿದ್ದರು ಈ ರೀತಿಯಾಗಿ ಅವರು ಬಳ್ಳಾರಿ ಎಂದು ಹೇಳಲಡಿಯಿಲ್ಲ ಬಹುಶಃ ಊರಲ್ಲಿ ತಂದೆ, ಬಡ್ಡಿ ವ್ಯವಹಾರ ಮಾಡುತ್ತಿದ್ದರೇನೋ ಆ ಸ್ವಭಾವ ಮಗನಿಗೂ ಬಂದಿತ್ತು ಸಹಜವಾಗಿ ಮದುವೆಯಾದ ಹೊಸದರಲ್ಲೂ ಸೇರಿಕೊಂಡಿತ್ತು ಅವರು ನಮಗೆ ಪ್ರಾರಂಭವಾದಾಗ ಬ್ರಹ್ಮಚಾರಿಯಾಗಿದ್ದು ಮನೆತನದ ಖರ್ಚಿನ ಜವಾಬ್ದಾರಿಯಿಲ್ಲದೇ ಇರಲಿಲ್ಲ ಊರಿಂದ ಕಳಿಸಿಬಂದರೆ ಅದನ್ನೇ ದಿನಗಳ್ಳೇ ಇಟ್ಟುಕೊಂಡು ಬದುಕುವ ಸ್ವಭಾವ ಸ್ವಾಭಾವಿಕವಾಗಿಯೇ ಮೊದಲೇ ಹುದುಗಿದ್ದ ಲೋಭಿಯಾದ ಸ್ವಭಾವ ಇನ್ನು ಜಾಗೃತವಾಗಿತ್ತು ಮದುವೆಯಾಗಿ ಪತ್ನಿ ಇವರೊಡನೆ ಇರಲು ಬಂದನಂತರವಂತೂ ಬಡ್ಡಿ ವ್ಯವಹಾರ ಹೆಚ್ಚು ಆಯ್ತೇನೋ ತ್ತು- ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರಿಗೆ ಅಡಚಣೆ ಆಗುತ್ತಿರಲಿಲ್ಲ ಮನೆ ಖರ್ಚಿನ ವೈಯಕ್ತಿಕ ಜೀವನಗಳಿಂದಾಗಿ ಬರುತ್ತಿದ್ದ ಸಂಬಳ ಸಾಲದೇ ಹೋಗುತ್ತಿದ್ದಾಗ, ಬದುಕಲು ಬಂದ್ದವಾರಿ "ಸಾಲ" ಈ ಗವಿ ದಂಪತಿಗಳು ಅದನ್ನು ಸಾಧಿಸಿಕೊಂಡಿದ್ದರು ಕೊಟ್ಟಸಾಲವನ್ನು ವಸೂಲು ಮಾಡುವದಕ್ಕೆ ಕೆಲಸಗಾರರಲ್ಲಿಂತು ಕೆಲವರನ್ನು (ತನ್ನ ಹಿಂಬಾಲಕರು ಆದವರನ್ನು) ಸಾಕಿಕೊಂಡಿದ್ದರು ಇಂದಿಗೂ ಅವರ ಮನೆ ಖರ್ಚು ಮತ್ತು ಇನ್ನು ಇತರೆ ಖರ್ಚು ಈ ಬಡ್ಡಿಯಿಂದಲೇ ನಡೆಯುತ್ತಿತ್ತೆಂದು (ಅಂದಾಜು (?)) ಅಂತೂ ಸಾಕಷ್ಟು ಗಳಿಸಿಕೊಂಡಿದ್ದರು ನನಗೆ ಏನಾದರೂ ಅಡಚಣೆಯಾಗಿ ಅವರು ನಮ್ಮ ಸಮಯಕ್ಕೆ ಸಹಾಯಕ್ಕೆ ಬರುತ್ತಿದ್ದರು, ನಮ್ಮ ಬಟ್ಟೆನ್ನು ಖರ್ಚಿಗೂ ತಾಳೆ ಮೇಳವು ಆಗುತ್ತಿರಲಿಲ್ಲ ಕೊರತೆ ಕೊರೆಯುತ್ತಲೇ ಇರುತ್ತಿತ್ತು, ಗವಿಯವರೂ ನಮ್ಮಿಂದ ಬಡ್ಡಿ ತೆಗೆದುಕೊಳ್ಳುತ್ತಿರಲಿಲ್ಲ ಬೇಕೆಂದಾಗ ಹಣ ನೀಡುತ್ತಿದ್ದರು ಅವರಿಗೆ ಬೇಕೆಂದಾಗ ನಾವು ಮರಳಿ ಕೊಡುತ್ತಿದ್ದೆವು, ಶ್ರೀ ಗವಿಯವರ ಸೇವೆ ಕಥೆಗಳ ಮುಗಿದಿರಲಿಲ್ಲ, ನಮ್ಮ ಕಂಪನಿಯ ಬಾಜುಕೆ ನವ ಕೆಲ ನಮ್ಮ ಕರೆದು ನಿಲ್ಯಾನಂದ ಕೋ. ಹಾಸಿಂಗ ಸೊಸೈಟಿಯಾದರು ಅದರಲ್ಲಿ ಒಂದು ಮನೆ ಖರಿ

ದಿ

ಇತ್ತು

ಗಂಡಿಯವರು ಅಲ್ಲ ಪ್ರೀಂವರು ಅದು ಹತ್ತಿರವೇ, ಮನೆ ಬೇರೆ~~ಬೇರೆ~~ಯಾಗಿದರೂ ಕೌ
ಸಂಬಂಧವನ್ನು ಹಾಗೆ ಉಳಿಸಿಕೊಂಡು ಬಂದಿವೆ

ಈ ರೀತಿಯಾಗಿ ನಮ್ಮ ಕಟ್ಟಡದಲ್ಲಿ ನಮ್ಮೊಡನೆ ಕೌಟುಂಬಿಕ ಸಂಬಂಧ ಕೆಲವೆ ರೊಡನೆ ಚೆನ್ನಾಗಿಯೇ ಇತ್ತು, ಅದು ಹಾಗೆಯೇ ಉಳಿಯಿತು ಇವತ್ತಿಗೂ ಕೆಲವರೊಡನೆ ಆ ಸಂಬಂಧ ಉಳಿದು ಬಂದಿದೆ, ಆದರೆ ನನ್ನ ಸ್ವಂತ ಹವ್ಯಾಸಕ್ಕೆ ಸ್ಪಂದಿಸುವಂಥ ಸ್ನೇಹಿತರು ಮಾತ್ರ ನಮ್ಮ ಕಟ್ಟಡದಲ್ಲಿ ~~ಮಾತ್ರ~~ ದುರ್ಲಭವಾಗಿದ್ದರು.